ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 8 ಸೋಮವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 83 | ಪುಟಗಳು: 10

₹4

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮುಡಾದಲ್ಲಿ ಹಗರಣ ಮಾಮೂಲಿ...

• ಶಾಸಕ ಎಸ್.ಟಿ.ಸೋಮಶೇಖರ್ ಬೇಸರ • ನಾನು ಉಸ್ತುವಾರಿ ಸಚಿವನಾಗಿದ್ದಾಗಲೇ ಇದು ಗೊತ್ತಿತ್ತು • ಶಾಸಕರ ಕಡತಗಳಿಗೆ ಚರ್ಚೆಯಿಲ್ಲದೇ ಅನುಮೋದನೆ • ಬೇರೆ ಜಿಲ್ಲೆ ಎಂಎಲ್‌ಸಿಗಳು ಮೈಸೂರು ವಿಳಾಸ ಕೊಟ್ಟು ಮುಡಾ ಸದಸ್ಯರಾಗುತ್ತಾರೆ • ಅಂದಿನ ಆಯುಕ್ತರನ್ನು ಬದಲಾಯಿಸಲು ಯತ್ನಿಸಿ, ವಿಫಲನಾದೆ • ವ್ಯವಸ್ಥೆ ಸರಿಪಡಿಸುವ ನನ್ನ ಪ್ರಯತ್ನ ಸಫಲವಾಗಿಲ್ಲ

ಮೈಸೂರು, ಜು.7(ಎಸ್‌ಬಿಡಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಹಗರಣ ಮಾಮೂಲಿಯಾಗಿ ಬಿಟ್ಟಿದೆ ಎಂದು ಮೈಸೂರು ಜಿಲ್ಲೆಯ ಮಾಜಿ ಉಸ್ತುವಾರಿ ಸಚಿವರೂ ಆದ ಶಾಸಕ ಎಸ್.ಟಿ.ಸೋಮಶೇಖರ್ ಬೇಸರ ವ್ಯಕ್ತಪಡಿಸಿದರು.



ಖಾಸಗಿ ಕಾರ್ಯಕ್ರಮಕ್ಕಾಗಿ ಭಾನುವಾರ ಮೈಸೂರಿಗೆ ಆಗಮಿಸಿದ್ದ ಅವರು, ಸುದ್ದಿಗಾರರೊಂದಿಗೆ ಮಾತನಾಡಿ, ತಾವು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗಲೇ ಮುಡಾದಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರ ಗಮನಕ್ಕೆ ಬಂದಿತ್ತು. ಅದನ್ನು ಸರಿಪಡಿಸಲು ಪ್ರಯತ್ನಿಸಲಾಯಿತಾದರೂ, ಸಾಧ್ಯವಾಗಲಿಲ್ಲ ಎಂದು ತಮ್ಮ ಅಂದಿನ ಅಸಹಾಯಕತೆಯನ್ನು ಹೊರಹಾಕಿದರು.

ಮುಡಾ ಇರುವುದು ಜನರ ಅಭಿವೃದ್ಧಿಗೋಸ್ಕರ. ಆದರೆ ಅಲ್ಲಿ ಆ ಕೆಲಸ ನಡೆಯುತ್ತಿಲ್ಲ. ಅದನ್ನು ಹೊರತುಪಡಿಸಿ ಎಲ್ಲವೂ ನಡೆಯುತ್ತಿದೆ. ಶೇ.50:50 ಅನುಪಾತದಡಿ ನಿವೇಶನಗಳನ್ನು ನೀಡುವ ಮುನ್ನ ಮುಡಾ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಬೇಕು. ಆದರೆ ಅಂದಿನ ಮುಡಾ ಆಯುಕ್ತರು ಅದನ್ನು ಪಾಲಿಸಲಿಲ್ಲ. ಅದರ ಬಗ್ಗೆ ಜಿಲ್ಲಾಧಿಕಾರಿಗಳೂ ಕೂಡ ಪತ್ರ ಬರೆದಿದ್ದರು. ಮುಡಾ ಆಯುಕ್ತರನ್ನು ಬದಲಿಸಬೇಕೆಂದು ನಾನು ಸರ್ಕಾರವನ್ನು ಕೇಳಿದ್ದೆ. ಆದರೆ ಅವರು ಜಾತಿ ಪ್ರಭಾವದಿಂದ ವರ್ಗಾವಣೆಯಾಗದೇ ಇಲ್ಲೇ ಉಳಿದುಕೊಂಡರು ಎಂದು ಸೋಮಶೇಖರ್ ಹೇಳಿದರು.

ಮುಡಾದಲ್ಲಿ ಶಾಸಕರದ್ದೇ ಕಾರುಬಾರಾಗಿದೆ. ಮುಡಾ ಸದಸ್ಯರಾಗಬೇಕೆಂಬ ಕಾರಣಕ್ಕಾಗಿಯೇ ಬೇರೆ ಜಿಲ್ಲೆಗಳಲ್ಲಿ ವಾಸವಾಗಿರುವ ವಿಧಾನ ಪರಿಷತ್ ಸದಸ್ಯರುಗಳು ಮೈಸೂರಿನ ವಾಸಸ್ಥಳವನ್ನು ಕೊಟ್ಟು ಮುಡಾ ಸದಸ್ಯರಾಗುತ್ತಿದ್ದರು. ಮುಡಾ ಸಭೆಗಳಲ್ಲಿ ಶಾಸಕರ ಲಾಬಿ ಯಾವ ಮಟ್ಟಕ್ಕೆ ಇದೆ ಎಂದರೆ ಅವರ ಕಡತಗಳೇ ಹೆಚ್ಚಾಗಿ ಚರ್ಚೆಗೆ ಬರುತ್ತಿದ್ದವು. ವಿಪರ್ಯಾಸವೆಂದರೆ ಸಭೆಯಲ್ಲಿ ಚರ್ಚೆಯನ್ನೇ ಮಾಡದೇ ಶಾಸಕರ ಕಡತಗಳು ಅನುಮೋದನೆಗೊಳ್ಳುತ್ತಿದ್ದವು. ಕೆಲವು ಕಡತಗಳಲ್ಲಿನ ವಿವರಗಳೂ ಕೂಡ ಸಭೆಯಲ್ಲಿದ್ದ ಇತರರಿಗೆ ಗೊತ್ತಾಗುತ್ತಿರಲಿಲ್ಲ. ಅದನ್ನು ತಿಳಿದುಕೊಳ್ಳುವ ಆಸಕ್ತಿಯನ್ನು ಯಾರೂ ತಾಳುತ್ತಿರಲಿಲ್ಲ. ಇಷ್ಟರ ಮಟ್ಟಿಗೆ ಮುಡಾ ಸಭೆಗಳಲ್ಲಿ ಶಾಸಕರ ಲಾಬಿ ನಡೆಯುತ್ತಿದೆ ಎಂದು ವಿವರಿಸಿದರು. ಮುಡಾದಲ್ಲಿ ನಡೆಯುತ್ತಿದ್ದ ಇಂತಹ ಲಾಬಿ ಹಾಗೂ ಭ್ರಷ್ಟಾಚಾರವನ್ನು ತಡೆಯಬೇಕು ಎಂಬ

● 6ನೇ ಪುಟಕ್ಕೆ



ಎಂಎಲ್‌ಎ, ಎಂಎಲ್‌ಸಿಗಳ ಮುಡಾ ಸದಸ್ಯತ್ವ ರದ್ಧತಿಗೆ ಮುಖ್ಯಮಂತ್ರಿಗೆ ಮನವಿ

ಮೈಸೂರು, ಜು.7(ಎಂಟಿವೈ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಶಾಸಕರು, ವಿಧಾನಪರಿಷತ್ ಸದಸ್ಯರ ನೇಮಕ ರದ್ದು ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಮನವಿ ಮಾಡಿರುವುದಾಗಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ತಿಳಿಸಿದ್ದಾರೆ.



ಈ ಹಿಂದೆ ಮುಡಾದಲ್ಲಿ ಮೂವರು ಮಾತ್ರ ಸದಸ್ಯರಿದ್ದರು. ಆದರೆ ಈಗ ಶಾಸಕರು, ವಿಧಾನ ಪರಿಷತ್ ಸದಸ್ಯರು, ಕೆಲ ನಾಮನಿರ್ದೇಶಿತ ಸದಸ್ಯರನ್ನು ಮುಡಾ ಸದಸ್ಯರಾಗಿ ನೇಮಕ ಮಾಡಲಾಗುತ್ತಿದೆ. ಇದರಿಂದಲೇ ಕೆಲ ಗೊಂದಲ ನಡೆಯುತ್ತಿದೆ ಎಂಬ ಆರೋಪ ಕೇಳಿ ಬಂದಿದೆ. ಈ ಹಿನ್ನೆಲೆಯಲ್ಲಿ ಮುಡಾದಲ್ಲಿ ಈ ಹಿಂದೆ ಇದ್ದ ಪದ್ಧತಿಯನ್ನೇ ಮುಂದುವರೆಸುವಂತೆ ಅಭಿಪ್ರಾಯ ಕೇಳಿ ಬಂದಿರುವುದರಿಂದ ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿದ್ದೇನೆ. ಅದಕ್ಕೆ ಪೂರಕವಾಗಿ ಸ್ಪಂದಿಸುವುದಾಗಿ ಸಿಎಂ ತಿಳಿಸಿದ್ದಾರೆ ಎಂದರು.

ರಾಜ್ಯದಲ್ಲಿ ಡೆಂಗ್ಯೂ ಪ್ರಕರಣಗಳ ಹೆಚ್ಚಳ

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮುನ್ನೆಚ್ಚರಿಕಾ ಕ್ರಮ ವಹಿಸಿ

ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಕಟ್ಟುನಿಟ್ಟಿನ ಸೂಚನೆ

ಬೆಂಗಳೂರು, ಜು.7– ರಾಜ್ಯದಲ್ಲಿ ಹೆಚ್ಚಿನ ಡೆಂಗ್ಯೂ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ನಿರ್ದೇಶನ ನೀಡಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಡೆಂಗ್ಯೂ ಹರಡುವಿಕೆ ತಡೆ ಮತ್ತು ಪ್ರಕರಣಗಳನ್ನು ನಿಯಂತ್ರಿಸಲು ಹಲವು ತುರ್ತು ಕ್ರಮಗಳನ್ನು ಸೂಚಿಸಿದ್ದು, ಗ್ರಾಮ ಪಂಚಾಯತಿ ಮಟ್ಟದಲ್ಲಿ ಲೋಪವಾಗದಂತೆ ಅನುಷ್ಠಾನಗೊಳಿಸಬೇಕೆಂದು ಸಚಿವರು ಹೇಳಿದ್ದಾರೆ.



ಮನೆಗಳು, ಅಂಗಡಿ–ಮುಂಗಟ್ಟುಗಳು, ಹೋಟೆಲ್‌ಗಳು, ವಾಣಿಜ್ಯ ಸಂಕೀರ್ಣಗಳು, ಸಾರ್ವಜನಿಕ ಸ್ಥಳಗಳು ಹಾಗೂ ಖಾಲಿ ಜಾಗಗಳಲ್ಲಿ ನೀರು ದೀರ್ಘಕಾಲ ನಿಲ್ಲದಂತೆ ಕ್ರಮ ವಹಿಸಬೇಕು ಮತ್ತು ಆವರಣಗಳು ಸ್ವಚ್ಛವಾಗಿರುವಂತೆ ನೋಡಿಕೊಳ್ಳಬೇಕು. ನಿರುಪಯುಕ್ತ ಮತ್ತು ತ್ಯಾಜ್ಯ ವಸ್ತುಗಳಲ್ಲಿ ಮಳೆ ನೀರು ಸಂಗ್ರಹವಾಗದಂತೆ ಶೀಘ್ರವಾಗಿ ಹಾಗೂ ಸುರಕ್ಷಿತವಾಗಿ ವಿಲೇವಾರಿ ಮಾಡಬೇಕು ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

● 6ನೇ ಪುಟಕ್ಕೆ

ಜಯದೇವ್ ಆಸ್ಪತ್ರೆ ಮಹಿಳಾ ಸಿಬ್ಬಂದಿ ಸಾವು: ಡೆಂಗ್ಯೂ ಶಂಕೆ

ಮೈಸೂರು, ಜು.7(ಎಂಟಿವೈ)– ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯ ಡಾಟಾ ಎಂಟ್ರಿ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದ ಮಹಿಳೆಯೊಬ್ಬರು ಭಾನುವಾರ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು, ಡೆಂಗ್ಯೂಗೆ ಬಲಿಯಾಗಿರುವ ಶಂಕೆ ವ್ಯಕ್ತವಾಗಿದೆ.



ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿ ಕಳೆದ ಕೆಲ ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದ ಜಯದೇವ ಆಸ್ಪತ್ರೆಯ ಲಲಿತಾ(32) ಮೃತಪಟ್ಟವರಾಗಿದ್ದು, ಡೆಂಗ್ಯೂಗೆ ತುತ್ತಾಗಿರುವ ಸಂಶಯ ವ್ಯಕ್ತವಾಗಿದೆ. ತೀವ್ರ ಜ್ವರದಿಂದ ಬಳಲುತ್ತಿದ್ದ ಲಲಿತಾ ಅವರನ್ನು ಕಳೆದ ಸೋಮವಾರ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಪ್ರಾಥಮಿಕ ಪರೀಕ್ಷೆಯಲ್ಲಿ ಡೆಂಗ್ಯೂ ಪಾಸಿಟಿವ್ ಇರುವುದು ದೃಢಪಟ್ಟಿದೆ. ನಂತರದ ದಿನಗಳಲ್ಲಿ ಇದ್ದಕ್ಕಿದ್ದಂತೆ ಪ್ಲೇಟ್‌ಲೆಟ್ಸ್ ಕಡಿಮೆಯಾಗಿದೆ. ಅಲ್ಲದೇ ಬಹು ಅಂಗಾಂಗಗಳ ಕಾರ್ಯವೈಖರಿಯಲ್ಲಿಯೂ ವ್ಯತ್ಯಾಸವಾಗಿದೆ. ಅಂತಿಮವಾಗಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ ಎಂದು ಚಿಕಿತ್ಸೆ ನೀಡಿದ ವೈದ್ಯರು ಖಚಿತಪಡಿಸಿದ್ದಾರೆ

● 6ನೇ ಪುಟಕ್ಕೆ

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವೀಕ್ಷಕರ ನೇಮಕ

ಬೆಂಗಳೂರು, ಜು.7– ವಿವಿಧ ಶೈಕ್ಷಣಿಕ ಕೋರ್ಸ್‌ಗಳ ಪ್ರವೇಶಕ್ಕಾಗಿ ಮತ್ತು ಸರ್ಕಾರಿ ಹುದ್ದೆಗಳ ನೇಮಕಾತಿಗಾಗಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ವೀಕ್ಷಕರನ್ನು ನೇಮಕ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಕ್ರಮ ತೆಗೆದುಕೊಂಡಿದೆ.

ಪರೀಕ್ಷಾ ವೀಕ್ಷಕರಾಗಿ ನೇಮಕ ಮಾಡಲು ಅಗತ್ಯವಿರುವ ಸಿಬ್ಬಂದಿಯನ್ನು ಒದಗಿಸುವಂತೆ ಇದೇ ಜೂನ್ 22ರಂದು ಪ್ರಾಧಿಕಾರವು ಕಾಲೇಜು ಶಿಕ್ಷಣ ಇಲಾಖೆಗೆ ಪತ್ರ ಬರೆದಿತ್ತು. ಪರೀಕ್ಷಾ ವೀಕ್ಷಕರಾಗಿ ನೇಮಕ ಮಾಡಲು ಆಯ್ಕೆ ಮಾಡಲಾದ ಸಿಬ್ಬಂದಿಯ ಪಟ್ಟಿಯನ್ನು ಇಲಾಖೆಯು ಪ್ರಾಧಿಕಾರಕ್ಕೆ ನೀಡಿದೆ.

ಈ ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸುವುದು ಕಷ್ಟವಾಗಿದೆ. ಅಕ್ರಮವನ್ನು ತಪ್ಪಿಸಿ, ನ್ಯಾಯಯುತವಾಗಿ ಪರೀಕ್ಷೆ ನಡೆಸಲು ಹಲವು ಕ್ರಮಗಳನ್ನು ರೂಪಿಸಲಾಗುತ್ತಿದೆ. ಪರೀಕ್ಷಾ ವೀಕ್ಷಕರ ನೇಮಕವೂ ಅಂತಹ ಕ್ರಮಗಳಲ್ಲಿ ಒಂದು. ಜುಲೈ ತಿಂಗಳಲ್ಲಿ ನಡೆಯುವ ಪರೀಕ್ಷೆಗಳಿಗೆ ನೇಮಕ ಮಾಡಲು, ಪದವಿ ಕಾಲೇಜುಗಳ 60 ಹಿರಿಯ ಉಪನ್ಯಾಸಕರ ಅಗತ್ಯವಿದೆ ಎಂದು ಪ್ರಾಧಿಕಾರವು ಕೋರಿತ್ತು. ಪರೀಕ್ಷಾ ವೀಕ್ಷಕರಾಗಿ ನೇಮಕವಾದ ಉಪನ್ಯಾಸಕರ ಸ್ವ–ಜಿಲ್ಲೆ ಮತ್ತು ಕಾರ್ಯ ನಿರ್ವಹಿಸುತ್ತಿರುವ ಜಿಲ್ಲೆಗಳನ್ನು ಹೊರತುಪಡಿಸಿ ಬೇರೆ ಜಿಲ್ಲೆಗಳಲ್ಲಿ ನಿಯೋಜನೆ ಮಾಡಲಾಗುತ್ತದೆ ಎಂದು ಪ್ರಾಧಿಕಾರವು ಸ್ಪಷ್ಟಪಡಿಸಿದೆ.

ಕೇಂದ್ರದಿಂದ ಅಕ್ಕಿ ಕೊಟ್ಟರೂ ಖರೀದಿಸಲು ರಾಜ್ಯ ಸರ್ಕಾರದ ಬಳಿ ದುಡ್ಡಿಲ್ಲ

ಹುಬ್ಬಳ್ಳಿ, ಜು.7– ಕೇಂದ್ರ ಸರ್ಕಾರ ಕಡಿಮೆ ಬೆಲೆಗೆ ಅಕ್ಕಿ ಕೊಡಲು ರೆಡಿಯಿದೆ. ಆದರೆ ಅಕ್ಕಿ ಖರೀದಿಸಲು ರಾಜ್ಯ ಸರ್ಕಾರದ ಬಳಿ ದುಡ್ಡಿಲ್ಲ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರು ಸಿಎಂ ಸಿದ್ದರಾಮಯ್ಯ ಅವರಿಗೆ ತಿರುಗೇಟು ನೀಡಿದ್ದಾರೆ. ಭಾರತ್ ಅಕ್ಕಿ ನಿಲ್ಲಿಸಿದರೆ ಪ್ರತಿಭಟನೆ ನಡೆಸುವುದಾಗಿ ಸಿಎಂ ಸಿದ್ದರಾಮಯ್ಯ ನೀಡಿದ್ದ ಹೇಳಿಕೆಗೆ ಹುಬ್ಬಳ್ಳಿಯಲ್ಲಿ ಪ್ರತಿಕ್ರಿಯಿಸಿದ ಅವರು, ಕಳೆದ ಬಾರಿ ನಮ್ಮ ಬಳಿ ಅಕ್ಕಿ ಬಫರ್ ಸ್ಟಾಕ್‌ಗೆ ಹತ್ತಿರ ಇತ್ತು. ದೇಶಾದ್ಯಂತ ಅಕ್ಕಿ ಸಂಗ್ರಹ ಕಡಿಮೆ ಆಗುತ್ತದೆ ಎಂಬ ಆತಂಕ ಇತ್ತು, ಆದ್ದರಿಂದ ಅಕ್ಕಿ ನಿಲ್ಲಿಸಿದ್ದೆವು. ಈಗ ನಮ್ಮ ಬಳಿ ಅಕ್ಕಿ ಸ್ಟಾಕ್ ಇದೆ. ನಾವು ಅಕ್ಕಿ ಕೊಡುತ್ತಿದ್ದೇವೆ. 34 ರೂ. ಇದ್ದ ಅಕ್ಕಿ ಬೆಲೆ 28 ರೂ.ಗೆ ಇಳಿಕೆಯಾಗಿದೆ. ಹೀಗಾಗಿ ಸಿದ್ದರಾಮಯ್ಯ ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಬಿಡಬೇಕು ಎಂದು ಕುಟುಕಿದ್ದಾರೆ.



ಪ್ರಹ್ಲಾದ್ ಜೋಷಿ

ನೀವು 170 ರೂ. ಎಷ್ಟು ಜನರಿಗೆ ಅಕ್ಕಿ ಕೊಟ್ಟಿದ್ದೀರಿ? ಕಳೆದ 2 ತಿಂಗಳಿಂದ ಗೃಹಲಕ್ಷ್ಮಿ ಹಣವೇ ಬಂದಿಲ್ಲ. ವೃದ್ಧಾಪ್ಯ ವೇತನವೂ ಫಲಾನುಭವಿಗಳ ಖಾತೆಗೆ ಜಮೆ ಆಗಿಲ್ಲ. ಈಗ ಅಕ್ಕಿ ತಗೊಳ್ಳಿ ಅಂದರೆ ಅದಕ್ಕೂ ರಾಜ್ಯ ಸರ್ಕಾರದ ಬಳಿ ದುಡ್ಡಿಲ್ಲ. ಸಿದ್ದರಾಮಯ್ಯ ಏನಾಗುತ್ತಿದೆ ಎಂದು ಅಧಿಕಾರಿಗಳಿಂದ ತಿಳಿದುಕೊಂಡು ಮಾತಾಡಬೇಕು ಎಂದು ಹೇಳಿದ್ದಾರೆ.

ಮೈಸೂರು ಸಾಹಿತ್ಯ ಉತ್ಸವದ 8ನೇ ಆವೃತ್ತಿಗೆ ತೆರೆ

ಪೊಲೀಸರೆಂದರೆ ಭಯವಲ್ಲ, ಭರವಸೆ

ಡಿಐಜಿ ರವಿ ಡಿ.ಚನ್ನಣ್ಣನವರ್ ವಿಶ್ವಾಸಾರ್ಹ ಸಂದೇಶ





ಮೈಸೂರು ಸಾಹಿತ್ಯ ಉತ್ಸವದಲ್ಲಿ 'ಸಮಾಜಪರ ಪೊಲೀಸ್: ಬಲಾಢ್ಯ ಹೃದಯವಂತಿಕೆ' ಕುರಿತು ಫೈರ್ ಅಂಡ್ ಎಮರ್ಜನ್ಸಿ ಸರ್ವಿಸಸ್ ಡಿಐಜಿ ರವಿ ಡಿ.ಚನ್ನಣ್ಣನವರ್ ಮಾತನಾಡಿದರು. ಮತ್ತೊಂದು ಚಿತ್ರದಲ್ಲಿ ಕಾರ್ಯಕ್ರಮದಲ್ಲಿ ಕಿಕ್ಕಿರಿದು ನೆರೆದಿದ್ದ ಸಭಿಕರನ್ನು ಕಾಣಬಹುದು.

ಮೈಸೂರು, ಜು.7(ಎಂಕೆ)– ಪೊಲೀಸರೆಂದರೆ ಭಯವಲ್ಲ, ಭರವಸೆ. ಪೊಲೀಸ್ ಇಲಾಖೆ ಎಂದರೆ, ಕಟ್ಟಕಡೆಯ ವ್ಯಕ್ತಿಯ ಧ್ವನಿಯಾಗಿ ಯಾರಿಗೆ ಯಾರೂ ಇಲ್ಲವೋ ಅವರ ಪರವಾಗಿರುವುದು. ಪೊಲೀಸ್ ಠಾಣೆಗಳು ದೂರು ನಿವಾರಕ ಕೇಂದ್ರಗಳು ಎಂಬ ಫೈರ್ ಅಂಡ್ ಎಮರ್ಜೆನ್ಸಿ ಸರ್ವಿಸಸ್ ಡಿಐಜಿ ರವಿ ಡಿ.ಚನ್ನಣ್ಣನವರ್ ಅವರ ವಿಶ್ವಾಸಾರ್ಹ ಸಂದೇಶಗಳೊಂದಿಗೆ 8ನೇ ಆವೃತ್ತಿಯ ಮೈಸೂರು ಸಾಹಿತ್ಯ ಉತ್ಸವಕ್ಕೆ ತೆರೆಬಿದ್ದಿತು.

ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಮೈಸೂರು ಲಿಟರರಿ ಫೋರಮ್ ಚಾರಿಟೆಬಲ್ ಟ್ರಸ್ಟ್ ಸಹಯೋಗದಲ್ಲಿ ಮೈಸೂರು ಬುಕ್ ಕ್ಲಬ್ ವತಿಯಿಂದ ಆಯೋಜಿಸಿದ್ದ ಎರಡು ದಿನಗಳ ಮೈಸೂರು ಸಾಹಿತ್ಯ ಉತ್ಸವದಲ್ಲಿ 'ಸಮಾಜಪರ ಪೊಲೀಸ್: ಬಲಾಢ್ಯ ಹೃದಯವಂತಿಕೆ' ಕುರಿತು ಮಾತನಾಡಿದ ಅವರು, ಅಧಿಕಾರ ನಮ್ಮ ಬಳಿ ಇದ್ದರೆ ಅದು ಕಲ್ಪವೃಕ್ಷವಾಗಬೇಕೇ ಹೊರತು ಭಸ್ಮಾಸುರನ ಶಕ್ತಿಯಾಗಬಾರದು. ಓರ್ವ ಪೊಲೀಸ್ ಅಧಿಕಾರಿ ಒಂದು ಜಿಲ್ಲೆಯ ಇತಿಹಾಸ ಬದಲಿಸಬಲ್ಲ. ಓರ್ವ ಪಿಎಸ್ಐ ಮನಸ್ಸು ಮಾಡಿದರೆ ಆ ಭಾಗದ ನೊಂದ ವ್ಯಕ್ತಿಗಳ ಕಣ್ಣೀರ ಹೊರೆಸಬಲ್ಲ. ಹಾಗಾಗಿ ಧ್ವನಿ ಇಲ್ಲದವರ ಪರವಾಗಿ ಕೆಲಸ ಮಾಡಬೇಕಿದೆ ಎಂದೇಳುವ ಮೂಲಕ ಸಾಹಿತ್ಯ ಉತ್ಸವಕ್ಕೆ ತೆರೆ ಎಳೆದರು. ಮಾತಿನ ಆರಂಭದಲ್ಲಿ ಮೈಸೂರು ನನಗೆ ವಿದ್ಯಾರ್ಥಿ ದೆಸೆಯಿಂದಲೂ

● 6ನೇ ಪುಟಕ್ಕೆ

ಮೂರು ಬಾರಿ ಡ್ರಾಪ್‌ಔಟ್ ವಿದ್ಯಾರ್ಥಿ ನಾನು...!

"ಎಸ್‌ಎಸ್‌ಎಲ್‌ಸಿಗೆ ಬರೋಷ್ಟರಲ್ಲಿ ಶಾಲೆಯಿಂದ ಮೂರು ಬಾರಿ ಡ್ರಾಪ್‌ಔಟ್ ಆಗಿದ್ದೆ. ಆದರೆ ಮೂವರು ಗುರುಗಳಿಂದ ನನ್ನ ಜೀವನವೇ ಬದಲಾಯಿತು. ಹೊಲದಾಗಿದ್ದ ನನ್ನನ್ನು ಪರೀಕ್ಷೆ ಬರೆಯಲು ಕರೆತಂದ ಗುರುಮಾತೆ ಜಿ.ಜಿ.ಚೌಡಿ, ಗುರುಗಳಾದ ರವೀಂದ್ರ ಪಟ್ಟಣ್, ಆರ್.ಎಸ್.ಪಾಟೀಲ್ ನೆರವಾದರೆ, ನನ್ನೊಳಗೆ ಸ್ವಾಮಿ ವಿವೇಕಾನಂದರು ಹಾಗೂ ಆಧ್ಯಾತ್ಮ ಚಿಂತನೆಯನ್ನು ತುಂಬಿದ್ದು ಸ್ವಾಮಿ ನಿರ್ಭಯಾನಂದ ಸರಸ್ವತಿಯವರು. ಈ ವ್ಯಕ್ತಿಗಳ ಋಣ ತೀರಿಸಲೆಂದೇ ಶಾಲೆಗಳು, ಮಠಗಳಲ್ಲಿ ಪಾಠ ಮಾಡುತ್ತೇನೆ. ಹೃದಯದಿಂದ ಮಾತನಾಡುತ್ತೇನೆ. ಇದರಿಂದ ಕಳೆದುಕೊಳ್ಳುವುದೇನಿದೆ. ನನ್ನ ಜೀವನ ತೆರೆದ ಪುಸ್ತಕ. ಲಾಭಕ್ಕಾಗಿ ಎಂದೂ ಏನನ್ನೂ ಮಾಡಿಲ್ಲ. ಓದಿದ ಸಾಹಿತ್ಯ ಸ್ವಾಮಿ ವಿವೇಕಾನಂದ ಸಾರ–ಸಂಗ್ರಹ. ಅದನ್ನೇ ನಾನು ಸಮಾಜಕ್ಕೆ ಕೊಡುತ್ತಾ ಬಂದಿದ್ದೇನೆ. ಕಾರ್ಯಕ್ಷೇತ್ರ ವ್ಯಾಪ್ತಿಯಲ್ಲೂ ಅನುಸರಿಸಿದ್ದೇನೆ.

– ರವಿ ಡಿ.ಚನ್ನಣ್ಣನವರ್,
ಡಿಐಜಿ, ಫೈರ್ ಅಂಡ್ ಎಮರ್ಜನ್ಸಿ ಸರ್ವಿಸಸ್

ಮುಡಾ ವಿಚಾರದಲ್ಲಿ ವಿಶ್ವನಾಥ್‌ರಿಂದ ಸಿದ್ದು ವಿರುದ್ಧ ದ್ವೇಷದ ರಾಜಕಾರಣ

ಭೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ವಾಗ್ದಾಳಿ

ಮೈಸೂರು, ಜು.7(ಜಿಎ)–ಮುಡಾ ಹಗರಣ ವಿಚಾರದಲ್ಲಿ ಎಚ್.ವಿಶ್ವನಾಥ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ ಎಂದು ಭೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಜಿ.ವಿ.ಸೀತಾರಾಮು ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾ ಹಗರಣ ವಿಚಾರದಲ್ಲಿ ಸಿದ್ದರಾಮಯ್ಯನವರ ವಿರುದ್ಧ ತುಂಬಾ ಕೆಳಮಟ್ಟದಲ್ಲಿ ಮಾತನಾಡುತ್ತಿರುವುದು ಸರಿಯಲ್ಲ. ಅವರ ನಾಯಕತ್ವ, ಯಶಸ್ಸು ಸಹಿಸದೆ ತೇಜೋವಧೆ ಮಾಡುತ್ತಿರುವ ಹುನ್ನಾರ ಇದು. ಕುಟುಂಬದವರನ್ನು ಮಧ್ಯೆ ತಂದು ಮುಜಗರ ಮಾಡುತ್ತಿರುವುದು ಅವರಿಗೆ ಶೋಭೆ ತರವುದಿಲ್ಲ ಎಂದರು.

ಹೆಚ್.ವಿಶ್ವನಾಥ್ ಅವರು ದೇವರಾಜ್ ಅರಸ್, ಸಿದ್ದರಾಮಯ್ಯ, ದೇವೇಗೌಡರಿಗೆ ದ್ರೋಹ ಬಗೆದವರು. ಇದು ಅವರ ರಾಜಕಾರಣದ ನಿಯತ್ತು. ಇದುವರೆಗೂ ಯಾವೊಬ್ಬ ನಾಯಕನನ್ನು ಬೆಳೆಸಿಲ್ಲ. ಕೇವಲ ಪಕ್ಷಾಂತರಿಯಾಗಿ ಸ್ವಂತ ಬೆಳವಣಿಗೆ ಹಾಗೂ ಸ್ವಾರ್ಥ ಮನೋಭಾವಕ್ಕೆ ಹಂಬಲಿಸಿದವರು ಎಂದು ವಾಗ್ದಾಳಿ ನಡೆಸಿದರು.

ರಾಜ್ಯಕ್ಕೆ ಸಿದ್ದರಾಮಯ್ಯನವರಂತಹ ಮುಖ್ಯಮಂತ್ರಿ ಮುಂದೆ ಸಿಗುವುದಿಲ್ಲ. ಅವರೊಬ್ಬ ಅಹಿಂದ ನಾಯಕ. ಅಂತಹವರನ್ನು ಸಿಎಂ ಪದವಿಯಿಂದ ಕೆಳಗಿಳಿಯಿರಿ ಎಂದು ಕೇಳುವುದು ಯಾವ ನೀತಿ ಎಂದು ಪ್ರಶ್ನಿಸಿ, ಅವರನ್ನು ಮೂಲೆಗುಂಪು ಮಾಡುವ ಪ್ರಯತ್ನ ಫಲಿಸುವುದಿಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ಕೋಟೆಹುಂಡಿ ಮಹಾದೇವ, ಜವರಪ್ಪ, ಶಿವಕುಮಾರ್, ಬಿ.ಜವರೇಗೌಡ, ರೇವಣ್ಣ ಉಪಸ್ಥಿತರಿದ್ದರು.

ಡಿ.ಬನುಮಯ್ಯ ಜಯಂತಿ ಆಚರಣೆ



ಮೈಸೂರಿನ ಕುಂಚಿಟಿಗರ ಸಂಘಟನಾ ಸಭಾ ವತಿಯಿಂದ ಡಿ.ಬನುಮಯ್ಯ ಅವರ 164ನೇ ಜಯಂತಿ ಪ್ರಯುಕ್ತ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು.

ಮೈಸೂರು, ಜು.7(ಎಸ್‌ಬಿಡಿ)– ಮೈಸೂರಿನ ಕುಂಚಿಟಿಗರ ಸಂಘಟನಾ ಸಭಾ ವತಿಯಿಂದ ಡಿ.ಬನುಮಯ್ಯ ಅವರ 164ನೇ ಜಯಂತಿ ಆಚರಿಸಲಾಯಿತು.

ನಗರದ ಡಿ.ಬನುಮಯ್ಯ ವಿದ್ಯಾ ಸಂಸ್ಥೆ ಆವರಣದಲ್ಲಿರುವ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು. ಬಳಿಕ ಸರ್ಕಾರಿ ಆಯುರ್ವೇದ ಆಸ್ಪತ್ರೆಯ ರೋಗಿಗಳಿಗೆ ಹಣ್ಣು ವಿತರಿಸುವುದರ ಮೂಲಕ ಡಿ.ಬನುಮಯ್ಯ ಅವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕುಂಚಿಟಿಗರ ಸಂಘಟನಾ ಸಭಾದ ಅಧ್ಯಕ್ಷ ಗಣೇಶ್ ಮಾತನಾಡಿ, ಮೈಸೂರಿನ ಅಭಿವೃದ್ಧಿಯಲ್ಲಿ ಬನುಮಯ್ಯನವರ ಕೊಡುಗೆಯೂ ಇದೆ. ಅವರ ಸೇವೆಯನ್ನು ಸ್ಮರಿಸಿಕೊಳ್ಳುವುದರ ಜೊತೆಗೆ ಅವರ ಆದರ್ಶಗಳನ್ನೂ ಪರಿಪಾಲಿಸಬೇಕಿದೆ ಎಂದರು.

ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್ ಮಾತನಾಡಿ, ದಿವಂಗತ ಬನುಮಯ್ಯನವರು ಬಡ ಕುಟುಂಬದಲ್ಲಿ ಜನಿಸಿದವರು. ಕಷ್ಟವಿದ್ದ ಕಾರಣ ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿದರಾದರೂ ಶ್ರದ್ಧೆಯಿಂದ ದುಡಿದು ಹಣ ಕೂಡಿಟ್ಟು ಸಾಹುಕಾರ್ ಡಿ.ಬನುಮಯ್ಯ ಎಂದೇ ಪ್ರಸಿದ್ಧರಾದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆತ್ಮೀಯರಾಗಿದ್ದ ಇವರು ಸಮಾಜದ ಗಣ್ಯ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. ಐಷಾರಾಮಿ ಬದುಕು ನಡೆಸುವ ಅವಕಾಶವಿದ್ದರೂ ತಮ್ಮ ವಿದ್ಯಾರ್ಥಿದೆಸೆಯ ಕಷ್ಟದ ದಿನಗಳನ್ನು ನೆನೆದು ಡಿ.ಬನುಮಯ್ಯ ವಿದ್ಯಾ ಸಂಸ್ಥೆ ಸ್ಥಾಪಿಸಿ, ಧರ್ಮಪ್ರಕಾಶ ಮತ್ತು ರಾವ್ ಬಹದ್ದೂರ್ ಬಿರುದಿಗೆ ಭಾಜನರಾದರು ಎಂದು ಬಣ್ಣಿಸಿದರು. ಈ ವೇಳೆ ಕುಂಚಿಟಿಗರ ಸಂಘಟನಾ ಸಭಾದ ಮಾಜಿ ಅಧ್ಯಕ್ಷ ಎಂ.ಪಿ.ನಾಗರಾಜ್, ನಿರ್ದೇಶಕರಾದ ಚಂದ್ರು, ದಿನೇಶ್, ಗೈಡ್ ಚಂದ್ರು, ದೀಪಕ್, ಬನುಮಯ್ಯ ಕಾಲೇಜಿನ ಪ್ರಾಧ್ಯಾಪಕರು ಉಪಸ್ಥಿತರಿದ್ದರು.

ನಾಳೆ ಹಡಪದ ಅಪ್ಪಣ್ಣ ಜಯಂತಿ ಪೂರ್ವಭಾವಿ ಸಭೆ

ಮೈಸೂರು, ಜು.7–ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಜು.21ರಂದು ಹಡಪದ ಅಪ್ಪಣ್ಣ ಜಯಂತಿಯನ್ನು ಆಚರಿಸುವ ಸಂಬಂಧ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜುಲೈ 9ರಂದು ಬೆಳಗ್ಗೆ 11 ಗಂಟೆಗೆ ಮೈಸೂರಿನ ಸಿದ್ಧಾರ್ಥನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಬಾಬೂಜಿಗೆ ಪುಷ್ಪನಮನ...



ಹಸಿರುಕ್ರಾಂತಿ ಹರಿಕಾರ, ಭಾರತದ ಉಪಪ್ರಧಾನಿ ಡಾ.ಬಾಬು ಜಗಜೀವನ್ ರಾಮ್ ಅವರ ಪುಣ್ಯಸ್ಮರಣೆ ಅಂಗವಾಗಿ ಶನಿವಾರ ಮೈಸೂರಿನ ರೈಲ್ವೆ ನಿಲ್ದಾಣದ ಮುಂಭಾಗವಿರುವ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ನಗರ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಜಿಲ್ಲಾ ಕಾಂಗ್ರೆಸ್ ವಕ್ತಾರ ಮಹೇಶ್, ಕೆಪಿಸಿಸಿ ಹಿಂದುಳಿದ ವರ್ಗಗಳ ಪ್ರಧಾನ ಕಾರ್ಯದರ್ಶಿ ಚಂದ್ರು, ಕಾಂಗ್ರೆಸ್ ಮುಖಂಡ ಗಿರೀಶ್ ಇನ್ನಿತರರು ಉಪಸ್ಥಿತರಿದ್ದರು.

ಇಟ್ಟಿಗೆಗೂಡು ಸರ್ಕಾರಿ ಶಾಲೆಗೆ ಹೆಲ್ಪಿಂಗ್ ಹ್ಯಾಂಡ್ಸ್‌ನಿಂದ ಸಹಾಯಹಸ್ತ



ಹೆಲ್ಪಿಂಗ್ ಹ್ಯಾಂಡ್ಸ್ ಸಂಸ್ಥೆ ವತಿಯಿಂದ ಇಟ್ಟಿಗೆಗೂಡಿನ ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ಸ್ಕೂಲ್ ಬ್ಯಾಗ್ಸ್, ಬುಕ್ಸ್, ಶೂ, ಸಾಕ್ಸ್, ಲೇಖನ ಸಾಮಗ್ರಿಗಳನ್ನು ವಿತರಿಸಲಾಯಿತು.

ಮೈಸೂರು, ಜು.7–ಮೈಸೂರಿನ ಜೈನ್ ಯುವ ಸಂಘಟನೆ ಮೂಲದ ಹೆಲ್ಪಿಂಗ್ ಹ್ಯಾಂಡ್ಸ್ ಸಂಸ್ಥೆಯು ತಾನು ದತ್ತು ಪಡೆದುಕೊಂಡಿರುವ ಇಟ್ಟಿಗೆಗೂಡಿನ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಸ್ಕೂಲ್ ಬ್ಯಾಗ್ಸ್, ಬುಕ್ಸ್, ಶೂ, ಸಾಕ್ಸ್, ವಾಟರ್ ಬಾಟಲ್ಸ್ ಮತ್ತು ಲೇಖನ ಸಾಮಗ್ರಿಗಳನ್ನು ವಿತರಿಸಿತು.

ಈ ವೇಳೆ ಹೆಲ್ಪಿಂಗ್ ಹ್ಯಾಂಡ್ಸ್ ಕಾರ್ಯದರ್ಶಿ ಆನಂದ್ ಪಟ್ವಾ ಮಾತನಾಡಿ, ವಿದ್ಯಾರ್ಥಿಗಳು ಕಷ್ಟಪಟ್ಟು ಓದಿನ ಕಡೆ ಗಮನಹರಿಸಬೇಕು. ದೇಶದ ಜವಾಬ್ದಾರಿಯುತ ನಾಗರಿಕರಾಗಬೇಕು. ಅಲ್ಲದೆ ಶಿಕ್ಷಕರು ವಿದ್ಯಾರ್ಥಿಗಳಿಗೆ ವೈಯಕ್ತಿಕ ಗಮನ ನೀಡಿ, ಪ್ರತಿಭಾನ್ವಿತ ವಿದ್ಯಾರ್ಥಿಗಳಾಗಿ ಹೊರಹೊಮ್ಮಲು ಸಹಾಯ ಮಾಡಬೇಕು ಎಂದು ಹೇಳಿದರು.

ಶಾಲೆಗೆ ಬ್ಯಾಗ್ಸ್ ಮತ್ತು ಸಾಕ್ಸ್‌ಗಳನ್ನು ಕೊಡುಗೆಯಾಗಿ ನೀಡಿದ ದಿಲಿಪ್ ಗನ್ನಾ, ಪ್ರಕಾಶ್ ಗಾಂಧಿ ಮತ್ತು ಶಾಲೆಗೆ ಪೇಯಿಂಟಿಂಗ್ ಮಾಡಿಸಿದ ಪಾಲಿಕೆ ಮಾಜಿ ಸದಸ್ಯೆ ಛಾಯಾದೇವಿ ಅವರನ್ನು ಆನಂದ್ ಪಟ್ವಾ ಅಭಿನಂದಿಸಿದರು.

ಹೆಲ್ಪಿಂಗ್ ಹ್ಯಾಂಡ್ಸ್ ಅಧ್ಯಕ್ಷ ಮಹಾವೀರ್ ಕಾಬಿಯಾ, ಖಜಾಂಚಿ ರಾಜನ್ ಬಾಗ್‌ಮಾರ್, ಪ್ರಾಜೆಕ್ಟ್ ಡೈರೆಕ್ಟರ್ ಪ್ರಕಾಶ್ ಗಾಂಧಿ, ಸದಸ್ಯರಾದ ಮನೋಹರ್ ಸಂಕ್ಲಾ, ಸಂಪತ್‌ರಾಜ್ ಬಾಗ್‌ಮಾರ್, ಗೌತಮ್ ಪಟ್ವಾ, ಸಿಆರ್‌ಪಿ ವೀಣಾಶ್ರೀ, ಮುಖ್ಯ ಶಿಕ್ಷಕರಾದ ಅನ್ನಪೂರ್ಣ, ಗ್ಲೇಡಿಸ್, ಶಿಕ್ಷಕರು, ಸಿಬ್ಬಂದಿ ಮತ್ತು ಇತರರು ಉಪಸ್ಥಿತರಿದ್ದರು.

ದೇಶದ ಋಣ ತೀರಿಸಲು ಯುವ ಜನತೆ ಮುಂದಾಗಬೇಕು

ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮುಡಾ ಅಧ್ಯಕ್ಷ ಕೆ.ಮರೀಗೌಡ ಕರೆ



ಮೈಸೂರಿನ ಸಾಮ್ರಾಟ್ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ರಾಜ್ಯದ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ ಹಾಗೂ ಮೈಸೂರು ಜಿಲ್ಲಾ ಸಮಿತಿ ಸಹಯೋಗದೊಂದಿಗೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯುತ್ ಗುತ್ತಿಗೆದಾರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಗೌರವಿಸಲಾಯಿತು.

ಮೈಸೂರು, ಜು.7– ದೇಶದ ಅಭಿವೃದ್ಧಿಗೆ ವಿದ್ಯಾರ್ಥಿಗಳ ಪಾತ್ರ ಮುಖ್ಯವಾಗಿದ್ದು ಬೇರೆ ದೇಶಕ್ಕೆ ಹೋಗದೆ ನಮ್ಮ ದೇಶದಲ್ಲಿಯೇ ಕೆಲಸ ಮಾಡಿ ದೇಶದ ಋಣ ತೀರಿಸಲು ಯುವ ಜನತೆ ಮುಂದಾಗಬೇಕೆಂದು ಮುಡಾ ಅಧ್ಯಕ್ಷ ಕೆ.ಮರೀಗೌಡ ಕರೆ ನೀಡಿದರು.

ಕುವೆಂಪುನಗರದ ಸಾಮ್ರಾಟ್ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ರಾಜ್ಯದ ಅನುಮತಿ ಪಡೆದ ವಿದ್ಯುತ್ ಗುತ್ತಿಗರದಾರರ ಸಂಘ ಹಾಗೂ ಮೈಸೂರು ಜಿಲ್ಲಾ ಸಮಿತಿ ಸಹಯೋಗದೊಂದಿಗೆ ಎಸ್‌ಎಸ್‌ಎಲ್‌ಸಿ ಮತ್ತು ಪಿ.ಯು.ಸಿ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯುತ್ ಗುತ್ತಿಗೆದಾರರ ಮಕ್ಕಳಿಗೆ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಈ ದೇಶದ ಸಂಪತ್ತು ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪೈಪೋಟಿ ನಡೆಸಬೇಕಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಗುರಿ, ಛಲ ಇಟ್ಟುಕೊಂಡು ಸಾಧನೆ ಮಾಡಿ ತಂದೆ–ತಾಯಿ ಮತ್ತು ದೇಶಕ್ಕೆ ಕೀರ್ತಿ ತರಬೇಕು. ವಿದ್ಯುತ್ ಗುತ್ತಿಗೆದಾರರು ಗುಣಮಟ್ಟದ ಕೆಲಸ ಮಾಡಿದರೆ ಸಾರ್ವಜನಿಕರಿಗೆ ನಿರಂತರ ವಿದ್ಯುತ್ ನೀಡಬಹುದು, ಸಂಘಕ್ಕೆ ಸಮುದಾಯದ ಭವನ ನಿರ್ಮಿಸಲು ಮುಡಾದಿಂದ ಸಿ.ಎ ನಿವೇಶನ ಕೇಳಿದ್ದೀರಿ, ಶೈಕ್ಷಣಿಕ ಚಟುವಟಿಕೆಗಳನ್ನು ನಿರಂತರ ನಡೆಸಿ ಪ್ರೋತ್ಸಾಹಿಸಿದರೆ ನೂರಕ್ಕೆ ನೂರು ವಿಸ್ತೀರ್ಣದ ಸಿಎ ನಿವೇಶನ ಮಂಜೂರು ಮಾಡಿಸಿಕೊಡುವುದಾಗಿ ಭರವಸೆ ನೀಡಿದರು.

ಶ್ರೀರಂಗಪಟ್ಟಣ ಕ್ಷೇತ್ರದ ಶಾಸಕರು ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧ್ಯಕ್ಷ ಎ.ಬಿ. ರಮೇಶ್ ಬಂಡಿಸಿದ್ದೇಗೌಡ ಮಾತನಾಡಿ, ನಮ್ಮಲ್ಲಿ ಲೈನ್‌ಮ್ಯಾನ್ ಸಂಖ್ಯೆ ಕಡಿಮೆ ಇದ್ದು, ಇತ್ತೀಚೆಗೆ ವಿದ್ಯುತ್ ಅವಘಡಗಳು ಹೆಚ್ಚಾಗುತ್ತಿವೆ. ಗುತ್ತಿಗೆದಾರರು ವಿದ್ಯುತ್ ಅವಘಡಗಳಿಗೆ ತಕ್ಷಣ ಸ್ಪಂದಿಸಿ ಕೆಲಸ ಮಾಡಬೇಕು. ಭಾರತ ಅತ್ಯಂತ ಹೆಚ್ಚು ಮಾನವ ಸಂಪನ್ಮೂಲ ಇರುವ ದೇಶ, ಪ್ರಪಂಚದ ಅತ್ಯಂತ ಉನ್ನತ ಹುದ್ದೆಗಳಲ್ಲಿ ನಮ್ಮ ದೇಶದ ಯುವಕರಿದ್ದಾರೆ. ವಿದ್ಯಾರ್ಥಿಗಳು ಹಿಂದೆ ಗುರು, ಮುಂದೆ ಗುರಿ ಇಟ್ಟುಕೊಂಡು ಸಾಧನೆ ಮಾಡಿ ಎಂದರು. ನಿಮ್ಮ ಸಂಘದ ಮಕ್ಕಳಿಗೆ ಉಚಿತ ನೀಟ್ ತರಬೇತಿ ನೀಡಲು ಪ್ರಯತ್ನ ಮಾಡುತ್ತೇನೆ. ಪ್ರತಿಭಾವಂತ ಮಕ್ಕಳನ್ನು ಗುರುತಿಸುವುದು ಅತ್ಯಂತ ಅಗತ್ಯವಾಗಿದ್ದು ನಿಮ್ಮ ಸಂಘ ರಾಜ್ಯದಲ್ಲಿ ಅತ್ಯಂತ ಬಲಿಷ್ಠವಾಗಿ ಯಶಸ್ವಿಯಾಗಿ ಬೆಳೆಯಲಿ ಎಂದರು.

ಸಮಾರಂಭದಲ್ಲಿ ರಾಜ್ಯ ವಿದ್ಯುತ್ ಗುತ್ತಿಗೆದಾರರ ಸಂಘದ ಗೌರವಾಧ್ಯಕ್ಷ ಸಿ.ರಮೇಶ್, ಜಿಲ್ಲಾ ಅಧ್ಯಕ್ಷ ಹೆಚ್.ಜೆ.ರಾಘವೇಂದ್ರ, ಸೆಸ್ಕ್‌ನ ತಾಂತ್ರಿಕ ನಿರ್ದೇಶಕರಾದ ಮುನಿಗೋಪಾಲ್ .ಕೆ.ಎಂ, ಸುನಿಲ್ ಕುಮಾರ್.ಎ.ಎಂ, ಪೂರ್ಣಚಂದ್ರ ತೇಜಸ್ವಿ, ಅನಿತಾ ಎಸ್ ಬಿ., ಅಭಿಲಾಷ್ ಕೆ.ಎಸ್, ಸುದರ್ಶನ್, ರವೀಶ್, ಕಿರಣ್ ಎಸ್, ನವೀನ್ ಚಂದ್ರ ಹಾಗೂ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ಸಿಎಂ ಸಿದ್ದರಾಮಯ್ಯ ಮೇಲೆ ಆಧಾರರಹಿತ ಆರೋಪ

ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಸ್ಪಷ್ಟನೆ

ಮೈಸೂರು, ಜು.7(ಜಿಎ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಮಾಡುತ್ತಿರುವ ಆರೋಪಗಳು ಆಧಾರರಹಿತವಾಗಿವೆ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ ವೆಂಕಟೇಶ್ ಸ್ಪಷ್ಟಪಡಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಗಳ ಪತ್ನಿ ಪಾರ್ವತಿ ಅವರ ಹೆಸರಿನಲ್ಲಿ 3 ಎಕರೆ 16 ಗುಂಟೆ ಅಂದರೆ 1,50,000 ಚದರ ಅಡಿ ಜಾಗ ಇತ್ತು. 38,000 ಚದರ ಅಡಿ ಅಭಿವೃದ್ಧಿಪಡಿಸಿದ ಭೂಮಿಯನ್ನು ಮಂಜೂರು ಮಾಡಿದೆ. ಇದೂ ಕೂಡ ಮುಡಾ ನಿಯಮದ ಅನ್ವಯ ಮಂಜೂರು ಮಾಡಿದೆ. 2021ರಲ್ಲಿ ನಿವೇಶನ ಪಡೆದಾಗ ಸಿದ್ದರಾಮಯ್ಯರವರು ಮುಖ್ಯಮಂತ್ರಿಯಾಗಿರಲಿಲ್ಲ, ಇದು ಮುಖ್ಯಮಂತ್ರಿಯಾಗಿದ್ದಾಗ ನಡೆದ ಘಟನೆಯಲ್ಲ. ಆದ ಕಾರಣ ಮುಖ್ಯಮಂತ್ರಿ ಅಧಿಕಾರ ದುರುಪಯೋಗದ ಪ್ರಶ್ನೆ ಉದ್ಭವಿಸುವುದಿಲ್ಲ. ಮುಖ್ಯಮಂತ್ರಿ ಪತ್ನಿ ಎಂಬ ಕಾರಣಕ್ಕೆ ಬಹಳ ಚರ್ಚೆಯಾಗುತ್ತಿರುವುದು ಸರಿಯಲ್ಲ ಎಂದು ಹೇಳಿದರು.




ಹೆಚ್.ಎ.ವೆಂಕಟೇಶ್

ಸಿದ್ದರಾಮಯ್ಯನವರಿಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲ. ಸಿದ್ದರಾಮಯ್ಯ ಅವರ ಕುಟುಂಬದವರಾಗಲಿ, ಅವರ ಅಣ್ಣ, ತಮ್ಮ ಅಥವಾ ಯಾರೂ ಭಾಗಿಯಾಗಿಲ್ಲ. ಇದು ಸಿದ್ದರಾಮಯ್ಯ ಅವರ ಮಾವನ ಕುಟುಂಬಕ್ಕೆ ಸಂಬಂಧಿಸಿದ ವಿಚಾರ. 2004ರಲ್ಲಿ ಪಾರ್ವತಿ ಅವರ ಹಿರಿಯ ಸಹೋದರ ಮಲ್ಲಿಕಾರ್ಜುನ್ ಅವರು ಖರೀದಿ ಮಾಡಿದ್ದಾರೆ. 2010ರಲ್ಲಿ ಸಹೋದರಿಗೆ ಉಡುಗೊರೆಯಾಗಿ ನೀಡಿದ್ದಾರೆ. ಪಾರ್ವತಿಯವರು ಬಂಡವಾಳ ಹೂಡಿ ಖರೀದಿ ಮಾಡಿದ್ದಲ್ಲ ಅಥವಾ ಸಿದ್ದರಾಮಯ್ಯನವರಾಗಲಿ ಅವರ ಕುಟುಂಬವಾಗಲಿ ಹಣ ಕೊಟ್ಟು ಖರೀದಿಸಿದ್ದಲ್ಲ. ಹೀಗಾಗಿ ಸಿದ್ದರಾಮಯ್ಯನವರಿಗೆ ಈ ಪ್ರಕರಣ ಸಂಬಂಧಿಸಿದ್ದಲ್ಲ ಎಂದು ಹೆಚ್.ಎ. ವೆಂಕಟೇಶ್ ಸ್ಪಷ್ಟನೆ ನೀಡಿದರು.

ಕೆಲವರು ಸಿದ್ದರಾಮಯ್ಯನವರ ವಿರುದ್ಧ ಆಧಾರರಹಿತ ಆಪಾದನೆ ಮಾಡಿದ್ದಾರೆ. ಒಬ್ಬ ಜನನಾಯಕ ಮುಖ್ಯಮಂತ್ರಿಯನ್ನು ಇಲ್ಲಸಲ್ಲದ ಆರೋಪ ಮಾಡಿ ತೇಜೋವಧೆಗೆ ಪ್ರಯತ್ನಿಸಿರುವುದು ಅತ್ಯಂತ ದುರ್ದೈವದ ಸಂಗತಿಯಾಗಿದೆ. ರಾಜಕೀಯ ಪಕ್ಷಗಳು, ರಾಜಕೀಯ ಮುಖಂಡರು ಇಂತಹ ದುಸ್ಸಾಹಸಕ್ಕೆ ಮುಂದಾಗಿರುವುದು ಸಾರ್ವಜನಿಕ ಜೀವನಕ್ಕೆ ಮಾಡಿದ ಘೋರ ಅಪರಾಧವಾಗಿದೆ ಎಂದು ವಾಗ್ದಾಳಿ ನಡೆಸಿದರು.

ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರಿಗೆ ಸನ್ಮಾನ



ಚಾಮರಾಜ ಕ್ಷೇತ್ರದ ಶಾಸಕರಾಗಿ ಒಂದು ವರ್ಷ ಪೂರೈಸಿದ ಕೆ.ಹರೀಶ್‌ಗೌಡ ಅವರನ್ನು ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ (ಗಾಂಧಿ ಚೌಕ)ನ ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಬ್ಯಾಂಕ್‌ನ ನಿರ್ದೇಶಕರು ಇತರರಿದ್ದರು.

ಜು.10ರಿಂದ ಮೈಸೂರು ನೃತ್ಯ ಗುರುಪರಂಪರಾ ಉತ್ಸವ

ಮೈಸೂರು, ಜು. 7–ನಾಟ್ಯಾಚಾರ್ಯ ಪ್ರೊ.ಕೆ.ರಾಮಮೂರ್ತಿರಾವ್ ಅವರ ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಕಾರ ದೊಂದಿಗೆ ಮೈಸೂರು ನೃತ್ಯ ಗುರು ಪರಂಪರಾ ನೃತ್ಯೋತ್ಸವವನ್ನು ಜುಲೈ 10ರಿಂದ ಮೂರು ದಿನಗಳ ಕಾಲ ನಾದಬ್ರಹ್ಮ ಸಂಗೀತ ಸಭಾದ ವಾಸುದೇವಾಚಾರ್ಯ ಭವನದಲ್ಲಿ ಏರ್ಪಡಿಸಿದೆ.

ಜು.10ರ ಸಂಜೆ 6ಕ್ಕೆ ಆಸ್ಥಾನ ವಿದುಷಿ ಪದ್ಮಭೂಷಣ ಡಾ.ಕೆ.ವೆಂಕಟಲಕ್ಷ್ಮಮ್ಮ ಅವರ ಸಂಸ್ಮರಣೆಯ ಅಂಗವಾಗಿ ಅವರ ಶಿಷ್ಯ ಕರ್ನಾಟಕ ಕಲಾಶ್ರೀ ಬೆಂಗಳೂರಿನ ವಿದುಷಿ ವಿದ್ಯಾ ರವಿಶಂಕರ್ ಅವರ ಶಿಷ್ಯರಿಂದ ಮೈಸೂರು ಬಾನಿಯ ಭರತನಾಟ್ಯ ಪ್ರದರ್ಶನ ನಡೆಯಲಿದೆ. ನಟುವಾಂಗದಲ್ಲಿ ಗುರು ವಿದ್ಯಾ ರವಿಶಂಕರ್ ಮತ್ತು ಸಿಂಧೂ ಆಚಾರ್ಯ, ಗಾಯನದಲ್ಲಿ ಭಾರತೀ ವೇಣುಗೋಪಾಲ್, ಮೃದಂಗ ಆರ್.ದಾಸಪ್ಪ ಹಾಗೂ ಪಿಟೀಲಿನಲ್ಲಿ ಎಂ.ಆರ್. ಶ್ರೀಕಾಂತ್ ಭಾಗವಹಿಸಲಿದ್ದಾರೆ.

ಅಂದಿನ ಎರಡನೆಯ ಕಾರ್ಯಕ್ರಮ ಸಂಜೆ 7.15ಕ್ಕೆ ಮೈಸೂರಿನ ನಾಟ್ಯಗುರು ಕೆ.ಮುರಳೀಧರರಾವ್ ಅವರ ಸ್ಮರಣಾರ್ಥ ಅವರ ಶಿಷ್ಯ ವಿದುಷಿ ಡಾ.ಕೃಪಾಪಡ್ಕೆ ಪಂದನಲ್ಲೂರು ಶೈಲಿಯ ನೃತ್ಯ ಪ್ರದರ್ಶನ ನೀಡಲಿದ್ದು, ನಟುವಾಂಗದಲ್ಲಿ ಅವರ ಪುತ್ರಿ ಹಾಗೂ ಶಿಷ್ಯ ಪೂಜಾ ಸುಗಮ, ಗಾಯನದಲ್ಲಿ ಸಮೀಕ್ಷಾ, ಮೃದಂಗದಲ್ಲಿ ವಿಕ್ರಂ ಭಾರದ್ವಾಜ್, ಹಾಗೂ ಕೊಳಲಿನಲ್ಲಿ ಪಿ.ಸಮುದ್ರ ಸಹಕರಿಸಲಿದ್ದಾರೆ.

ಜು.11ರಂದು ಸಂಜೆ 6ಕ್ಕೆ ಕೀರ್ತಿಶೇಷ ನೃತ್ಯಗುರು ಕೆ.ಬಿ.ಮಾಧವರಾವ್ ಅವರ ನೆನಪಿನಲ್ಲಿ ಅವರ ನೇರ ಶಿಷ್ಯರಾದ ಉಡುಪಿಯ ವಿದ್ವಾನ್ ರಾಮಕೃಷ್ಣ ಕೊಡಂಚ ಅವರ ನಟುವಾಂಗದಲ್ಲಿ ಅವರ ಶಿಷ್ಯರಿಂದ ಮೂಗೂರು ಶೈಲಿಯ ನೃತ್ಯ ಪ್ರದರ್ಶನ ನಡೆಯಲಿದ್ದು, ಗಾಯನದಲ್ಲಿ ವಿದ್ವಾನ ಮಧೂರು ಬಾಲಸುಬ್ರಹ್ಮಣ್ಯ ಮತ್ತು ಎಂ.ಜ್ಯೋತಿರಾವ್ ಸಹಕರಿಸಲಿದ್ದಾರೆ.

ಸಂಜೆ 7ಕ್ಕೆ ಮೈಸೂರಿನ ನಾಟ್ಯಗುರು ಟಿ.ಎನ್.ಸೋಮಶೇಖರ್ ಅವರ ಜ್ಞಾಪಕಾರ್ಥ ಅವರ ನೇರ ಶಿಷ್ಯ ಹಾಗೂ ಪುತ್ರಿ ವಿದುಷಿ ಶ್ರೀ ಲಕ್ಷ್ಮೀಕುಮಾರ್ ಅವರ ನಟುವಾಂಗದೊಂದಿಗೆ ಅವರ ಶಿಷ್ಯರಿಂದ ನೃತ್ಯ ನಮನ ಕಾರ್ಯಕ್ರಮ ನಡೆಯಲಿದ್ದು, ಸಿ.ಎಸ್.ಲಕ್ಷ್ಮೀ ಗಾಯನದಲ್ಲಿ ಸಹಕಾರ ನೀಡಲಿದ್ದಾರೆ.

ಜು.12ರ ಶುಕ್ರವಾರ ಸಂಜೆ 6ಕ್ಕೆ ನಡೆಯಲಿರುವ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಕನ್ನಡ– ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಆಗಮಿಸಲಿದ್ದು, ನೃತ್ಯಾಲಯ ಟ್ರಸ್ಟಿನ ನಿರ್ದೇಶಕಿ ಡಾ.ತುಳಸೀ ರಾಮಚಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ.

ಸಮಾರಂಭದ ನಂತರ ಸರಸ್ವತೀ ನೃತ್ಯಕಲಾ ಮಂದಿರದ ನಿರ್ದೇಶಕರಾಗಿದ್ದ ನಾಟ್ಯಾಚಾರ್ಯ ಎಂ.ವಿಷ್ಣುದಾಸ್ ಅವರ ಶಿಷ್ಯರಾದ ಪ್ರೊ.ಕೆ.ರಾಮಮೂರ್ತಿರಾವ್ ಅವರ ಗಾಯನ ಹಾಗೂ ನಟುವಾಂಗದೊಂದಿಗೆ ಅವರ ಶಿಷ್ಯ ವೃಂದದವರು ನೃತ್ಯ ನಮನ ಸಲ್ಲಿಸಲಿದ್ದಾರೆ. ಎರಡನೇ ಹಾಗೂ ಮೂರನೇ ದಿನದ ಕಾರ್ಯಕ್ರಮಗಳಿಗೆ ವಿದ್ವಾನ್ ಎಂ.ಆರ್. ಹನುಮಂತರಾಜು ಮೃದಂಗ, ವಿದ್ವಾನ್ ಹೆಚ್.ಎಸ್.ತಾಂಡವಮೂರ್ತಿ ಪಿಟೀಲಿನಲ್ಲಿ ಸಹಕಾರ ನೀಡಲಿದ್ದಾರೆ. ಹೆಚ್ಚಿನ ಮಾಹಿತಿಗೆ ದೂ. 0821–2371899, ಮೊ. 98863 79314 ಸಂಪರ್ಕಿಸಬಹುದು.

ಹುಟ್ಟುಹಬ್ಬದ ಅಭಿನಂದನೆ



ಮೈಮುಲ್ ನಿರ್ದೇಶಕ ಆರ್.ಚಲುವರಾಜು ಅವರನ್ನು ಹುಟ್ಟುಹಬ್ಬದ ಅಂಗವಾಗಿ ಅಭಿನಂದಿಸಲಾಯಿತು. ಈ ವೇಳೆ ಹಳೇಕೆಂಪಯ್ಯನಹುಂಡಿ ಗ್ರಾಮದ ರವಿ, ಶಿವರಾಜು, ಶೇಖರ್ ಗೌಡ, ಕೃಷ್ಣ, ಮಧು, ಸಂದೀಪ್, ರಮೇಶ್, ಲೋಕೇಶ್(ಜೆಸಿಬಿ) ಇತರರಿದ್ದರು.

ತುರ್ತು ಪರಿಸ್ಥಿತಿ ವೇಳೆ ಅನೇಕ ಮಹತ್ವದ ಬೆಳವಣಿಗೆಗಳಾಗಿವೆ

ಮೈಸೂರು,ಜು.7(ಜಿಎ)–ತುರ್ತು ಪರಿಸ್ಥಿತಿ ಹೇರಿ 50 ವರ್ಷವಾಗಿದ್ದು, ಈ ವೇಳೆ ಆ ಕರಾಳ ದಿನಗಳನ್ನು ಜ್ಞಾಪಿಸಿಕೊಳ್ಳುವುದು ಅಗತ್ಯ ಎಂದು ಬಿಜೆಪಿಯವರು ರಾಜ್ಯಾದ್ಯಂತ ಅಪಪ್ರಚಾರ ನಡೆಸುತ್ತಿದ್ದಾರೆ. ಆದರೆ ಇದು ಸರಿಯಲ್ಲ. ಆ ವೇಳೆ ಅನೇಕ ಮಹತ್ವದ ಬೆಳವಣಿಗೆಗಳ ಬಗ್ಗೆ ಗಮನಹರಿಸಬೇಕಾದ ಅಗತ್ಯವಿದೆ ಎಂದು ವಿಶ್ರಾಂತ ಕುಲಪತಿ ಪ್ರೊ.ಮಹದೇವ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತುರ್ತು ಪರಿಸ್ಥಿತಿ ಬಳಸಿಕೊಂಡು ಸಾಮಾಜಿಕ ನ್ಯಾಯ, ಆರ್ಥಿಕ ಸಮಾನತೆಗೆ ಕಾನೂನು ಮಾಡಿದರು. ಕಡಿಮೆ ಬೆಲೆಗೆ ರಾಗಿ, ಅಕ್ಕಿ ಮಾರಾಟವಾಗುವ ಇತಿಹಾಸ ಸೃಷ್ಟಿಯಾಗಿ ಜನತೆಗೆ ಅನುಕೂಲವಾಯಿತು. ಅಡವಿಟ್ಟ ವಸ್ತುಗಳು ಬಡ್ಡಿರಹಿತವಾಗಿ ವಾಪಸ್ ಬಂದವು. ಉಳುವವನಿಗೇ ಭೂಮಿ ಕಾನೂನಿಂದ ಲಕ್ಷಾಂತರ ಮಂದಿ ಭೂರಹಿತರಿಗೆ ಅನುಕೂಲವಾಯಿತು. ನಿರುದ್ಯೋಗಿ ಯುವಜನರಿಗೆ ಉದ್ಯೋಗ ಭತ್ಯೆ, ಉದ್ಯೋಗ ಖಾತರಿ ಯೋಜನೆಗಳು ದೊರೆತವು. ನೌಕರರು ಸಮಯಕ್ಕೆ ಸರಿಯಾಗಿ ಕೆಲಸಕ್ಕೆ ಹಾಜರಾಗುವಂತಾಯಿತು. ಕಳ್ಳಸಂತೆಕೋರರು, ಕಳ್ಳ ಸಾಗಣೆದಾರರ ಮೇಲೆ ಕಡಿವಾಣ ಬಿದ್ದಿತು. ಇದರಿಂದಾಗಿ ಆರ್ಥಿಕ ಬೆಳವಣಿಗೆ ಆಯಿತು. ಆದ್ದರಿಂದ ಅದು ಕರಾಳ ದಿನಗಳಾಗಿರಲಿಲ್ಲ ಎಂದರು. ಗೋಷ್ಠಿಯಲ್ಲಿ ಕೆಪಿಸಿಸಿ ವಕ್ತಾರ ಎಚ್.ಎ.ವೆಂಕಟೇಶ್, ಭಾಸ್ಕರ ಗೌಡ, ಗೋಪಿನಾಥ್, ಜ್ಞಾನಪ್ರಕಾಶ್ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.07.2024 ಸೋಮವಾರ, ಮಳೆ ನಕ್ಷತ್ರ : ಪುನರ್ವಸು 6.07.2024ರಿಂದ 19.07.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಪುಷ್ಯ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಧನ್ಯ ಸ್ಕೂಲ್ ಆಫ್ ಯೋಗ ಹಾಗೂ ಮುದ್ರಾ ಪ್ರಾಣಾಯಾಮ ರಿಸರ್ಚ್ ಸೆಂಟರ್:** ಮುದ್ರಾ ಪ್ರಾಣಾಯಾಮ ಹಾಗೂ ಸಂಕಲ್ಪ ಸಿದ್ಧಿ ಧ್ಯಾನ, ಸ್ಥಳ: ಮಹಿಳಾ ಸಮಾಜ, ಜೆಎಲ್‌ಬಿ ರಸ್ತೆ, ಬೆಳಗ್ಗೆ 6.30ರಿಂದ 7.30, ಸಂಜೆ 6.30 ರಿಂದ 7.30ರವರೆಗೆ
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆನ್ನು ನೋವಿಗೆ ಕಾರಣಗಳು, ಲಕ್ಷಣಗಳು ಮತ್ತು ಚಿಕಿತ್ಸೆ ಬಗ್ಗೆ ತಜ್ಞ ವೈದ್ಯರಿಂದ ಸಲಹೆ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ.
- **ಜೆಎಸ್‌ಎಸ್ ಆಸ್ಪತ್ರೆ:** ಪೈಲ್ಸ್ ಮತ್ತು ಪಿಸ್ತೂಲ ಕುರಿತು ಮೆಗಾ ಸರ್ಜರಿ ಕ್ಯಾಂಪ್, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಆವರಣ, ಮೊದಲ ಮಹಡಿ, ಬೆಳಗ್ಗೆ 10.30ರಿಂದ.
- **ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ :** ಲೋಕಾನುಗ್ರಹಾರ್ಥ ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವ, ಹರಿದ್ರಾ ಕುಂಕುಮ ಪ್ರಧಾನ, ಸ್ಥಳ: ಕೋಟೆ ತ್ರಿನೇಶ್ವರ ದೇವಸ್ಥಾನ, ಅರಮನೆ ಆವರಣ, ಸಂಜೆ 7 ಗಂಟೆಗೆ.
- **ಜೆಎಸ್‌ಎಸ್ ಮಹಾ ವಿದ್ಯಾಪೀಠ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ಗುಜರಾತ್ ಕರಕುಶಲ ಉತ್ಸವ–2024, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ವರ್ತುಲ ರಸ್ತೆ, ಬೆಳಗ್ಗೆ 10ರಿಂದ.
- **ಸಹಾರ ಮಹಿಳಾ ಸ್ವ ಸಹಾಯ ಸಂಘ, ಸಹಾರ ಹ್ಯಾಂಡಿಕ್ರಾಫ್ಟ್, ಹ್ಯಾಂಡ್‌ಲೂಮ್ ಅಸೋಸಿಯೇಷನ್:** ಸಹಾರ ಆರ್ಟ್ ಅಂಡ್ ಕ್ರಾಫ್ಟ್ ಶಾಪಿಂಗ್ ಫೆಸ್ಟಿವಲ್–2024 ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಹಳೇ ಜಿಲ್ಲಾಧಿಕಾರಿ ಕಚೇರಿ ಹಿಂಭಾಗ, ಬೆಳಗ್ಗೆ 10 ಗಂಟೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, ಡಾ.ಅಮೃತಾ ಕಟಕೆ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: "ಅಂಚೆ–ಅಂಕನ"–ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್. ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ರೋಹಿಣಿ ಸುಧಾಮ್ ಹಾಗೂ ಕೆ.ಪಿ.ರೇವತಿ, ವ್ಯಾಖ್ಯಾನ: ಡಾ.ಪ್ರದೀಪ್ ಕುಮಾರ್ ಹೆಬ್ರಿ, 6.50–ರೈತರಿಗೆ ಸಲಹೆ, 7.15 –ಭಾವಗೀತೆಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ): "Ridding the mind of fear" ಹಿರಿಯ ತತ್ವಜ್ಞಾನಿ ಮತ್ತು ವಾಗ್ಮಿಗಳಾದ ಜಿಡ್ಡು ಕೃಷ್ಣಮೂರ್ತಿ ಅವರ English ಭಾಷಣದ ಧ್ವನಿ ಮುದ್ರಣ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಎನ್.ಗಿರೀಶ್ ಮತ್ತು ಎಂ.ಎಸ್.ಪುಟ್ಟರಾಜು–ನಾದಸ್ವರ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ. ಗೇಮ್ ಶೋ ಪ್ರಸ್ತುತಿ: ದಿಗ್ವಿಜಯ್ ಬಿ., 12.30–ದೇವರನಾಮ, ಮಾಲತಿ ದಿವಾಕರ ಹೆಗಡೆ, 12.45–ನಮ್ಮ ಆರೋಗ್ಯ, 'ಫಂಗಲ್ ಇನ್ ಫೆಕ್ಷನ್ ಲಕ್ಷಣಗಳು ಮತ್ತು ಚಿಕಿತ್ಸೆ' ಕುರಿತು ಮೈಸೂರಿನ ಜೆ.ಎಸ್.ಎಸ್. ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಮೈಕ್ರೋಬಯಾಲಜಿ ವಿಭಾಗದ ಪ್ರೊಫೆಸರ್ ಡಾ.ಎಂ.ಎನ್.ಸುಮನಾ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.20–ಭಾವಗೀತೆಗಳು–ಹೆಚ್.ಎ.ನಳಿನಿ, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಬಿ.ಎಸ್.ವಿಜಯರಾಘವನ್–ಹಾಡುಗಾರಿಕೆ, 4.00–ಮಹಿಳಾರಂಗ: "ನಾನು ನನ್ನ ಕಂಪನಿ", ವಿಷಯ: ಗೃಹ ಬಳಕೆ ವಸ್ತುಗಳು ಹಾಗೂ ಆಹಾರೋತ್ಪನ್ನಗಳ ತಯಾರಿಕ ಘಟಕ ನಡೆಸುತ್ತಿರುವ ಸುಧಾಮಣಿ ಡಿ. ಎಸ್ ಅವರೊಂದಿಗೆ ಸಂದರ್ಶನ. ಪ್ರಸ್ತುತಿ: ಕೆ.ಬಿ.ಮೀನಾ, 4.45–ಹಿಂದಿ ಪಾಠ –ಆಯೇಷಾ ಸುಲ್ತಾನಾ, 6.50–ಕೃಷಿರಂಗ: ಗ್ರಾಮೀಣ ಅಭಿವೃದ್ಧಿಯಲ್ಲಿ ಗ್ರಾಮ ಪಂಚಾಯತ್ ಪಾತ್ರ. ಈ ಕುರಿತು ಪಾಂಡವಪುರ ತಾಲ್ಲೂಕು ಚಿನಕುರಳಿ ಗ್ರಾಮ ಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಆರತಿಕುಮಾರಿ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 Talk in Kannada: ಸೇವೆಯೆಂಬ ಸಮಾಜದ ಋಣ ಮಾತನಾಡುವವರು : ದೇವಿಕಾ ನಾಗೇಶ್, 9.30 "ಹಾದಿಯಲ್ಲಿ ಕಂಡ ಮುಖ" –ಬಾನುಲಿ ಸರಣಿ, ನಾಟಕದ ಮೇಷ್ಟ್ರು ಜಾಯ್‌ಫುಲ್ ಜಯಶೇಖರ್ ಅವರೊಂದಿಗೆ ಸಂವಾದ. ಪ್ರಸ್ತುತಿ : ಅಬ್ದುಲ್ ರಶೀದ್, 10.00 ನಾಟಕ

- **ವಿಶ್ವೇಶ್ವರಯ್ಯ ಟೆಕ್ನಿಕಲ್ ಯೂನಿವರ್ಸಿಟಿ (ಬೆಳಗಾವಿ), ದ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಇಂಜಿನಿಯರಿಂಗ್ (ಮೈಸೂರು):** ವಿಟಿಯು ಅಂತರ ಕಾಲೇಜು ಮೈಸೂರು ವಿಭಾಗದ ಬ್ಯಾಡ್ಮಿಂಟನ್ ಪುರುಷ ಮತ್ತು ಮಹಿಳಾ ಚಾಂಪಿಯನ್‌ಶಿಪ್–2024–25, ಉದ್ಘಾಟನೆ: ರಾಷ್ಟ್ರೀಯ ಬ್ಯಾಡ್ಮಿಂಟನ್ ಆಟಗಾರರೂ ಆದ ಕೋಚ್ ಡಾ.ಹರ್ಷ ವಿಮನ್, ಅಧ್ಯಕ್ಷತೆ: ಮೈಸೂರಿನ ಎನ್‌ಐಇ ವೈಸ್ ಪ್ರಿನ್ಸಿಪಾಲ್ ಡಾ.ಎಂ.ಎಸ್.ಗಣೇಶ್‌ಪ್ರಸಾದ್, ಸ್ಥಳ: ಎನ್‌ಐಇ ಡೈಮಂಡ್ ಜ್ಯೂಬಿಲಿ ಇಂಡೋರ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಮಾನಂದವಾಡಿ ರಸ್ತೆ, ಬೆಳಗ್ಗೆ 9.30ರಿಂದ.

ಮೈಸೂರು ಮಿತ್ರ

ಸೋಮವಾರ 8 ಜುಲೈ 2024

ಮೈಸೂರು ಸಾಹಿತ್ಯ ಉತ್ಸವ-2024ರ 8ನೇ ಆವೃತ್ತಿ ಸಂಭ್ರಮ

ಪ್ರಧಾನಮಂತ್ರಿ ನರೇಂದ್ರ ಮೋದಿ ನಾಯಕತ್ವ ಕುರಿತ ಪುಸ್ತಕ ಬಿಡುಗಡೆ

ಇತಿಹಾಸಕಾರ ಡಾ.ವಿಕ್ರಂ ಸಂಪತ್‌ರಿಂದ ಲೇಖಕ ಡಾ.ಆರ್.ಬಾಲಸುಬ್ರಹ್ಮಣ್ಯಂ ಅವರ ಪುಸ್ತಕ ಲೋಕಾರ್ಪಣೆ

ಮೈಸೂರು, ಜು.7(ಬಿಎಲ್‌ಯು)– ಸ್ವಾಮಿ ವಿವೇಕಾನಂದ ಯೂತ್ ಮೂಮೆಂಟ್‌ನ ಸಂಸ್ಥಾಪಕರೂ ಆದ ಲೇಖಕ ಡಾ.ಆರ್.ಬಾಲಸುಬ್ರಹ್ಮಣ್ಯಂ ಬರೆದಿರುವ **ಪವರ್ ವಿತ್ಹಿನ್: ದ ಲೀಡರ್‌ಶಿಪ್ ಲೆಗೆಸಿ ಆಫ್ ನರೇಂದ್ರ ಮೋದಿ** ಪುಸ್ತಕವನ್ನು ಲೇಖಕರೂ ಆದ ಖ್ಯಾತ ಇತಿಹಾಸಕಾರ ಡಾ.ವಿಕ್ರಂ ಸಂಪತ್ ಇಂದು ಬಿಡುಗಡೆ ಮಾಡಿದರು.

ಮೈಸೂರಿನ ಸದರ್ನ್ ಸ್ಟಾರ್ ಹೋಟಲ್‌ನಲ್ಲಿ ಇಂದು ಮೈಸೂರು ಲಿಟರರಿ ಫೆಸ್ಟ್ ಆಯೋಜಿಸಿದ್ದ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ಪುಸ್ತಕ ಬಿಡುಗಡೆ ಮಾಡಿದ ಡಾ.ವಿಕ್ರಂ ಸಂಪತ್, ಪುಸ್ತಕ ಕುರಿತ ಹಲವು ವೈಶಿಷ್ಟ್ಯತೆಯನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ಡಾ.ಬಾಲಸುಬ್ರಹ್ಮಣ್ಯಂ ಬರೆದಿರುವ ಈ ಪುಸ್ತಕ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆತ್ಮಕಥನ ಎಂದು ತಪ್ಪಾಗಿ ಭಾವಿಸಬೇಡಿ. ಭಾರತದ ದೃಷ್ಟಿಯಲ್ಲಿ ನಾಯಕತ್ವದ ಬಗ್ಗೆ ಅಧ್ಯಯನ ಮಾಡಿರುವ ಬಗ್ಗೆ ಈ ಪುಸ್ತಕ ಹಲವು ಮಜಲುಗಳನ್ನು ತೆರೆದಿಟ್ಟುಕೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟರು.

ಹಲವು ಸಮ್ಮೇಳನಗಳಲ್ಲಿ ಮಾತನಾಡುವ ಸಂದರ್ಭದಲ್ಲಿ ನಾಯಕತ್ವ ಕುರಿತಂತೆ ಬಹಳಷ್ಟು ವಿಚಾರಗಳು ಹೆಚ್ಚಾಗಿ ಪಾಶ್ಚಿಮಾತ್ಯ ಪ್ರಭಾವ ಹೊಂದಿರುತ್ತದೆ. ಆದರೆ ಭಾರತೀಯ ನಾಯಕತ್ವದ ಅಸ್ಮಿತೆಯ ವಿವರ ಹೇಳುವುದಿಲ್ಲ. ಆದರೆ ಈ ಪುಸ್ತಕದಲ್ಲಿ ಭಾರತದ ನಾಯಕ್ವತದ ಬಗ್ಗೆ ಬಹಳಷ್ಟು ವಿಚಾರಗಳನ್ನು ಪ್ರಚುರಪಡಿಸುತ್ತದೆ ಎಂದು ಹೇಳಿದರು.

ಭಾರತೀಯ ನಾಯಕತ್ವದಲ್ಲಿ ಆದ ಆಮೂಲಾಗ್ರ ಬದಲಾವಣೆ ಹಾಗೂ ನರೇಂದ್ರ ಮೋದಿ ಅವರ ಹಲವು ದಶಕಗಳ ಸಾರ್ವಜನಿಕ ಜೀವನದ ದೃಷ್ಟಿಯಿಂದ ಈ ಪುಸ್ತಕದಲ್ಲಿ ಬಹಳಷ್ಟು ವಿಚಾರಗಳನ್ನು ವಿಶ್ಲೇಷಿಸಲಾಗಿದೆ ಎಂದು ಡಾ. ವಿಕ್ರಂ ಸಂಪತ್ ತಿಳಿಸಿದರು.


ಕಳೆದ ಒಂದು ದಶಕದ ಅಭಿವೃದ್ಧಿ ಪರ್ವದಲ್ಲಿ ಭಾರತದಲ್ಲಿ ಹಲವು ಕಾರ್ಯಚಟುವಟಿಕೆಗಳು ಅನುಷ್ಠಾನಕ್ಕೆ ಬಂದಿದೆ. ಅದರಲ್ಲೂ ಪ್ರಮುಖವಾಗಿ ಮನೆಗಳಲ್ಲಿ ಶೌಚಾಲಯ ನಿರ್ಮಾಣ, ಕುಡಿಯುವ ನೀರು ಸೌಲಭ್ಯ, ಅಡುಗೆ ಅನಿಲ ಸಂಪರ್ಕ ಕಲ್ಪಿಸಲಾಗಿದೆ. ಈ ಮೂಲಕ ಗ್ರಾಮೀಣ ಭಾಗದ ಹೆಂಗಳೆಯರ ಆರೋಗ್ಯದ ದೃಷ್ಟಿಯಿಂದ ಮಹತ್ತರ ಯೋಜನೆಗಳನ್ನು ನರೇಂದ್ರ ಮೋದಿ ರೂಪಿಸಿದ್ದಾರೆ. ಇದರಿಂದ ಸಹಜವಾಗಿಯೇ ಭಾರತೀಯರ ಜೀವನ ಮಟ್ಟ ಎತ್ತರಕ್ಕೆ ಹೋಗಿದೆ ಎಂಬ ವಿವರ ಕೂಡ ಈ ಪುಸ್ತಕದಲ್ಲಿದೆ ಎಂದರು.

ತಮ್ಮ ಈ ಹಿಂದಿನ ಚೊಚ್ಚಲ ಪುಸ್ತಕ ಮೈಸೂರಿನ ಇತಿಹಾಸ ಕುರಿತಾದ ಪ್ರಕಟಣೆ ಕುರಿತಂತೆ ಮಾತನಾಡಿದ ಡಾ.ವಿಕ್ರಂ ಸಂಪತ್, ಮೈಸೂರು ರಾಜ್ಯವನ್ನಾಳಿದ ರಾಜರ ನಾಯಕತ್ವ ಮಾದರಿಯಾಗಿತ್ತು. ಈ ಮೂಲಕ ಭಾರತವನ್ನು ಪ್ರಗತಿ ಪಥದತ್ತ ಕೊಂಡೊಯ್ಯಲು ಮೈಸೂರು ರಾಜರು ಕಟಿಬದ್ಧರಾದರು ಎಂದು ಮೈಸೂರು ರಾಜರ ಆಳ್ವಿಕೆಯನ್ನು ಪ್ರಶಂಸಿಸಿದರು.

ಇದೇ ವೇಳೆ ಡಾ.ಬಾಲಸುಬ್ರಹ್ಮಣ್ಯಂ ಬರೆದಿರುವ ನರೇಂದ್ರ ಮೋದಿ ಕುರಿತ ಪುಸ್ತಕದ ಮೊದಲ ಪ್ರತಿ ಸ್ವೀಕರಿಸಿದ ಉದ್ಯಮಿ ಸುಧನ್ವ ಧನಂಜಯ, ನನಗೂ ಪುಸ್ತಕಗಳಿಗೂ ಗಾಢವಾದ ನಂಟಿದೆ. ಅದು ಯಾವ ರೀತಿ ಅಂದರೆ ಯಾವುದೇ ಗ್ರಂಥಾಲಯಕ್ಕೆ ಹೋದರೂ ಅದರ ಮುಖಪುಟ ಹಾಗೂ ಹಿಂದಿನ ಪುಟ ನೋಡಿಯೇ ಆ ಪುಸ್ತಕದ ಲೇಖಕ ಯಾರು, ಅದು ಯಾವ ಪುಸ್ತಕ ಎಂದು ಗ್ರಹಿಸುವಷ್ಟು ಮಟ್ಟಿಗೆ ಪುಸ್ತಕದ ಬಗ್ಗೆ ಒಲವು ಹೊಂದಿದ್ದೇನೆ ಎಂದರು.

ಅದರಲ್ಲೂ ಡಿಜಿಟಲ್ ಯುಗದಲ್ಲಿ ಪುಸ್ತಕವನ್ನು ಸಾಂಪ್ರದಾಯಿಕ ಪದ್ಧತಿಯಲ್ಲಿ ಓದುವುದು ಆನಂದಮಯ ಅನುಭವ ಎಂದು ಸುಧನ್ವ ಧನಂಜಯ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪುಸ್ತಕದ ಪ್ರತಿಗಳನ್ನು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಂಸ್ಥಾಪಕ ಸಂಪಾದಕ ಡಾ.ಕೆ.ಬಿ. ಗಣಪತಿ, ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷೆ ಶುಭಾ ಸಂಜಯ್ ಅರಸ್, ಟ್ರಸ್ಟಿಗಳಾದ ರಾಯನ್ ಇರಾನಿ, ಸುಚಿತಾ ಸಂಜಯ್, ಹನುಮಂತು, ಲೇಖಕಿ ದೀಪ್ತಿ ನವರತ್ನ, ಅರುಣ್ ರಾಮನ್, ಡಾ.ಬಿಂದು ಬಾಲಸುಬ್ರಹ್ಮಣ್ಯಂ ಅವರಿಗೆ ನೀಡಲಾಯಿತು.



ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಭಾನುವಾರ ಮೈಸೂರು ಲಿಟರರಿ ಫೆಸ್ಟ್ ಆಯೋಜಿಸಿದ್ದ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂಮೆಂಟ್‌ನ ಸಂಸ್ಥಾಪಕರೂ ಆದ ಲೇಖಕ ಡಾ.ಆರ್.ಬಾಲಸುಬ್ರಹ್ಮಣ್ಯಂ ಬರೆದಿರುವ 'ಪವರ್ ವಿತ್ಹಿನ್: ದ ಲೀಡರ್‌ಶಿಪ್ ಲೆಗೆಸಿ ಆಫ್ ನರೇಂದ್ರ ಮೋದಿ' ಪುಸ್ತಕವನ್ನು ಲೇಖಕರೂ ಆದ ಖ್ಯಾತ ಇತಿಹಾಸಕಾರ ಡಾ. ವಿಕ್ರಂ ಸಂಪತ್ ಬಿಡುಗಡೆ ಮಾಡಿದರು. (ಎಡದಿಂದ) ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷೆ ಶುಭಾ ಸಂಜಯ್ ಅರಸ್, ಉದ್ಯಮಿ ಸುಧನ್ವ ಧನಂಜಯ ಅವರನ್ನು ಚಿತ್ರದಲ್ಲಿ ಕಾಣಬಹುದು.

ಕಾಶಿಯ ಜ್ಞಾನವಾಪಿ ಮಸೀದಿಯಲ್ಲಿ ಆಧುನಿಕ ತಂತ್ರಜ್ಞಾನ ಬಳಸಿ ಸರ್ವೆ

ಖ್ಯಾತ ಇತಿಹಾಸಕಾರ ಡಾ.ವಿಕ್ರಂ ಸಂಪತ್ ವಿವರಣೆ



ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಭಾನುವಾರ ಮೈಸೂರು ಲಿಟರರಿ ಫೆಸ್ಟ್ ಆಯೋಜಿಸಿದ್ದ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 'ಏಷಿಯಾದ ಇತಿಹಾಸ ಮತ್ತು ಈಗಿನ ಪರಿಣಾಮಗಳು' ಕುರಿತ ವಿಚಾರಗೋಷ್ಠಿಯಲ್ಲಿ ಲೇಖಕರೂ ಆದ ಖ್ಯಾತ ಇತಿಹಾಸಕಾರ ಡಾ.ವಿಕ್ರಂ ಸಂಪತ್ ಮಾತನಾಡಿದರು. ಪ್ರೊ.ಜಿ.ಎಲ್.ಶೇಖರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜು.7(ಬಿಎಲ್‌ಯು)– ಕಾಶಿ ವಿಶ್ವನಾಥ ದೇವಾಲಯದ ಪಕ್ಕದಲ್ಲಿರುವ ಜ್ಞಾನವಾಪಿ ಮಸೀದಿಯಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಆಧುನಿಕ ತಂತ್ರಜ್ಞಾನದ ತಳಹದಿಯ ಮೇಲೆ ವೈಜ್ಞಾನಿಕವಾಗಿ ಸರ್ವೆ ಮಾಡಿದೆ ಎಂದು ಲೇಖಕರೂ ಆದ ಖ್ಯಾತ ಇತಿಹಾಸಕಾರ ಡಾ.ವಿಕ್ರಂ ಸಂಪತ್ ಹೇಳಿದರು.

ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಇಂದು ಮೈಸೂರು ಲಿಟರರಿ ಫೆಸ್ಟ್ ಆಯೋಜಿಸಿದ್ದ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 'ಇಂದು ಏಷಿಯಾದ ಇತಿಹಾಸ ಮತ್ತು ಈಗಿನ ಪರಿಣಾಮಗಳು' ಕುರಿತ ವಿಚಾರಗೋಷ್ಠಿಯಲ್ಲಿ ಮಾತನಾಡಿದ ಅವರು, ಜ್ಞಾನವಾಪಿ ಮಸೀದಿಯ ಅಂಗಳದಲ್ಲಿ ಆಧುನಿಕತೆಯ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ವೈಜ್ಞಾನಿಕವಾಗಿ ಸಮೀಕ್ಷೆ ಮಾಡಿರುವ ಕಾರಣ ಈ ಬಗ್ಗೆ ಅನುಮಾನ ವ್ಯಕ್ತಪಡಿಸುವುದು ಸರಿಯಲ್ಲ ಎಂದರು.

ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು ಜ್ಞಾನವಾಪಿ ಮಸೀದಿ ಅಂಗಳದಲ್ಲಿ ದೊರೆತಿರುವ ಶಾಸನಗಳ ಕುರುಹುಗಳನ್ನು ಕೂಡ ಕಲೆ ಹಾಕಿದ್ದು, ಸರ್ವೆ ವೇಳೆ ವಾಸ್ತವತೆಯ ತಳಹದಿಯಲ್ಲಿ ಅದನ್ನು ಅರ್ಥೈಸಲಾಗಿದೆ ಎಂದರು.

ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು ಕಾಶಿಯ ಜ್ಞಾನವಾಪಿ ಮಸೀದಿ ಕುರಿತಂತೆ 800 ಪುಟಗಳ ವರದಿ ನೀಡಿದೆ. ಆ ವರದಿಯಲ್ಲಿ ಆಧುನಿಕ ತಂತ್ರಜ್ಞಾನದಿಂದ ನಡೆಸಿರುವ ವೈಜ್ಞಾನಿಕ ಸರ್ವೆಯ ಅಂಶಗಳಿವೆ ಎಂದು ತಿಳಿಸಿದರು.

ಕಾಶಿಯಲ್ಲಿ ಮುಕ್ತಿ ಅಥವಾ ಮೋಕ್ಷ ದೊರೆಯುತ್ತದೆ ಎಂಬ ನಂಬಿಕೆ ಇದೆ. ಈ ಬಗ್ಗೆ ಬಹಳಷ್ಟು ಪೌರಾಣಿಕ ಸಂಗತಿಗಳು ಈ ನಂಬಿಕೆಯನ್ನು ಬಲಪಡಿಸುತ್ತದೆ ಎಂದು ಹೇಳಿದರು.

ಭಾರತದಲ್ಲಿ ಸಾವಿರಾರು ದೇವಸ್ಥಾನಗಳು ದಾಳಿಗೊಳಗಾಗಿವೆ. ಕೆಲವನ್ನು ಧರಶಾಯಿಗೊಳಿಸಿದಾಗ ಮತ್ತೆ ಪುನರ್ ನಿರ್ಮಾಣ ಮಾಡಲಾಗಿದೆ ಎಂದು ಡಾ.ವಿಕ್ರಂ ಸಂಪತ್ ತಿಳಿಸಿದರು. ಲೇಖಕ ಪ್ರೊ.ಜಿ.ಎಲ್. ಶೇಖರ್ ವಿಚಾರಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಸಾಹಿತ್ಯವನ್ನು ಸರಳ, ವೇಗವಾಗಿ ಓದುಗರಿಗೆ ತಲುಪಿಸುವ ಮಾರ್ಗ ಸಾಮಾಜಿಕ ಜಾಲತಾಣ

ಸಾಹಿತಿಗಳ ಒಕ್ಕೊರಲ ಅಭಿಮತ

ಮೈಸೂರು, ಜು.7(ಎಸ್‌ಬಿಡಿ)– ಸಾಮಾಜಿಕ ಜಾಲತಾಣಗಳು ಸಾಹಿತ್ಯವನ್ನು ಸರಳ ಹಾಗೂ ವೇಗವಾಗಿ ಓದುಗರಿಗೆ ತಲುಪಿಸುವ ಆಧುನಿಕ ಮಾಧ್ಯಮ.

ಇದು ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 'ಆನ್ ಲೈನ್ ಸಂಬಂಧಗಳ ಸಮಾಜದಲ್ಲಿ ಕವನಗಳ ಪ್ರಸ್ತುತತೆ' ಕುರಿತ ಸಂವಾದದಲ್ಲಿ ಸಾಹಿತಿಗಳಿಂದ ವ್ಯಕ್ತವಾದ ಒಕ್ಕೊರಲ ಅಭಿಪ್ರಾಯ.

ಈಗ ಕವಿತೆ ಬರವಣಿಗೆ ಬಹಳ ಸುಲಭವಾಗಿದೆ. ಹಿರಿಯ ಕವಿಗಳ ಮುಂದೆ ಯುವ ಬರಹಗಾರರು ಸ್ವರಚಿತ ಕವನಗಳನ್ನು ವಾಚಿಸಿ, ಅಭಿಪ್ರಾಯ ಹಾಗೂ ಸಲಹೆ ಪಡೆಯುವ ಕಾಲವಲ್ಲ. ಈಗ ಕ್ಷಣದಲ್ಲೇ ಅಂತರ್ಜಾಲದ ಮೂಲಕ ಹಂಚಬಹುದು. ಓದುಗರ ತಲುಪುವ ಮಾರ್ಗ ಬಹಳ ಸುಲಭವಾಗಿದೆ. ಆದರೆ ಬರವಣಿಗೆ ಗುಣಮಟ್ಟ ಕಳೆದುಕೊಂಡಿದೆಯೇ? ಎಂಬ ಹೆಚ್.ಎಸ್.ಶಿವಪ್ರಕಾಶ್ ಪ್ರಶ್ನೆಗೆ ಸಾಹಿತಿಗಳಾದ ರಾಜೇಂದ್ರ ಪ್ರಸಾದ್, ತಹಶೀಲ್ದಾರ್ ಡಾ.ಬಿ.ಆರ್.ಶ್ರುತಿ, ಎಂ.ಎಸ್.ಶೇಖರ್ ಹಾಗೂ ಮಧುರಾಣಿ ಪ್ರತಿಕ್ರಿಯಿಸಿ, ಸಾಮಾಜಿಕ ಜಾಲತಾಣಗಳು ವಿಪುಲ ಬರಹಗಾರರಿಗೆ ವೇದಿಕೆ ಕಲ್ಪಿಸಿರುವುದನ್ನು ಸಮ್ಮತಿಸಿದರು.



'ಆನ್‌ಲೈನ್ ಸಂಬಂಧಗಳ ಸಮಾಜದಲ್ಲಿ ಕವನಗಳ ಪ್ರಸ್ತುತತೆ' ಕುರಿತ ಸಂವಾದದಲ್ಲಿ ರಾಜೇಂದ್ರ ಪ್ರಸಾದ್ ಮಾತನಾಡಿದರು. ಮಧುರಾಣಿ, ಡಾ.ಬಿ.ಆರ್.ಶ್ರುತಿ, ಹೆಚ್.ಎಸ್.ಶಿವಪ್ರಕಾಶ್ ಹಾಗೂ ಎಂ.ಎಸ್.ಶೇಖರ್ ಚಿತ್ರದಲ್ಲಿದ್ದಾರೆ.

ಡಾ.ಬಿ.ಆರ್.ಶ್ರುತಿ ಅವರು ಸಾಮಾಜಿಕ ಮಾಧ್ಯಮಗಳಿಂದ ಬರಹಗಳ ಗುಣಮಟ್ಟ ಕಡಿಮೆಯಾಗುತ್ತಿದೆ ಎನ್ನಲಾಗದು. ಪ್ರಕಟಣೆಗೆ ಕಾಯುವ, ಮುದ್ರಣ ಮಾಧ್ಯಮದ ಅವಲಂಬನೆ ಇಲ್ಲ. ತಕ್ಷಣವೇ ಜಾಲತಾಣದಲ್ಲಿ ಓದುಗರ ತಲುಪಿಸಬಹುದು. ಕೂಡಲೇ ಪ್ರತಿಕ್ರಿಯೆ ಜೊತೆಗೆ ಆರೋಗ್ಯಕರ ಚರ್ಚೆಯೂ ಆಗುತ್ತದೆ. ಸರಿಯಾಗಿ ಬಳಸಿಕೊಂಡರೆ ಸಾಮಾಜಿಕ ಜಾಲತಾಣ ಒಂದು ವರದಾನ ಎಂದು ಅಭಿಪ್ರಾಯಿಸಿ, ಸ್ವರಚಿತ 'ಅಂತರ' ಹಾಗೂ 'ಅವಳು' ಕವಿತೆಗಳನ್ನು ವಾಚಿಸಿದರು.

ಎಂ.ಎಸ್.ಶೇಖರ್, ವಿಜ್ಞಾನದ ಅನ್ವೇಷಣೆಯ ಬಳಕೆ ನಮ್ಮ ವಿವೇಕಕ್ಕೆ ಬಿಟ್ಟಿದ್ದು. ಆದರೆ ಜಾಲತಾಣಗಳು ಹದಿಹರೆಯದ ಮನೋಭಾವಗಳನ್ನು ಹೇಳಲಿಕ್ಕಷ್ಟೇ ಬಳಸಲಾಗುತ್ತಿದ್ದು, ಗಂಭೀರ ಕವಿತೆಗಳ ಪ್ರವೇಶವಾಗಬೇಕಿದೆ. ಕಾವ್ಯ ಕುದಿಯುವ ಪಾಕದಂತಿರಬೇಕು. ಅದು ಅಂತರಂಗದಲ್ಲಿ ಹುಟ್ಟಬೇಕೆಂದು ತಿಳಿಸಿ, 'ಕೃಷ್ಣವರ್ಣದ ಪುಟ್ಟ ಪೋರ' ಕವಿತೆ ವಾಚನ ಮಾಡಿದರು.

ರಾಜೇಂದ್ರಪ್ರಸಾದ್ ಮಾತನಾಡಿ, ಒಂದೂವರೆ ದಶಕದಿಂದ ಸಾಹಿತ್ಯ ಕ್ಷೇತ್ರದಲ್ಲಿ ಆನ್ ಲೈನ್ ಆಫ್‌ಲೈನ್ ಚರ್ಚೆ ನಡೆದಿದೆ. ಹಿಂದೆ ಪತ್ರಿಕೆ, ಸಾಪ್ತಾಹಿಕಗಳಲ್ಲೇ ಕವಿತೆ ಪ್ರಕಟವಾಗಬೇಕಿತ್ತು. ಕನ್ನಡದಲ್ಲಿ ಬ್ಲಾಗ್ ಶುರುವಾದ ನಂತರ ಬರಹದ ತುಡಿತ ಇದ್ದ ವರಿಗೆ ವೇದಿಕೆ ಸಿಕ್ಕಿತು. ಅಂದು ಅಸಮಾಧಾನ, ಅಸೂಯೆ, ಅಸಹನೆ ತೋರಿದವರು ಈಗ ಫೇಸ್‌ಬುಕ್‌ನಲ್ಲಿ ಬರೆಯುತ್ತಿದ್ದಾರೆ. ಬದಲಾದ ಕಾಲಕ್ಕೆ ಇದು ತುರ್ತು ಕೂಡ. ಆದರೆ ಸ್ವವಿಮರ್ಶೆ ತುಂಬಾ ಮುಖ್ಯ. ಸಾಮಾಜಿಕ ಜಾಲ ತಾಣದಿಂದ ಬರಹಗಾರರ ಸಂಖ್ಯೆ ಹೆಚ್ಚಾಗಿದೆ. ಆದರೆ ಓದುಗರ ಸಂಖ್ಯೆ ನಿಗೂಢ ಎಂದು ಅಭಿಪ್ರಾಯಿಸಿ, 'ನಕ್ಷತ್ರದ ಗಿಡ' ಕವಿತೆ ಪ್ರಸ್ತುತಪಡಿಸಿದರು.

ಮಧುರಾಣಿ ಅವರು, ಸಾಮಾಜಿಕ ಮಾಧ್ಯಮ ಎಲ್ಲರಿಗೂ ಮುಕ್ತ ವೇದಿಕೆಯಾಗಿದೆ. ಆದರೆ ವೇದಿಕೆ ಯಾವುದಾದರೂ ಬರವಣಿಗೆ ಸೊಗಡು ಹಾಗೂ ಮೂಲತತ್ವ ಕಾಪಾಡಿಕೊಳ್ಳುವುದು ಬರಹಗಾರನ ಜವಾಬ್ದಾರಿ. ಹೊಸ ವೇದಿಕೆಗಳಲ್ಲಿ ಬರೆಯುವಾಗ ತಾಳ್ಮೆ ಇರಬೇಕು. ತಪ್ಪು–ಸರಿ ಹೇಳುವಾಗ ಯೋಚಿಸುವುದು ಒಳ್ಳೆಯದು. ಮೂಲತತ್ವ ಉಳಿಸಿಕೊಳ್ಳದಿದ್ದರೆ ಬರಹದ ಅಸ್ಮಿತೆ ಕಳೆದುಹೋಗುತ್ತದೆ ಎಂದು ಹೇಳಿ, 'ನನ್ನ ಜಾಸುಸಿ ಹುಡುಗ' ಮತ್ತು 'ಚಿಟ್ಟೆ' ಕವಿತೆಗಳನ್ನು ವಾಚಿಸಿದರು.

ಸಂವಾದ ನಿರ್ವಹಿಸಿದ ಸಾಹಿತಿ ಹೆಚ್.ಎಸ್.ಶಿವಪ್ರಕಾಶ್ ಮಾತನಾಡಿ, ನಾನು ಅನುವಾದ ಕಾವ್ಯಗಳನ್ನು ಪೋಸ್ಟ್ ಮಾಡುತ್ತೇನೆ. ಓದುಗರನ್ನು ಮುಟ್ಟುವ ಸರಳ ಹಾಗೂ ವೇಗದ ಮಾರ್ಗ ಸಾಮಾಜಿಕ ಜಾಲತಾಣ. ಜನರನ್ನು ತಲುಪುವ ಯಾವ ಪ್ರಕಾರವೂ ಕಳಪೆಯಲ್ಲ. ಮೊದಲು ಶಿಲೆ, ನಂತರ ತಾಳೆಗರಿಯಲ್ಲಿ ಬರೆದರು. ಈಗ ಸಾಮಾಜಿಕ ಮಾಧ್ಯಮ ಪರಿಣಾಮಕಾರಿಯಾಗಿದೆ. ಕಲ್ಲು, ತಾಳೆಗರಿ, ಕಾಗದದಲ್ಲಿ ಮಾತ್ರವಲ್ಲ ಅಂತರ್ಜಾಲದ ಹಾಳೆಯಲ್ಲೂ ಕಾವ್ಯ ಮೂಡಬಹುದು. ಸಾಮಾಜಿಕ ಮಾಧ್ಯಮದಿಂದ ಕಾವ್ಯದ ಸಂಸ್ಕೃತಿ ಹೆಚ್ಚು ಪ್ರಜಾಸತ್ತಾತ್ಮಕವಾಗಿದೆ ಎಂದು ಅಭಿಪ್ರಾಯಿಸಿ, 'ಹಣ್ಣುಗಳು' ಕಾವ್ಯ ವಾಚನ ಮಾಡಿದರು.

ಮೈಸೂರು ಸಾಹಿತ್ಯ ಉತ್ಸವದ ಮತ್ತಷ್ಟು ಸುದ್ದಿಗಳು ಪುಟ–10ರಲ್ಲಿ

ಮಹಿಳಾ ಸಾಹಿತಿಗಳಿಂದ ಕೃತಿಗಳ ಸಂಗತಿ ವಿವರಣೆ

ಮೈಸೂರು, ಜು.7(ಎಸ್‌ಬಿಡಿ)– 'ಮೈಸೂರು ಸಾಹಿತ್ಯ ಸಂಭ್ರಮ'ದಲ್ಲಿ 'ಅಂತರ್ಜಾಲ ಯುಗದಲ್ಲಿ ಸಂಬಂಧಗಳ ಸುಳಿಗಳು' ಕುರಿತು ಅಭಿಪ್ರಾಯ ಹಂಚಿಕೊಂಡ ಮಹಿಳಾ ಸಾಹಿತಿಗಳು, ತಮ್ಮ ಕೃತಿಗಳ ಪ್ರಮುಖ ಸಂಗತಿಗಳ ಬಗ್ಗೆ ವಿವರಣೆ ನೀಡಿದರು.

ಗಾರ್ಡನಿಯಾ ವೇದಿಕೆಯಲ್ಲಿ ಸಾಹಿತಿಗಳಾದ ವಸುಮತಿ ಉಡುಪ, ಎನ್. ಸಂಧ್ಯಾರಾಣಿ, ಉಷಾ ನರಸಿಂಹನ್ ಅವರೊಂದಿಗೆ ಲೇಖಕಿ ಬಿ.ಆರ್.ನಾಗರತ್ನ ಸಂವಾದ ನಡೆಸಿಕೊಟ್ಟರು. ಓದುಗರಲ್ಲಿ ಮೂಡಬಹುದಾದ ಪ್ರಶ್ನೆಗಳು, ಅಭಿಪ್ರಾಯಗಳಿಗೆ ಸಾಹಿತಿಗಳಿಂದ ಪ್ರತಿಕ್ರಿಯೆ ಪಡೆದರು.

ವಿಷಯದ ಹಂಗಿಲ್ಲ: ವಸುಮತಿ ಉಡುಪ ಅವರು 'ಸುಲಲಿತ ಪ್ರಬಂಧಗಳ ಸಂಕಲನ' ಕೃತಿ ಹಾಗೂ ಅದರಲ್ಲಿನ 'ಕಾವ್ಯ–ಕುಂಚ–ಚಿತ್ರ' ಪ್ರಬಂಧ ಕುರಿತು ನಿರ್ವಾಹಕರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿ, ಪ್ರಬಂಧವೆಂದರೆ ವಿಷಯದ ಹಂಗಿಲ್ಲದ ಸಾಹಿತ್ಯದ ಪ್ರಕಾರ. ಗಂಭೀರವಲ್ಲದ ಪ್ರಬಂಧಗಳಾಗಿದ್ದರಿಂದ ಸುಲಲಿತ ಪ್ರಬಂಧ ಸಂಕಲನ ಎಂಬ ಶೀರ್ಷಿಕೆ ನೀಡಿದ್ದೇನೆ. ಓದುಗರಿಗೆ ಪರಿಣಾಮಕಾರಿಯಾಗಿ ಮನದಟ್ಟಾಗಲಿ ಎನ್ನುವ ಕಾರಣಕ್ಕೆ ಕಾವ್ಯ–ಕುಂಚ–ಚಿತ್ರ ಪ್ರಬಂಧದಲ್ಲಿ ಉದ್ಯಾನವೇ ಹೇಳುವಂತೆ ಪ್ರಸ್ತುತಪಡಿಸಿದ್ದು, ಇದೊಂದು ಹೊಸ ಪ್ರಯೋಗವಾಗಿದೆ ಎಂದು ಹೇಳಿದರು.

ಪುರುಷರಿಗೆ ಅನ್ಯಾಯ: 'ನಾತಿಚರಾಮಿ' ಕಾದಂಬರಿಯಲ್ಲಿ ಶ್ರೀಮಂತ, ಮಧ್ಯಮ ಹಾಗೂ ಬಡ ದಂಪತಿ ಪಾತ್ರಗಳಿವೆ. ಸಮಾಜ ವಿವಾಹ ಬಂಧನವನ್ನು ನೈತಿಕ ನೆಲೆಗಟ್ಟಿನಲ್ಲಿ ರೂಪಿಸಿದೆ. ಆದರೆ ಮರು ವಿವಾಹಕ್ಕೆ ಒಪ್ಪದ ಗೌರಿ, ವಿವಾಹೇತರ ದೈಹಿಕ ಸಾಂಗತ್ಯಕ್ಕೆ ಮುಂದಾಗಿದ್ದು ಸರಿಯೇ? ಎಂಬ ನಿರ್ವಾಹಕರ ಪ್ರಶ್ನೆಗೆ ಕಾದಂಬರಿ ಕರ್ತೃ ಸಂಧ್ಯಾರಾಣಿ ಪ್ರತಿಕ್ರಿಯಿಸಿ, ದೈಹಿಕ ಕರೆಗೆ ಓಗೊಡೋದು ಸರಿಯೇ? ಅಥವಾ ತಪ್ಪಾ? ಅನ್ನುವುದಕ್ಕಿಂತ ತಪ್ಪುಗಳನ್ನು ಹೆಣ್ಣಿನ ಮೇಲೆ ಹೊರಿಸಲಾಗುತ್ತದೆ ಎನ್ನುವುದು ನಿಜ. ತಪ್ಪು–ಸರಿ ಹೇಳುವುದು ಬರಹಗಾರ್ತಿ ಕೆಲಸವಲ್ಲ. ಅದು ಓದುವವರ ನಿರ್ಧಾರಕ್ಕೆ ಬಿಟ್ಟಿದ್ದು. ಹೆಣ್ಣಿಗೆ ಅವಳ ಸಂಸಾರದ ಜೊತೆಗೆ ಇನ್ನೊಬ್ಬರ ಸಂಸಾರದ ಹೊಣೆಯನ್ನೂ ಹೊರಿಸುವ ಮೂಲಕ ಗಂಡಸರನ್ನು ಜವಾಬ್ದಾರಿಗಳಿಂದ ಮುಕ್ತಗೊಳಿಸಲಾಗುತ್ತದೆ. ಗಂಡಸರ ಮೇಲೆ ಯಾವುದೇ ಜವಾಬ್ದಾರಿ ಹಾಕದೆ ಅನ್ಯಾಯ ಮಾಡುತ್ತಿದ್ದೇವೆ ಎಂದೆನಿಸುತ್ತದೆ ಎಂದರು.

ಮರಗಳೂ ಪ್ರೀತಿಗೆ ಸ್ಪಂದನೆ: ಉಷಾ ನರಸಿಂಹನ್ ಅವರು ತಮ್ಮ 'ಕದಳಿ ಕಲ್ಯಾಣ' ನಾಟಕ ಕುರಿತು ಮಾತನಾಡಿ, ಅಂಗಾರಕ ದೋಷ ಇರುವ ಮಂಗಳೆಯನ್ನು ಬಾಳೆ ಮರ(ಕದಳಿ)ದೊಂದಿಗೆ ವಿವಾಹ ಮಾಡಿ, ನಂತರ ನಿಗದಿಯಾಗಿದ್ದ ಯುವಕನೊಂದಿಗೆ ವಿವಾಹ ಮಾಡಲಾಗುತ್ತದೆ. ಬರಹಗಾರರು ಕೆಲವು ಭ್ರಮೆಗಳನ್ನು ಭಾವಿಸಿಕೊಂಡು ಅದನ್ನು ಓದುಗರಿಗೂ ನೀಡಬೇಕಾಗುತ್ತದೆ. ಸಸ್ಯಗಳಿಗೆ ಜೀವ ಇದೆ ಎಂದು ವಿಜ್ಞಾನವೂ ಹೇಳಿದೆ. ಅವು ಭಾವನೆ, ಸಂಗೀತ, ನಲ್ನುಡಿಗೆ ಸ್ಪಂದಿಸುತ್ತವೆ ಎಂದು ಹೇಳಲಾಗುತ್ತದೆ. ಮರಗಳಿಗೂ ಜೀವ ಇದೆ ಎನ್ನುವುದನ್ನು ನಾಟಕದಲ್ಲಿ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ದಿದ್ದೇನೆ. ಇದನ್ನು ಭ್ರಮೆ ಎಂದು ತಿಳಿಯುವುದು ಓದುಗರ ಸ್ವಾತಂತ್ರ್ಯ. ಕನ್ನಡದ ನಾಟಕಗಳಲ್ಲಿ ಈ ರೀತಿಯ ಪ್ರಸಂಗಗಳು ಸಾಕಷ್ಟಿವೆ. ಕದಳಿ ಜೊತೆಗಿನ ವಿಷಮ ಸಂಕರದಿಂದ ಮಂಗಳೆಗೆ ಗಂಡು ಮಗು ಜನಿಸುತ್ತದೆ. ಮಗುವಿನೊಂದಿಗೆ ಉದರದಲ್ಲಿ ಬಾಳೆ ಗಡ್ಡೆಯೂ ಇರುತ್ತದೆ. ನಂತರದಲ್ಲಿ ಮಂಗಳೆ ಮತ್ತೊಂದು ಮದುವೆ ಒಪ್ಪಿಕೊಂಡು ಗೌಡರ ಮನೆ ಹಿರಿಯ ಸೊಸೆಯಾಗಿ, ಕಡೆಗೆ ದುರಂತ ನಾಯಕಿಯಾಗುತ್ತಾಳೆ. ಎಲ್ಲಾ ಪ್ರಯತ್ನಗಳ ಆಚೆಗೆ ವಿಧಿಲಿಖಿತ ಎಂಬುದಿದೆ. ಇಲ್ಲಿಯೂ ಕೂಡ ಎಲ್ಲವನ್ನೂ ವಿಧಿ ಮೇಲೆ ಹಾಕಿಬಿಡೋಣ ಎಂದರು.



'ಆನ್‌ಲೈನ್ ಸಂಬಂಧಗಳ ಸಮಾಜದಲ್ಲಿ ಕವನಗಳ ಪ್ರಸ್ತುತತೆ' ಕುರಿತ ಸಂವಾದದಲ್ಲಿ ಎನ್.ಸಂಧ್ಯಾರಾಣಿ ಮಾತನಾಡಿದರು. ಉಷಾ ನರಸಿಂಹನ್, ವಸುಮತಿ ಉಡುಪ ಹಾಗೂ ಬಿ.ಆರ್.ನಾಗರತ್ನ ಚಿತ್ರದಲ್ಲಿದ್ದಾರೆ.

ಸಿನಿಮಾ ನಿರ್ಮಾಣಕ್ಕೆ ಬಾಲಿವುಡ್‌ನಲ್ಲಿ

ಕಾದಂಬರಿಗಿಂತ ಚಿತ್ರಕಥಾ ಸಾಹಿತ್ಯಕ್ಕೆ ಆದ್ಯತೆ

— ಲೇಖಕ ದೇವ್‌ಪ್ರಸಾದ್ —



ಮೈಸೂರು ಲಿಟರೇಚರ್ ಫೆಸ್ಟ್‌ನಲ್ಲಿ 'ಸ್ಪೈ ಅಡ್ವೆಂಚರ್ಸ್; ಓದುಗರನ್ನು ಅಂಚಿನಲ್ಲಿ ಇಡುವುದು ಹೇಗೆ?' ಕುರಿತು ಭಾನುವಾರ ನಡೆದ ಚರ್ಚಾಗೋಷ್ಠಿಯಲ್ಲಿ (ಎಡದಿಂದ) ಲೇಖಕರಾದ ಹರೀಶ್ ವಾಸುದೇವನ್, ಮಾರ್ಕ್ ಡೇವಿಡ್ ಅಬ್ಬೋಟ್, ಕಿರಣ್ ಕೆ.ಅಬ್ರಹಾಂ, ದೇವ್‌ಪ್ರಸಾದ್ ಅವರು ಪಾಲ್ಗೊಂಡಿದ್ದರು.

ಮೈಸೂರು, ಜು.7(ಪಿಎಂ)– ಬಾಲಿವುಡ್‌ನ ಹಿಂದಿ ಸಿನಿಮಾಗಳ ನಿರ್ಮಾಪಕರಲ್ಲಿ ಬಹುತೇಕ ಮಂದಿ ಸಿನಿಮಾ ನಿರ್ಮಾಣಕ್ಕಾಗಿ ಕಾದಂಬರಿಗೆ ಬದಲಾಗಿ ಚಿತ್ರಕಥಾ ಸಾಹಿತ್ಯಕ್ಕೆ ಹೆಚ್ಚು ಆದ್ಯತೆ ನೀಡುತ್ತಾರೆ ಎಂದು ಲೇಖಕ ದೇವ್ ಪ್ರಸಾದ್ ಹೇಳಿದರು.

ಮೈಸೂರು ಲಿಟರೇಚರ್ ಫೆಸ್ಟ್‌ನಲ್ಲಿ 'ಸ್ಪೈ ಅಡ್ವೆಂಚರ್ಸ್ ; ಓದುಗರನ್ನು ಅಂಚಿನಲ್ಲಿ ಇಡುವುದು ಹೇಗೆ? (Spy Adventures. How to keep readers on edge?) ಕುರಿತು ಭಾನುವಾರ ನಡೆದ ಆಂಗ್ಲ (ಇಂಗ್ಲಿಷ್) ಚರ್ಚಾಗೋಷ್ಠಿಯಲ್ಲಿ ನಿಮ್ಮಂತಹ ಲೇಖಕರು ಭಾರತೀಯ ಸಿನಿಮಾಗಳಿಗೆ ಕಥಾ ಸಾಹಿತ್ಯ ಒದಗಿಸಲು ಹೆಚ್ಚು ಆದ್ಯತೆ ನೀಡಬಹುದಲ್ಲವೇ? ಎಂಬ ಸಭಿಕರೊಬ್ಬರ ಪ್ರಶ್ನೆಗೆ ಅವರು ಉತ್ತರಿಸಿದರು.

ವಿಶೇಷವಾಗಿ ಬಾಲಿವುಡ್ ಚಿತ್ರರಂಗದ ಬಗ್ಗೆ ಉಲ್ಲೇಖಿಸಿದ ದೇವ್ ಪ್ರಸಾದ್, ಬೆಂಗಳೂರು ಮೂಲದ ನಮ್ಮಂತಹ ಲೇಖಕರಿಗೆ ಬಾಲಿವುಡ್ ಕೇಂದ್ರ ಬಿಂದುವಾದ ಮುಂಬೈ ಸಂಪರ್ಕ ಸಾಧಿಸುವುದಕ್ಕೆ ಹೆಚ್ಚು ಸಮಯ ಬೇಕಾಗುತ್ತದೆ. ಹಾಗಾಗಿ ನಮಗೆ ಅಲ್ಲಿ ಅವಕಾಶ ಪಡೆಯಲು ಕಷ್ಟಸಾಧ್ಯ ಎಂದು ತಿಳಿಸಿದರು.

ನಿರ್ದೇಶಕರು, ನಿರ್ಮಾಪಕರು, ಪ್ರಾಯೋಜಕರು, ಹೂಡಿಕೆದಾರರು, ನಟರು ಎಲ್ಲರೂ ಮುಂಬೈನಲ್ಲೇ ಇರುತ್ತಾರೆ. ದೂರದ ಬೆಂಗಳೂರಿನಲ್ಲಿ ಇರುವ ನಾವು ಮುಂಬೈಗೆ ಒಂದೆರಡು ಗಂಟೆಯಲ್ಲಿ ಬರುವಂತೆ ಆಹ್ವಾನ ನೀಡಿದರೆ ಹೋಗಲು ಹೇಗೆ ಸಾಧ್ಯ ಅಲ್ಲವೇ? ನಮ್ಮಿಂದ ಹಸ್ತಪ್ರತಿ ತೆಗೆದುಕೊಂಡು ಹೋಗಲು ಒಬ್ಬ ಏಜೆಂಟ್ ಆದರೂ ಇರಬೇಕಾಗುತ್ತದೆ. ಇದೊಂದು ಸಮಸ್ಯೆಯಾದರೆ, ಬಹುತೇಕ ನಿರ್ಮಾಪಕರು ಹಾಗೂ ಸಿನಿಮಾ ಮಂದಿ ಚಿತ್ರಕಥಾ ಸಾಹಿತ್ಯ ಅಪೇಕ್ಷಿಸುತ್ತಾರೆ. ಕಾದಂಬರಿಯಂತಹ ಸಾಹಿತ್ಯಕ್ಕೆ ಬಹುತೇಕ ಮಂದಿ ಆಸಕ್ತಿ ತೋರುವುದಿಲ್ಲ. ಜೊತೆಗೆ ಚಿತ್ರಕಥೆ ರಚನೆಗೆ ಅದರದೇ ಆದ ಪರಿಣತಿ ಬೇಕಾಗುತ್ತದೆ ಎಂದು ಹೇಳಿದರು.

'ರಿಡೆಂಪ್ಶನ್' ಕಾದಂಬರಿ ಕರ್ತೃ ಹಾಗೂ ಬೆಂಗಳೂರು ಮೂಲದ ಲೇಖಕ ಹರೀಶ್ ವಾಸುದೇವನ್ ಮಾತನಾಡಿ, ಐತಿಹಾಸಿಕ ಅಂಶಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಇತಿಹಾಸಕ್ಕೆ ನಿಷ್ಠರಾಗಿರುವುದು ಸೂಕ್ತ. ನನ್ನ ಕೃತಿಯು ಬಹುತೇಕ ಕಾಲ್ಪನಿಕ ಅಂಶಗಳನ್ನು ಒಳಗೊಂಡಿದೆ. ನಿಜ ಜೀವನದಲ್ಲಿ ನಡೆದ ಪ್ರಚೋದನಾಕಾರಿ ಘಟನೆಯ ಒಂದು ಅಂಶ ಹೊರತುಪಡಿಸಿದರೆ, ಇಡೀ ಕಥೆ ಸಂಪೂರ್ಣ ಕಾಲ್ಪನಿಕವಾಗಿದೆ ಎಂದು ತಿಳಿಸಿದರು. ಲೇಖಕ ಮಾರ್ಕ್ ಡೇವಿಡ್ ಅಬ್ಬೋಟ್ ಚರ್ಚಾಗೋಷ್ಠಿ ನಿರೂಪಿಸಿದರು. ಲೇಖಕ ಕಿರಣ್ ಕೆ.ಅಬ್ರಹಾಂ ಸಹ ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಭಾರತೀಯ ನಾಯಕತ್ವ ಕುರಿತು ಡಾ.ಬಾಲಸುಬ್ರಹ್ಮಣ್ಯಂ ವಿವರಣೆ

ಮೈಸೂರು, ಜು.7(ಬಿಎಲ್‌ಯು)– ಸ್ವಾಮಿ ವಿವೇಕಾನಂದ ಯೂತ್ ಮೂಮೆಂಟ್‌ನ ಸಂಸ್ಥಾಪಕರೂ ಆದ ಲೇಖಕ ಡಾ.ಆರ್. ಬಾಲಸುಬ್ರಹ್ಮಣ್ಯಂ ಬಹುಮುಖ ವ್ಯಕ್ತಿತ್ವದ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಅಲ್ಲದೆ ನಾಯಕತ್ವ ತರಬೇತಿದಾರರಾಗಿ, ವಿದ್ವಾಂಸರಾಗಿ, ಲೇಖಕರಾಗಿ, ಸಾರ್ವಜನಿಕ ನೀತಿಯ ಪ್ರತಿಪಾದಕರಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಬಗ್ಗೆ ಆಳವಾಗಿ ಅಧ್ಯಯನ ಮಾಡುವ ವಿರಳ ಪಯಣವನ್ನು ಸಾರ್ಥಕವಾಗಿ ಪೂರ್ಣಗೊಳಿಸಿದ್ದಾರೆ.

ಡಾ. ಬಾಲಸುಬ್ರಹ್ಮಣ್ಯಂ ಬರೆದಿರುವ 'ಪವರ್ ವಿತ್ಹಿನ್: ದ ಲೀಡರ್‌ಶಿಪ್ ಲೆಗೆಸಿ ಆಫ್ ನರೇಂದ್ರ ಮೋದಿ' ಪುಸ್ತಕದಲ್ಲಿ ನರೇಂದ್ರ ಮೋದಿ ಬಗ್ಗೆ ಆಳವಾಗಿ ಅಧ್ಯಯನ ಮಾಡಿರುವ ಬಹಳಷ್ಟು ಅಂಶಗಳು ಅನಾವರಣಗೊಂಡಿವೆ.

ಈ ಮೂಲಕ ಯಾರಿಗೂ ಲಭ್ಯವಾಗದ ಅಪರೂಪದ ಅನುಭವ ಡಾ.ಬಾಲಸುಬ್ರಹ್ಮಣ್ಯಂ ಅವರದಾಗಿದೆ. ನರೇಂದ್ರ ಮೋದಿ ಅವರ 50 ವರ್ಷದ ಸಾರ್ವಜನಿಕ ಜೀವನದ ಬಗ್ಗೆ ಡಾ.ಬಾಲಸುಬ್ರಹ್ಮಣ್ಯಂ ಸಮಗ್ರ ವಿವರವನ್ನು ತಮ್ಮ ಪುಸ್ತಕದಲ್ಲಿ ನೀಡಿದ್ದಾರೆ.

ಕಳೆದ 12 ವರ್ಷದ ಅನುಭವವನ್ನು ಪುಸ್ತಕದ ರೂಪದಲ್ಲಿ ಅಚ್ಚುಗೊಳಿಸಿರುವ ಡಾ.ಬಾಲಸುಬ್ರಹ್ಮಣ್ಯಂ, ಮೈಸೂರಿನ ಸಾಹಿತ್ಯ ಪ್ರಿಯರಿಗೆ ತಮ್ಮ ಈ ಅನುಭವದ ಹಲವು ಮಹತ್ವದ ವಿಚಾರಗಳನ್ನು ತಿಳಿಸಿದ್ದಾರೆ.



ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಭಾನುವಾರ ಮೈಸೂರು ಲಿಟರರಿ ಫೆಸ್ಟ್ ಆಯೋಜಿಸಿದ್ದ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ಲೇಖಕ ಡಾ.ಆರ್.ಬಾಲಸುಬ್ರಹ್ಮಣ್ಯಂ ಅವರೊಂದಿಗೆ ವಿಚಾರಗೋಷ್ಠಿ ನಡೆಯಿತು. ಗೋಷ್ಠಿಯಲ್ಲಿ ಭಾಗವಹಿಸಿದ್ದ ದೀಪ್ತಿ ನವರತ್ನ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಇಂದು ಮೈಸೂರು ಲಿಟರರಿ ಫೆಸ್ಟ್ ಆಯೋಜಿಸಿದ್ದ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ಖ್ಯಾತ ಇತಿಹಾಸಕಾರ ಡಾ.ವಿಕ್ರಂ ಸಂಪತ್ ಅವರು ಡಾ. ಬಾಲಸುಬ್ರಹ್ಮಣ್ಯಂ ಬರೆದಿರುವ ಪವರ್ ವಿತ್ಹಿನ್: ದ ಲೀಡರ್‌ಶಿಪ್ ಲೆಗೆಸಿ ಆಫ್ ನರೇಂದ್ರ ಮೋದಿ ಪುಸ್ತಕ ಬಿಡುಗಡೆ ಮಾಡಿದರು. ನಂತರ ಡಾ.ಬಾಲಸುಬ್ರಹ್ಮಣ್ಯಂ ಜೊತೆ ವಿಚಾರಗೋಷ್ಠಿ ಆಯೋಜಿಸಲಾಗಿತ್ತು.

ಈ ವೇಳೆ ಮಾತನಾಡಿದ ಡಾ.ಬಾಲಸುಬ್ರಹ್ಮಣ್ಯಂ, ನರೇಂದ್ರ ಮೋದಿ ಅವರ ಸಾರ್ವಜನಿಕ ಜೀವನ ಕುರಿತ ಪುಸ್ತಕ ಬರೆದ ಕಾರಣಗಳನ್ನು ವಿವರಿಸಿದರು.

ನಾಯಕತ್ವ ಕುರಿತ ಅಧ್ಯಯನದ ಒಂದು ಸ್ಪಷ್ಟ ಉದಾಹರಣೆಯನ್ನು ಕೈಗೆತ್ತಿಕೊಳ್ಳುವುದು ನನ್ನ ಹಂಬಲವಾಗಿತ್ತು. ಅದರಲ್ಲೂ ಮುಖ್ಯವಾಗಿ ಭಾರತೀಯ ದೃಷ್ಟಿಕೋನದಲ್ಲಿ ನಾಯಕತ್ವವನ್ನು ಅಭ್ಯಸಿಸುವುದು ನನ್ನ ಮೂಲ ಉದ್ದೇಶವಾಗಿತ್ತು ಎಂದು ಡಾ.ಬಾಲಸುಬ್ರಹ್ಮಣ್ಯಂ ಪುಸ್ತಕ ಬರೆದ ಕಾರಣವನ್ನು ತೆರೆದಿಟ್ಟರು.

ನರೇಂದ್ರ ಮೋದಿ ಅವರ ಸಾರ್ವಜನಿಕ ಚಟುವಟಿಕೆಗಳನ್ನು ಹತ್ತಿರದಿಂದ ನೋಡುವ, ತಿಳಿದುಕೊಳ್ಳುವ ಮತ್ತು ಅವರೊಂದಿಗೆ ಚರ್ಚಿಸಿ ಖಚಿತಪಡಿಸಿಕೊಳ್ಳುವ ವಿರಳವಾದ ಅನುಭವ ನನ್ನದಾಗಿತ್ತು. ಇದರಿಂದ ಮತ್ತಷ್ಟು ಸಂಶೋಧಕರು ಭಾರತೀಯ ನಾಯಕತ್ವದ ಬಗ್ಗೆ ಅಧ್ಯಯನ ಮಾಡಲು ಈ ಪುಸ್ತಕ ಅನುಕೂಲಕರವಾಗಲಿದೆ ಎಂದು ಅಭಿಪ್ರಾಯಪಟ್ಟರು.

ನಮ್ಮ ಭಾರತೀಯ ಪರಂಪರೆಯಲ್ಲಿ ಕೃಷಿ ಇರಬಹುದು, ವಿಜ್ಞಾನ ಇರಬಹುದು, ಗಣಿತಕ್ಕೆ ಸಂಬಂಧಿಸಿದ ಕ್ಷೇತ್ರಗಳಿರಬಹುದು, ಎಲ್ಲದರಲ್ಲೂ ನಮ್ಮ ಇತಿಹಾಸದ ನಂಟಿದೆ. ಈ ಕುರಿತ ಜಾತಕ ಕಥೆ, ಪಂಚತಂತ್ರ ಗ್ರಂಥಗಳಲ್ಲಿ ಮತ್ತಷ್ಟು ಮೌಲ್ಯಯುತವಾದ ಅಂಶಗಳಿವೆ ಎಂದರು.

ನಾಯಕತ್ವ ಕುರಿತಂತೆ ತಮ್ಮ ವಿಚಾರ ಮಂಡನೆ ಮಾಡಿದ ಡಾ.ಬಾಲಸುಬ್ರಹ್ಮಣ್ಯಂ, ಶ್ರೀ ಕೃಷ್ಣನನ್ನು ಉದಾಹರಣೆಯಾಗಿ ನೀಡಿದರು. ಶ್ರೀ ಕೃಷ್ಣನನ್ನು ದೇವರೆಂದು ಪೂಜಿಸುತ್ತೇವೆ. ನಾಯಕತ್ವದ ಗುಣ ಹೊಂದಿರುವ ಕಾರಣ ಶ್ರೀ ಕೃಷ್ಣ ಪೂಜೆಗೆ ಯೋಗ್ಯವಾಗಿದ್ದಾನೆ ಎಂಬ ದೃಷ್ಟಿಯಿಂದ ಪೂಜಿಸುತ್ತೇವೆ ಎಂದು ಹೇಳಿದರು.

ಈ ಪುಸ್ತಕ ಬರೆಯುವ ವೇಳೆ ನನಗೆ ಎಲ್ಲಿಯೂ ಕೂಡ ಸಂಘರ್ಷದ ಅಂಶಗಳು ಇರಬಾರದು ಎಂಬ ಸ್ಪಷ್ಟತೆ ಇತ್ತು. ಒಟ್ಟಾರೆ ಈ ಪುಸ್ತಕದಿಂದ ನನ್ನ ಬೌದ್ಧಿಕತೆ ಮತ್ತಷ್ಟು ಹೆಚ್ಚಾಯಿತು ಎಂದು ಹೇಳಿದರು.

ತರುವಾಯ ಸಭಿಕರೊಂದಿಗೆ ನಡೆದ ಸಂವಾದದಲ್ಲಿ, ಈ ಪುಸ್ತಕ ಬರೆಯಬೇಕಾದರೆ ಹಲವು ಸವಾಲುಗಳನ್ನು ಮೆಟ್ಟಿ ನಿಲ್ಲಬೇಕಾಯಿತೆ ಎಂಬ ಪ್ರಶ್ನೆಗೆ ಉತ್ತರಿಸಿದ ಡಾ. ಬಾಲಸುಬ್ರಹ್ಮಣ್ಯಂ, ಮೊದಲಿಗೆ ಈ ಪುಸ್ತಕ ಬರೆಯಬೇಕೆ, ಬೇಡವೆ ಎಂದು ನನ್ನ ನಾನೇ ಪ್ರಶ್ನಿಸಿಕೊಂಡಿದ್ದೆ ಎಂದರು.

ಆದರೆ ಅಂತಿಮವಾಗಿ ಭಾರತೀಯ ನಾಯಕತ್ವ, ಬುದ್ಧಿಮತ್ತೆಯ ಜೀವಂತ ಉದಾಹರಣೆಯೊಂದಿಗೆ ನಾಯಕತ್ವದ ಆದರ್ಶವನ್ನು ವಿಶ್ವದ ಮುಂದಿಡಬೇಕೆಂಬ ಉದ್ದೇಶದಿಂದ ಈ ಪುಸ್ತಕ ಬರೆದೆ ಎಂದು ಸ್ಪಷ್ಟಪಡಿಸಿದರು.

ಒಬ್ಬ ಚಹಾ ಮಾರಾಟಗಾರ ಪ್ರಧಾನಮಂತ್ರಿ ಸ್ಥಾನದಲ್ಲಿ ಆಡಳಿತ ನಡೆಸುವುದು ಭಾರತೀಯ ರಾಜಕೀಯ ವ್ಯವಸ್ಥೆಯಲ್ಲಿ ಅಷ್ಟು ಸುಲಭದ ಮಾತಲ್ಲ. ಇದನ್ನು ನರೇಂದ್ರ ಮೋದಿ ಸಾಧ್ಯವಾಗಿಸಿದ್ದಾರೆ ಎಂದು ಡಾ.ಬಾಲಸುಬ್ರಹ್ಮಣ್ಯಂ ಹೇಳಿದರು.

ಪಾಶ್ಚಿಮಾತ್ಯರಲ್ಲಿ ನಾಯಕತ್ವವನ್ನು ಹೊರಗಿನ ಸಾಮರ್ಥ್ಯದ ದೃಷ್ಟಿಯಿಂದ ವಿಶ್ಲೇಷಿಸುತ್ತಾರೆ. ಆದರೆ ಭಾರತದಲ್ಲಿ ಒಳಗಿನ ಸಾಮರ್ಥ್ಯದ ದೃಷ್ಟಿಯಿಂದ ವಿಶ್ಲೇಷಿಸಲಾಗುತ್ತದೆ. ಈ ಬಗ್ಗೆ ಬಹಳಷ್ಟು ಅಂಶಗಳು ಅನಾವರಣಗೊಂಡಿರುವ ಈ ಪುಸ್ತಕವನ್ನು ಯುವ ಜನರು ಓದಬೇಕು ಎಂದು ಡಾ.ಬಾಲಸುಬ್ರಹ್ಮಣ್ಯಂ ಸಲಹೆ ನೀಡಿದರು.

ವಿಚಾರ ಗೋಷ್ಠಿ ಉಪಸ್ಥಿತರಿದ್ದ ದೀಪ್ತಿ ನವರತ್ನ ಡಾ.ಬಾಲ ಸುಬ್ರಹ್ಮಣ್ಯಂ ಅವರಿಗೆ ಪುಸ್ತಕ ಕುರಿತಂತೆ ಹಲವು ಪ್ರಶ್ನೆಗಳನ್ನು ಕೇಳಿದರು.

ನಕ್ಕರೆ ಅದೇ ಸ್ವರ್ಗ

ಹುಡುಗ : ಎಲ್ಲಿ ಹೋಗಿದ್ದೆ...?
ಹುಡುಗಿ : ನಾನು 5 ತಾಸಿನಿಂದ ಮಂತ್ರಿ ಮಾಲ್‌ನಲ್ಲಿದ್ದೆ.
ಹುಡುಗ : ಏನ್ ತಗೊಂಡೆ...?
ಹುಡುಗಿ : ಎರಡು ಹೇರ್ ಕ್ಲಿಪ್ಪು, ಮತ್ತೆ 50 ಸೆಲ್ಫಿಗಳು...!!

ಮೈಸೂರು ಮಿತ್ರ
ಸೋಮವಾರ, 8 ಜುಲೈ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಜೀವನದಲ್ಲಿ ಆಗುವ ಬದಲಾವಣೆಗಳಿಗೆ ಧೈರ್ಯ ಕಳೆದುಕೊಳ್ಳಬಾರದು, ಏಕೆಂದರೆ ಒಂದು ಒಳ್ಳೆಯದನ್ನು ಕಳೆದುಕೊಂಡಾಗ, ಅದಕ್ಕಿಂತ ಒಳ್ಳೆಯದನ್ನು ಪಡೆದುಕೊಳ್ಳಲು ಅವಕಾಶಗಳಿವೆ ಎಂದು ತಿಳಿದುಕೊಳ್ಳಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಅರಮನೆಗಿಂತ; ನೆರಮನೆ ಲೇಸು'

ನಿಮ್ಮ ಪತ್ರಗಳು

ಪೊಲೀಸ್ ಕಮಿಷನರ್ ಗಮನಕ್ಕೆ!



ಮಾನ್ಯರೆ,

ರಸ್ತೆ ಅಪಘಾತದಿಂದ, ಪ್ರತಿದಿನ ಹಲವು ಜನರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಈ ಸಂಬಂಧ ಮೈಸೂರಿನಲ್ಲಿ ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಸದರಿ ಕ್ಯಾಮರಾ ದೃಶ್ಯಗಳನ್ವಯ ಸಂಚಾರ ನಿಯಮಗಳ ಉಲ್ಲಂಘನೆ (ಹೆಲ್ಮೆಟ್ ಧರಿಸದೇ ಚಲಿಸುವುದು, ಟ್ರಿಪಲ್ ರೈಡಿಂಗ್, ಸೀಟ್ ಬೆಲ್ಟ್ ಧರಿಸದೇ ಇರುವುದು (ಕೋ ಪ್ಯಾಸೆಂಜರ್ ಒಳಗೊಂಡಂತೆ) ಹಾಗೂ ವಾಹನ ಚಾಲನೆಯಲ್ಲಿ ಮೊಬೈಲ್ ಬಳಕೆ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಿ ದಂಡ ವಿಧಿಸಲಾಗುವುದು ಎಂದು ಪೊಲೀಸರು ಪ್ರಕಟಣೆ ಹೊರಡಿಸಿದ್ದಾರೆ.

ಪ್ರಕರಣ ದಾಖಲಾದ ಮಾಹಿತಿಯನ್ನು ತಕ್ಷಣವೇ ಸದರಿ ವಾಹನದ ನೋಂದಾಯಿತ ಮೊಬೈಲ್‌ಗೆ ಎಸ್‌ಎಂಎಸ್ ಕಳುಹಿಸಲಾಗುವುದು. ವಾಹನದ ವಾರಸುದಾರರ ವಿಳಾಸಕ್ಕೆ ಚಲನ್ ರವಾನಿಸಲಾಗುವುದು. ಸಂಚಾರ ನಿಯಮ ಉಲ್ಲಂಘನೆ ಮಾಡಿದ ವಾಹನದ ಮಾಲೀಕರು, ಚಾಲಕರು ವೆಬ್‌ಸೈಟ್ ಅಥವಾ ಹತ್ತಿರದ ಪೊಲೀಸ್ ಠಾಣೆಯಲ್ಲಿ ಸದರಿ ದಂಡದ ಮೊತ್ತವನ್ನು ಕೂಡಲೇ ಪಾವತಿ ಮಾಡಬೇಕಾಗಿರುತ್ತದೆ. ದಂಡ ಪಾವತಿಸದಿದ್ದಲ್ಲಿ ಮೋಟಾರು ವಾಹನ ಕಾಯ್ದೆ 1988 ಕಲಂ 187ರನ್ವಯ ಮೂರು ತಿಂಗಳು ಕಾರಾಗೃಹ ವಾಸ ಅಥವಾ 500 ರೂ.ಗಳ ದಂಡ ಅಥವಾ ಎರಡನ್ನೂ ಅನುಭವಿಸಬೇಕಾಗುತ್ತದೆ ಎಂದೂ ಪೊಲೀಸರು ಎಚ್ಚರಿಸಿದ್ದಾರೆ.

ಸಂಚಾರ ನಿಯಮ ಉಲ್ಲಂಘಿಸುವ ವಾಹನಗಳಿಗೆ ನಂಬರ್ ಪ್ಲೇಟುಗಳೇ ಇಲ್ಲದಿದ್ದರೆ, ನಂಬರ್ ಪ್ಲೇಟ್ ಗೋಚರಿಸದಿದ್ದರೆ, ನಂಬರ್ ಪ್ಲೇಟ್ ಮರೆ ಮಾಚಿದ್ದರೆ, ನಂಬರ್ ಪ್ಲೇಟ್ ಮುರಿದು ಹೋಗಿದ್ದರೆ, ನಂಬರ್ ಪ್ಲೇಟಿನ ನಂಬರ್ ಮೇಲೆ ಸ್ಟಿಕ್ಕರ್ ಅಂಟಿಸಿದ್ದರೆ ಅಂತಹ ವಾಹನಗಳ ಮಾಲೀಕರನ್ನು ಪೊಲೀಸರು ಪತ್ತೆ ಹಚ್ಚುವುದು ಹೇಗೆ? ಪ್ರಕರಣ ದಾಖಲಿಸುವುದು ಹೇಗೆ? ದಂಡ ವಿಧಿಸುವುದು ಹೇಗೆ?

ಚಿತ್ರದಲ್ಲಿರುವುದು ಮೈಸೂರಿನ ಕುವೆಂಪುನಗರದ ನೃಪತುಂಗ ರಸ್ತೆಯಲ್ಲಿ ಶುಕ್ರವಾರ ಸಂಜೆ 6 ಗಂಟೆ ಸಮಯದಲ್ಲಿ ಓಡಾಡುತ್ತಿದ್ದ ಲಾರಿಗಳು. ನಂಬರ್ ಪ್ಲೇಟ್ ಇಲ್ಲದ ಈ ಲಾರಿಗಳಿಂದ ಅಪಘಾತ ಸಂಭವಿಸಿ ಪ್ರಾಣಹಾನಿ ಉಂಟಾದರೆ ಈ ಲಾರಿಗಳ ಚಾಲಕ, ಮಾಲೀಕರನ್ನು ಪತ್ತೆ ಹಚ್ಚಲು ಹೇಗೆ ಸಾಧ್ಯ? ನಂಬರ್ ಪ್ಲೇಟ್ ಇಲ್ಲದ ಇಂತಹ ಬೃಹತ್ ವಾಹನಗಳು ಕೃತಕ ಬುದ್ಧಿಮತ್ತೆಯ ಹೈಟೆಕ್ ಕ್ಯಾಮರಾ ಕಣ್ಣುಗಳಿಗೆ ಗೋಚರಿಸುವುದೇ? –ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು.

ಅನ್ನದಾತರೇ ಈಗಲೇ ಎಚ್ಚೆತ್ತುಕೊಳ್ಳಿ

ಮಾನ್ಯರೆ,



ಜೀವನದಿ ಕಾವೇರಿ ತವರು ಕೊಡಗು ಜಿಲ್ಲೆ ಮಡಿಕೇರಿ ತಾಲೂಕಿನ ತಲಕಾವೇರಿ ಎಂಬ ಪುಣ್ಯಭೂಮಿ. ಹಾಗೆಯೇ ಕಾವೇರಿಯ ಪ್ರಮುಖ ಉಪನದಿಗಳಾದ ಕನ್ನಿಕೆ, ಲಕ್ಷ್ಮಣ ತೀರ್ಥ, ಹಾರಂಗಿ ಇವುಗಳ ಉಗಮ ಸ್ಥಾನವೂ ಕೊಡಗು ಜಿಲ್ಲೆ. ಅಲ್ಲದೆ ಕೊಡಗಿನ ಎಲ್ಲಾ ಗ್ರಾಮಗಳಲ್ಲೂ ಹರಿಯುವ ಅಸಂಖ್ಯಾತ ತೊರೆಗಳು, ಚಿಕ್ಕ ಹೊಳೆಗಳೂ ಕಾವೇರಿಯ ಒಡಲು ತುಂಬುವ, ಕಾವೇರಿಯ ಶಕ್ತಿಯನ್ನು ಹೆಚ್ಚಿಸುವ ಪ್ರಮುಖ ಜೀವಜಲಗಳು ಹಾಗೂ ಜಲ ಮೂಲಗಳು. ಇತ್ತೀಚಿನ ಕೆಲವು ದಶಕಗಳಿಂದ ಅಭಿವೃದ್ಧಿ ಹಾಗೂ ಪ್ರವಾಸೋದ್ಯಮ ಬೆಳವಣಿಗೆ ಪರಿಣಾಮ ಕೊಡಗಿನ ದೈವದತ್ತ ನಿಸರ್ಗದ ಮೇಲೆ ಆಕ್ರಮಣಕಾರಿ ದಾಳಿ ನಿರಂತರವಾಗಿ ನಡೆಯುತ್ತಿದೆ. ಭೂ ಮಾಫಿಯಾ, ಟಿಂಬರ್ ಮಾಫಿಯಾ, ಮರಳು ಮಾಫಿಯಾ ಕಾನೂನಿನ ಹಿಡಿತದಿಂದ ತುಂಬಾ ಅಂತರ ಕಾಯ್ದುಕೊಂಡಿದೆ. ಇತ್ತೀಚೆಗೆ ಹಲವು ಕಾಫಿ ತೋಟಗಳ ಭೂಪರಿವರ್ತನೆ ಹೆಚ್ಚಾಗುತ್ತಿದೆ. ವರ್ಷದಿಂದ ವರ್ಷಕ್ಕೆ ಮಳೆ ಪ್ರಮಾಣ ಕಡಿಮೆಯಾಗುತ್ತಿದೆ. ಇಂತಹ ಆತಂಕಕಾರಿ ಬೆಳವಣಿಗೆ ಕೊಡಗು ಜಿಲ್ಲೆ ಮಾತ್ರವಲ್ಲ, ಮೈಸೂರು, ಮಂಡ್ಯ, ಬೆಂಗಳೂರಿನ ಜನತೆಯ ಮೇಲೆ ನೇರ ಪರಿಣಾಮ ಬೀರುತ್ತದೆ. ಇತ್ತೀಚಿನ ಕೆಲವು ವರ್ಷಗಳಿಂದ ಬೇಸಿಗೆ ಬರುವ ಮುಂಚೆಯೇ ಕಾವೇರಿ ಸೇರಿದಂತೆ ಹಲವು ನದಿಗಳಲ್ಲಿ ನೀರಿನ ಹರಿವು ನಿಂತು ಹೋಗುತ್ತಿದೆ. ಹೀಗಾದರೆ ಕೆಆರ್‌ಎಸ್ ಸೇರಿದಂತೆ ಇತರೆ ಅಣೆಕಟ್ಟೆಗಳು ತುಂಬುವುದಾದರೂ ಹೇಗೆ?

ಈಗಾಗಲೇ ಕೊಡಗಿನ ಹಲವು ಸಂಘಟನೆಗಳು ಪರಿಸರ ಸಂರಕ್ಷಣೆಗಾಗಿ ಹೋರಾಟ ನಡೆಸುತ್ತಿವೆ. ಈ ವಿಷಯನ್ನು ಗಂಭೀರವಾಗಿ ಪರಿಗಣಿಸಿ ಮೈಸೂರು ಹಾಗೂ ಮಂಡ್ಯ ಜಿಲ್ಲೆಯ ರೈತ ಬಾಂಧವರು, ಪರಿಸರವಾದಿಗಳು, ಪ್ರಜ್ಞಾವಂತ ಸಂಘಟನೆಗಳು ಕೊಡಗಿನ ಪರಿಸರದ ಉಳಿವಿಗೆ ಹೋರಾಟಕ್ಕೆ ಮುಂದಾಗಬೇಕು. ಕೊಡಗು ಸೇರಿದಂತೆ ಪಶ್ಚಿಮ ಘಟ್ಟಗಳ ಮಳೆ ಕಾಡುಗಳ ರಕ್ಷಣೆ ಅಗತ್ಯವಾಗಿದೆ.

–ದರ್ಶನ್ ಸುಬ್ಬಯ್ಯ, ಹೆಬ್ಬಾಳ, ಮೈಸೂರು.

ಬಿಎಸ್‌ಎನ್‌ಎಲ್ ಸಂಸ್ಥೆ ಪುನಶ್ಚೇತನಗೊಳ್ಳಲಿ

ಮಾನ್ಯರೆ,

ಒಂದು ಕಾಲದಲ್ಲಿ ಸಾವಿರಾರು ಕೋಟಿ ಲಾಭ ಸೃಷ್ಟಿಸಿದ ಬಿಎಸ್‌ಎನ್‌ಎಲ್ ಸಂಸ್ಥೆ ಇಂದು ಆರ್ಥಿಕ ಮಟ್ಟ ದಿವಾಳಿ ಆಗುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಎರಡು ದಶಕಗಳ ಹಿಂದೆ ದೇಶದ ನಂಬರ್ ಒನ್ ನೆಟ್‌ವರ್ಕ್ ಹಾಗಿದ್ದ ಈ ಸಂಸ್ಥೆ ಇಂದು ನಷ್ಟವನ್ನು ಅನುಭವಿಸುತ್ತಿದೆ ಎಂದು ಮಾಧ್ಯಮ ಮೂಲಕ ತಿಳಿದು ಬಂದಿದೆ. ನಮ್ಮ ದೇಶದ ಟೆಲಿಕಾಂ ನೆಟ್‌ವರ್ಕ್ ಜನರಿಗೆ ಒದಗುವ ರೀತಿಯಲ್ಲಿ ಸರ್ವಿಸ್ ಸಿಗಬೇಕೆಂಬ ಆಸೆಯಲ್ಲಿ ಶುರುವಾದ ಬಿಎಸ್‌ಎನ್‌ಎಲ್. ನಂತರ ಸಿಮ್ ನೆಟ್‌ವರ್ಕ್ ಸೇವೆಯ ಜೊತೆಗೆ ಹೊಸ ಹೊಸ ಯೋಜನೆಗಳನ್ನು ಆರಂಭಿಸಿ ಯಶಸ್ವಿನ ದಾಪುಗಾಲಿನ ಕಡೆಗೆ ಮುನ್ನುಗ್ಗುತ್ತಿತ್ತು. ಈ ಬಿಎಸ್‌ಎನ್‌ಎಲ್ ಸಂಸ್ಥೆ ಹಿಂದುಳಿಯಲು ಆಗಿಂದಾಗ ಅಪ್ಡೇಟ್ ಆಗದಿರಲು ಕಾರಣವಿರಬಹುದೇನೋ? ಇಂತಹ ಸಂಸ್ಥೆ ಇಂದು ತನ್ನ ಅಸ್ತಿತ್ವಕ್ಕಾಗಿ ಹೆಣಗಾಡುತ್ತಿದೆ. 50 ವರ್ಷ ಮೇಲ್ಪಟ್ಟ ವಯೋಮಾನದ ನೌಕರರಿಗೆ ಸ್ವಯಂ ರಾಜೀನಾಮೆಗೂ ಕೂಡ ಸುತ್ತೋಲೆ ಹೊರಡಿಸಿದ್ದುಂಟು.

ಬಿಎಸ್‌ಎನ್‌ಎಲ್ ತನ್ನ ಪುನಶ್ಚೇತನಕ್ಕಾಗಿ ಮೈಸೂರು ವಲಯದ ತನ್ನ ಕೋಟ್ಯಾಂತರ ರೂಪಾಯಿ ಮೌಲ್ಯದ ಆಸ್ತಿಯನ್ನು ಹರಾಜು ಮೂಲಕ ಮಾರಾಟ ಮಾಡಲು ಮುಂದಾಗಿದೆ. ಈ ಬಿಎಸ್‌ಎನ್‌ಎಲ್ ಸಂಸ್ಥೆ ಮುಂದಿನ ದಿನಗಳಲ್ಲಿ ಮತ್ತೆ ಯಶಸ್ವಿನತ್ತ ದಾಪುಗಾಲು ಇಡಲಿ ಎಂದು ಹಾರೈಸುವ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು.




ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಬೆರಗು

ಆಚರಣೆ ಅತಿಯಾಯಿತು.... ಅನುಸರಣೆ ಮರೆಯಾಯಿತು.....!

ಶರಣರು, ಮಹಾತ್ಮರು, ಆಧ್ಯಾತ್ಮ ಚಿಂತಕರು, ರಾಜಕೀಯ ಮುತ್ಸದ್ದಿಗಳು, ಧಾರ್ಮಿಕ ಮುಖಂಡರು, ಸಮಾಜ ಸೇವಕರು ಇವರುಗಳ ಜನ್ಮ ದಿನಾಚರಣೆ ಹಾಗೂ ಪುಣ್ಯ ಸ್ಮರಣೆ ಮಾಡುವುದು ನಮ್ಮ ದೇಶದ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಆ ಮಹಾಚೇತನಗಳು ಸಮಾಜಕ್ಕೋಸ್ಕರ ಬದುಕಿದ ಕಾರಣಕ್ಕೆ ಇಂದಿಗೂ ಅವರು ಪ್ರಾತಃಸ್ಮರಣೀಯರಾಗಿದ್ದಾರೆ. ನಿಸ್ವಾರ್ಥ, ತ್ಯಾಗ, ನುಡಿದಂತೆ ನಡೆವ ಪರಿ, ಸಮಸಮಾಜ ನಿರ್ಮಾಣಕ್ಕೆ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಕಾರಣಕ್ಕೆ ಅವರು ಪೂಜ್ಯನೀಯ ಯೋಗ್ಯರು. ಅನೇಕರು ಜಾತ್ಯಾತೀತ ನಿಲುವನ್ನು ಹೊಂದಿದ್ದು, ನಮ್ಮ ದೇಶಕ್ಕೆ ಪಿಡುಗಾಗಿರುವ ಜಾತಿ ವ್ಯವಸ್ಥೆಯನ್ನು ತೊಡೆದು ಹಾಕಿ ಸರ್ವ ಜನಾಂಗದ ಶಾಂತಿಯ ತೋಟ ನಿರ್ಮಾಣಕ್ಕೆ ಶ್ರಮಿಸಿದವರು. ಅವರುಗಳನ್ನು ಜನ್ಮ ದಿನಾಚರಣೆ ಮಾತ್ರ ಸೀಮಿತಗೊಳಿಸದೆ ನಿತ್ಯ ನೆನೆಯುವಂತಹ ಅಮೋಘ ಸೇವೆಯನ್ನು ಸಮಾಜಕ್ಕೆ ನೀಡಿದ್ದಾರೆ. ಅವರ ತತ್ವ, ಆದರ್ಶಗಳು ಭೂಮಿ ಇರುವ ತನಕ ಸ್ಮರಿಸುವಂತೆ ಇವೆ. ಆದರೆ ಇಂದು ಮಹನೀಯರ ತತ್ವ, ಆದರ್ಶಗಳನ್ನು ಗಾಳಿಗೆ ತೂರಿ, ಜಾತಿ, ಧರ್ಮಕ್ಕೆ ಸೀಮಿತಗೊಳಿಸಿ, ಅದ್ದೂರಿಯಾಗಿ ಬೆಳಗಿನ ವೇಳೆ ಅವರ ಜನ್ಮ ದಿನಾಚರಣೆ ಮಾಡಿ, ಅರ್ಥವಿಲ್ಲದ ಕಾರ್ಯಕ್ರಮಗಳನ್ನು ಏರ್ಪಡಿಸಿ, ಸಂಜೆಯ ವೇಳೆಗೆ ಅವರ ವ್ಯಕ್ತಿತ್ವಕ್ಕೆ ಧಕ್ಕೆ ಬರುವಂತಹ ಸಂಭ್ರಮಾಚರಣೆ ಮಾಡುತ್ತಿರುವುದು ಅವರುಗಳ ದಿವ್ಯ ಚೇತನಕ್ಕೆ ಮಾಡುತ್ತಿರುವಂತಹ ಘೋರ ಅಪಮಾನ.

ನಮ್ಮ ದೇಶ ಹತ್ತಾರು ಧರ್ಮ, ನೂರಾರು ಭಾಷೆ, ಸಾವಿರಾರು ಜಾತಿಯಿಂದ ಕೂಡಿದೆ. ಇಷ್ಟೆಲ್ಲಾ ಇದ್ದರೂ ಏಕತೆಯಿಂದ ದೇಶವು ಮುನ್ನಡೆಯುತ್ತಿರುವುದು ಇಡೀ ಜಗತ್ತೇ ವಿಸ್ಮಯ ಪಡುವಂತೆ ಇದೆ. ಏಕೆಂದರೆ ಒಂದೇ ಧರ್ಮವಿರುವ ಅನೇಕ ದೇಶಗಳು ನಿತ್ಯವೂ ಭಯೋತ್ಪಾದನೆ, ತಾರತಮ್ಯ ನೀತಿಯಿಂದ ನಲುಗುತ್ತಿವೆ. ನಮ್ಮ ದೇಶ ಅನೇಕತೆಯಲ್ಲಿ ಏಕತೆ ಸಾಧಿಸಿ ಮುನ್ನಡೆಯುತ್ತಿದೆ. ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯಕ್ಕೆ ಹೋರಾಡಿದ ಹೋರಾಟಗಾರರೆಲ್ಲರ ಉದ್ದೇಶವೂ ಒಂದೇ ಆಗಿತ್ತು, ಅದು ಏಕತೆ, ಸಮಗ್ರತೆ, ಸಹಿಷ್ಣುತೆ, ಸಮಾನತೆ, ಸೌಹಾರ್ದತೆ. ಹಾಗೆಯೇ ಅವರೆಲ್ಲಾ ಸರಳತೆಯ ಸೂತ್ರವನ್ನು ಹೇಳಿಕೊಟ್ಟು ಹೋಗಿದ್ದಾರೆ. ಆದರೆ ಇಂದು ಅವರುಗಳ ಜನ್ಮದಿನಾಚರಣೆ ನೆಪದಲ್ಲಿ ಅವರನ್ನು ಸ್ಮರಿಸಿಕೊಳ್ಳುತ್ತಿರುವ ರೀತಿ ನೀತಿ ನೋಡುತ್ತಿದ್ದರೆ ನಿಜಕ್ಕೂ ನಾಚಿಕೆಯಾಗುತ್ತದೆ. ಸರಳತೆ ಬೋಧಿಸಿದ ಮಹಾತ್ಮರ ಜಯಂತಿ ಇಂದು ದುಂದುವೆಚ್ಚದಿಂದ ಮಾಡಲಾಗುತ್ತದೆ. ಮೇರು ವ್ಯಕ್ತಿತ್ವ ಹೊಂದಿದ್ದ ಮಹಾತ್ಮರ ಪ್ರತಿಮೆಯನ್ನು ಮಾತ್ರ ವಿಶ್ವ ದಾಖಲೆಯ ಎತ್ತರಕ್ಕೆ ನಿರ್ಮಾಣ ಮಾಡಲಾಗಿದೆಯೇ ಹೊರತು, ಅವರು ದೇಶದ ಏಕತೆಗೆ ಶ್ರಮಿಸಿದ ರೀತಿಯನ್ನು ಯಾರೂ ನೆನೆಯುತ್ತಿಲ್ಲ. ಒಂದೊಂದು ಪಕ್ಷದ ಸರ್ಕಾರ ಒಬ್ಬೊಬ್ಬ ಮಹಾತ್ಮರನ್ನು ದತ್ತು ತೆಗೆದುಕೊಂಡು ಮೆರೆಸುತ್ತಿರುವಂತೆ ಭಾಸವಾಗುತ್ತಿದೆ.



ಕೆಲವು ಕಿಡಿಗೇಡಿಗಳಂತೂ ಹಿರಿಯ ಮುತ್ಸದ್ದಿಗಳ ವಿರುದ್ಧ ಇಲ್ಲ ಸಲ್ಲದ ಆರೋಪ ಮಾಡುತ್ತಾ, ಅವರ ಕುರಿತು ಜನರಲ್ಲಿ ಕೀಳು ಮನೋಭಾವ ಮೂಡುವಂತೆ ಮಾಡಿ ಅವರ ಘನತೆಗೆ ಧಕ್ಕೆ ತರುತ್ತಿದ್ದಾರೆ. ಅವರ ಆದರ್ಶಗಳ ಕುರಿತು ತಿಳಿದು, ಅವುಗಳನ್ನು ಅನುಸರಿಸುವ ನಿಟ್ಟಿನಲ್ಲಿ ಚಿಂತಿಸದೆ ಅವರ ವೈಯಕ್ತಿಕ ಬದುಕನ್ನು ಜಾಲಾಡಿ ಅವರ ವ್ಯಕ್ತಿತ್ವಕ್ಕೆ ಕಪ್ಪು ಮಸಿ ಬಳಿಯುತ್ತಿದ್ದಾರೆ. ತಮ್ಮ ಸ್ವಾರ್ಥ ಸಾಧನೆಗೆ ಮಹಾತ್ಮರನ್ನು ದಾಳವಾಗಿಸಿಕೊಳ್ಳುತ್ತಿರುವುದು ಹೇಯ ಸಂಗತಿ. ಕೆಲವು ಪಕ್ಷಗಳಂತೂ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳನ್ನು ತಮ್ಮ ಪಕ್ಷದ ವರ್ಚಸ್ಸು ಹೆಚ್ಚಿಸಿಕೊಳ್ಳಲು ಬಳಸಿಕೊಂಡು, ಅವರ ಹೆಸರಿನಲ್ಲಿ ಮತಯಾಚಿಸಿ ಚುನಾವಣೆಯಲ್ಲಿ ಜಯಗಳಿಸಿದ ನಂತರ ಆ ಮಹಾತ್ಮರ ಆದರ್ಶಗಳಿಗೆ ವಿರುದ್ಧವಾಗಿ ಆಡಳಿತ ನಡೆಸುತ್ತಿರುವುದು ಮಾತ್ರ ಅಕ್ಷಮ್ಯ ಅಪರಾಧ. ಸಂವಿಧಾನದ ಹೆಸರಿನಲ್ಲಿ ರಾಜಕೀಯ ಮಾಡುತ್ತಾ, ಪರಸ್ಪರ ಕೆಸರೆರಚಾಡುತ್ತಾ ಜನರಿಗೆ ಉತ್ತಮ ಆಡಳಿತ ನೀಡದೆ ಅನ್ಯಾಯ ಮಾಡುತ್ತಿರುವ ಜನಪ್ರತಿನಿಧಿಗಳಿಗೆ ನಾಚಿಕೆಯಾಗಬೇಕು.

ಯಾವ ಶರಣರು, ಮಹಾತ್ಮರು ತಮ್ಮ ಜನ್ಮದಿನಾಚರಣೆ ಮಾಡಿ ಎಂದು ಬಯಸಿರಲಿಲ್ಲ. ಅವರು ಬದುಕಿದ್ದಾಗಲೇ ಕೆಲವು ಆಚರಣೆಗಳನ್ನು ವಿರೋಧಿಸಿದ್ದವರು ಅನೇಕರು. ಇಂದು ಜನ್ಮದಿನಾಚರಣೆಗಳು ಆಗುತ್ತಿರುವ ರೀತಿ ನೀತಿ ನೋಡಿದರೆ ನಿಜಕ್ಕೂ ಹೇಸಿಗೆಯಾಗುತ್ತದೆ. ಪುತ್ಥಳಿ, ಭಾವಚಿತ್ರ ಮೆರವಣಿಗೆಯನ್ನು ಬಹಳ ವಿಜೃಂಭಣೆಯಿಂದ ಮಾಡುತ್ತಾರೆಯಾದರೂ, ಮೆರವಣಿಗೆಯಲ್ಲಿ ಅವರ ತತ್ವಗಳ ಪ್ರಸಾರ ಮಾತ್ರ ಆಗುವುದಿಲ್ಲ. ಕಿವಿಗೆ ಕರ್ಕಶವಾದ ಅಸಂಬದ್ಧ ಗೀತೆಗಳನ್ನು ಡಿ.ಜೆ.ಸೌಂಡ್ ಸಿಸ್ಟಂ ಮೂಲಕ ಹಾಕಿ ಅದಕ್ಕೆ ವಿಚಿತ್ರ ನೃತ್ಯ ಮಾಡುವುದನ್ನು ಕಾಣಬಹುದು. ಅಲ್ಲಿ ಹಾಕಲಾಗುವ ಗೀತೆಗಳಿಗೂ ಶರಣರ/ಮಹಾತ್ಮರ ಜೀವನಕ್ಕೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲ. ಇನ್ನು ರಸ್ತೆಯುದ್ದಕ್ಕೂ ಹಾಕಿರುವ ಭಿತ್ತಿಚಿತ್ರಗಳು ಅನೇಕ ಸಂದೇಶಗಳನ್ನು ನೀಡುತ್ತವೆ. ಮಹಾತ್ಮರ ಹೆಸರಿನಲ್ಲಿ ತಮ್ಮ ಪ್ರಚಾರ ಮಾಡಿಕೊಳ್ಳುವ ಹುನ್ನಾರವೇ ನಡೆಯುತ್ತದೆ. ಇನ್ನು ವೇದಿಕೆ ಕಾರ್ಯಕ್ರಮವು ರಾಜಕೀಯ ಪ್ರಚಾರ ಕಾರ್ಯಕ್ರಮದಂತೆ ಇರುತ್ತದೆ. ಮಹಾತ್ಮರ ಜೀವನ, ಸಾಧನೆ ಹಾಗೂ ಸಂದೇಶಗಳ ಕುರಿತು ಕನಿಷ್ಠ ಒಂದು ಉಪನ್ಯಾಸವೂ ಇರುವುದಿಲ್ಲ. ವೇದಿಕೆ ಮೇಲೆಯೂ ಸಹ ತಮ್ಮ ಬೇಳೆ ಬೇಯಿಸಿಕೊಳ್ಳುವ ತವಕದಲ್ಲಿ ಮುಖಂಡರುಗಳು ಇರುತ್ತಾರೆ.

ಗಣೇಶ ಉತ್ಸವಗಳಲ್ಲಿಯೂ ಇದೇ ರೀತಿ ಆಗುವುದನ್ನು ಕಾಣಬಹುದು. ಗಣೇಶ ಪ್ರತಿಷ್ಠಾಪನೆಯ ಉದ್ದೇಶವನ್ನೇ ಅರಿಯದ ಯುವ ಸಮೂಹ ಇಂದು ಅದನ್ನು ಪ್ರತಿಷ್ಠೆಯ ಕಾರಣಕ್ಕೆ ಆಚರಿಸಲಾಗುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಸಂಘಟನೆ ದೃಷ್ಟಿಯಿಂದ ಗಣೇಶ ಪ್ರತಿಷ್ಠಾಪನೆ ಎಂಬುದು ಪ್ರಾರಂಭವಾಯಿತು, ಆದರೆ ಇಂದು ಅದರ ಅರ್ಥವನ್ನೇ ಕಳೆದುಕೊಳ್ಳುತ್ತಿದೆ. ಆರ್ಕೇಸ್ಟ್ರಾ ಹೆಸರಿನಲ್ಲಿ ಕೀಳು ಅಭಿರುಚಿಯ ಗೀತೆಗಳನ್ನು ಗಣೇಶನ ಮುಂದೆ ಹಾಡಿಸಲಾಗುತ್ತದೆ. ವೇದಿಕೆ ಮೇಲೆ ಅರ್ಥಂಬರ್ಥ ಬಟ್ಟೆ ತೊಟ್ಟು ಕುಣಿಯುವ ಯುವಕ ಯುವತಿಯರು, ವೇದಿಕೆಯ ಕೆಳಗೆ ಅವರಿಗೆ ಸಾಥ್ ನೀಡುವ ಯುವಕರು ಗಣೇಶನಿಗೆ ಅವಮಾನ ಮಾಡುತ್ತಿದ್ದಾರೆ. ಗಣೇಶ ವಿಸರ್ಜನೆ ಸಂದರ್ಭದಲ್ಲಿ ಜರುಗುವ ಮೆರವಣಿಗೆಯಲ್ಲಿ ವಿವಿಧ ಮಾದರಿಯ ತಂಡಗಳಿಂದ ಪ್ರದರ್ಶನವಿರುತ್ತದೆ. ವಿವಿಧ ಮಾದರಿಯ ಡ್ರಮ್‌ಗಳ ಸದ್ದಿನಲ್ಲಿ ಗಣೇಶನನ್ನು ವಿಸರ್ಜಿಸಲಾಗುತ್ತದೆ. ಮರ್ಯಾದೆಯಾಗಿ ನಮ್ಮ ನಾಡಿನ ಸಂಸ್ಕೃತಿಯಾದ ಮಂಗಳವಾದ್ಯ ಸಮೇತ ವಿಸರ್ಜನೆಯಾದರೆ ಗಣೇಶ ಪ್ರಸನ್ನನಾಗಬಹುದು. ಪ್ರತಿಷ್ಠಾಪನೆಯ ಹೆಸರಿನಲ್ಲಿ ಊರಿನ ಅಥವಾ ಬಡಾವಣೆಯ ಜನರಿಗೆ ಕಡ್ಡಾಯವಾಗಿ ಹಣ ನೀಡುವಂತೆ ಪೀಡಿಸಲಾಗುತ್ತದೆ. ಅದನ್ನು ವಿರೋಧಿಸುವವರಿಗೆ ವಿವಿಧ ರೀತಿಯಲ್ಲಿ ಕಿರುಕುಳ ನೀಡಲಾಗುತ್ತದೆ. ಇದು ಇಂದಿನ ಗಣೇಶ ಪ್ರತಿಷ್ಠಾಪನೆ ಚಿತ್ರಣ. ಇಲ್ಲಿ ಆಚರಣೆ ಅತಿಯಾಗಿ ಅನುಸರಣೆ ಮರೆಯಾಗಿದೆ, ಅಲ್ಲವೇ?

> ❝ ಯಾವ ಶರಣರು, ಮಹಾತ್ಮರು ತಮ್ಮ ಜನ್ಮದಿನಾಚರಣೆ ಮಾಡಿ ಎಂದು ಬಯಸಿರಲಿಲ್ಲ. ಅವರು ಬದುಕಿದ್ದಾಗಲೇ ಕೆಲವು ಆಚರಣೆಗಳನ್ನು ವಿರೋಧಿಸಿದ್ದವರು ಅನೇಕರು. ಇಂದು ಜನ್ಮದಿನಾಚರಣೆಗಳು ಆಗುತ್ತಿರುವ ರೀತಿ ನೀತಿ ನೋಡಿದರೆ ನಿಜಕ್ಕೂ ಹೇಸಿಗೆಯಾಗುತ್ತದೆ. ಪುತ್ಥಳಿ, ಭಾವಚಿತ್ರ ಮೆರವಣಿಗೆಯನ್ನು ಬಹಳ ವಿಜೃಂಭಣೆಯಿಂದ ಮಾಡುತ್ತಾರೆಯಾದರೂ, ಮೆರವಣಿಗೆಯಲ್ಲಿ ಅವರ ತತ್ವಗಳ ಪ್ರಸಾರ ಮಾತ್ರ ಆಗುವುದಿಲ್ಲ. ಕಿವಿಗೆ ಕರ್ಕಶವಾದ ಅಸಂಬದ್ಧ ಗೀತೆಗಳನ್ನು ಡಿ.ಜೆ. ಸೌಂಡ್ ಸಿಸ್ಟಂ ಮೂಲಕ ಹಾಕಿ ಅದಕ್ಕೆ ವಿಚಿತ್ರ ನೃತ್ಯ ಮಾಡುವುದನ್ನು ಕಾಣಬಹುದು. ಅಲ್ಲಿ ಹಾಕಲಾಗುವ ಗೀತೆಗಳಿಗೂ ಶರಣರ/ಮಹಾತ್ಮರ ಜೀವನಕ್ಕೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲ. ಇನ್ನು ರಸ್ತೆಯುದ್ದಕ್ಕೂ ಹಾಕಿರುವ ಭಿತ್ತಿಚಿತ್ರಗಳು ಅನೇಕ ಸಂದೇಶಗಳನ್ನು ನೀಡುತ್ತವೆ. ಮಹಾತ್ಮರ ಹೆಸರಿನಲ್ಲಿ ತಮ್ಮ ಪ್ರಚಾರ ಮಾಡಿಕೊಳ್ಳುವ ಹುನ್ನಾರವೇ ನಡೆಯುತ್ತದೆ. ಇನ್ನು ವೇದಿಕೆ ಕಾರ್ಯಕ್ರಮವು ರಾಜಕೀಯ ಪ್ರಚಾರ ಕಾರ್ಯಕ್ರಮದಂತೆ ಇರುತ್ತದೆ. ಮಹಾತ್ಮರ ಜೀವನ, ಸಾಧನೆ ಹಾಗೂ ಸಂದೇಶಗಳ ಕುರಿತು ಕನಿಷ್ಠ ಒಂದು ಉಪನ್ಯಾಸವೂ ಇರುವುದಿಲ್ಲ. ವೇದಿಕೆ ಮೇಲೆಯೂ ಸಹ ತಮ್ಮ ಬೇಳೆ ಬೇಯಿಸಿಕೊಳ್ಳುವ ತವಕದಲ್ಲಿ ಮುಖಂಡರು ಇರುತ್ತಾರೆ.

ಸ್ಪರ್ಧೆಗೆ ಬಿದ್ದವರಂತೆ ಇಂದು ಹಳ್ಳಿ, ಪಟ್ಟಣ, ನಗರ ಎನ್ನದೆ ಎಲ್ಲೆಡೆ ಆಚರಣೆಗಳು ನಡೆಯುತ್ತಿವೆ. ಜಾತಿ ವ್ಯವಸ್ಥೆ ವಿರುದ್ಧ ಹೋರಾಟ ಮಾಡಿದ ಕ್ರಾಂತಿಕಾರಿಗಳನ್ನು ಒಂದೊಂದು ಜಾತಿಗೆ ನಾಯಕರನ್ನಾಗಿ ಮಾಡಿಕೊಂಡು, ಆ ಜಾತಿಯ ಜನ ಇಂದು ಅವರ ಜನ್ಮದಿನಾಚರಣೆ ಹಾಗೂ ಪುಣ್ಯಸ್ಮರಣೆಯನ್ನು ಅದ್ದೂರಿಯಾಗಿ ಆಚರಿಸುತ್ತಿರುವುದು ವಾಡಿಕೆಯಾಗಿದೆ. ಒಬ್ಬರನ್ನು ನೋಡಿ ಒಬ್ಬರು ಎಲ್ಲರೂ ತಮ್ಮ ಜಾತಿಯ ನಾಯಕರ ಆಚರಣೆಗಳನ್ನು ಮಾಡುತ್ತಿದ್ದಾರೆ. ಜಾತ್ಯಾತೀತವಾಗಿ ಎಲ್ಲರೂ ಎಲ್ಲರ ಜಯಂತಿಯಲ್ಲಿ ಪಾಲ್ಗೊಳ್ಳಬೇಕು. ಆದರೆ ಅದು ಹಾಗೆ ಆಗುತ್ತಿಲ್ಲ. ಸರ್ಕಾರವೂ ಅಷ್ಟೆ ಔಪಚಾರಿಕವಾಗಿ ಆಚರಣೆಗಳನ್ನು ಏರ್ಪಡಿಸುತ್ತಿವೆ. ಆಚರಣೆಗೆ ರಜೆ ನೀಡುವುದು ವಾಡಿಕೆಯಾಗಿದೆ. ರಜೆಯನ್ನು ಮಜಾ ಮಾಡಲು ಬಳಸಿಕೊಳ್ಳುವ ಮಂದಿಯೇ ಹೆಚ್ಚು. ಒಂದೊಂದು ವರ್ಷ ನಾಯಕರ ಒಂದೊಂದು ಆದರ್ಶವನ್ನು ಪಾಲಿಸಿದಲ್ಲಿ ದೇಶ ಎಲ್ಲಿಗೋ ಹೋಗಿ ಮುಟ್ಟುತ್ತದೆ. ಆದರೆ ಆಚರಣೆಗೂ ಬದುಕಿಗೂ ಸಂಬಂಧವೇ ಇಲ್ಲವೇನೋ ಎಂಬಂತೆ ಆಗುತ್ತಿದೆ. ಕೆಲವು ಆಚರಣೆಗಳ ದಿನ ಕೆಲವು ನಗರಗಳಲ್ಲಿ ಮದ್ಯವು ಹೆಚ್ಚಿಗೆ ಮಾರಾಟ ವಾಯಿತು ಎಂಬ ವರದಿ ಕೇಳಿದರೆ ಹೌಹಾರುವಂತಾಗುತ್ತದೆ. ಸಂಭ್ರಮಾಚರಣೆಯ ನೆಪದಲ್ಲಿ ಮಹಾತ್ಮರ ಸಂದೇಶಗಳಿಗೆ ವಿರುದ್ಧವಾದ ಆಚರಣೆಯಾಗುತ್ತಿರುವುದು ವಿಪರ್ಯಾಸದ ಸಂಗತಿ.

ಸಮಾಜವನ್ನು ತಮ್ಮ ತ್ಯಾಗ, ಆದರ್ಶಗಳಿಂದ ಕತ್ತಲೆಯಿಂದ ಬೆಳಕಿನೆಡೆಗೆ ಕರೆದೊಯ್ಯಲು ಯತ್ನಿಸಿದ ಮಹಾತ್ಮರನ್ನು ಇಂದು ಬೆಳಕಿನಿಂದ ಕತ್ತಲೆಡೆಗೆ ಕರೆದೊಯ್ಯುತ್ತಿದ್ದಾರೆಯೇ ಎಂಬ ಅನುಮಾನ ಮೂಡುತ್ತಿದೆ. ಮಹಾತ್ಮರು ಪಕ್ಷಗಳಿಗೆ ಆದರ್ಶವಾಗುವ ಬದಲು ಚುನಾವಣೆ ಗೆಲ್ಲುವ ಟ್ರಂಪ್‌ಕಾರ್ಡ್‌ಗಳಾಗಿ ಬಳಕೆಯಾಗುತ್ತಿರುವುದು ದುರ್ದೈವದ ಸಂಗತಿ. ಇಂದು ನಡೆಯುತ್ತಿರುವ ವಿದ್ಯಮಾನಗಳನ್ನು ಕಂಡು ಮಹಾತ್ಮರ ಆತ್ಮಗಳು ಎಷ್ಟು ನೊಂದುಕೊಳ್ಳುತ್ತಿರುವುವೋ? ಯಾರಿಗೂ ತಿಳಿಯದು.

ಮಹಾತ್ಮರ ಜನ್ಮದಿನಾಚರಣೆಯಿಂದ ಇಂದಿನ ಪೀಳಿಗೆಯ ಮಕ್ಕಳಿಗೆ ಜೀವನ ಪಾಠವಾಗಬೇಕು. ಅವರು ನಡೆದು ಬಂದ ಹಾದಿ, ಅವರ ಹೋರಾಟಗಳು, ಅದರಿಂದ ಆದ ಪ್ರತಿಫಲ ಮಕ್ಕಳಿಗೆ ದಾರಿದೀಪವಾಗಬೇಕು. ಅಷ್ಟು ಅರ್ಥಪೂರ್ಣವಾಗಿ ಆಚರಿಸಿದರೆ ಮಾತ್ರ ಸಾರ್ಥಕತೆ ಇರುತ್ತದೆ. ಕೇವಲ ಚಂದಾ ಎತ್ತಿ ಅಥವಾ ಸರ್ಕಾರದ ಅನುದಾನ ಬಳಕೆಗೆ ಮಹಾತ್ಮರ ಕುರಿತಾದ ಆಚರಣೆಗಳು ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಮಕ್ಕಳಿಗೆ ಅವರ ಪ್ರತಿಮೆ, ಭಾವಚಿತ್ರಕ್ಕಿಂತ ಅವರ ಜೀವನ ಚಿತ್ರ ಮುಖ್ಯವಾಗಬೇಕು. ಅಷ್ಟು ಪ್ರಜ್ಞಾವಂತಿಕೆಯಿಂದ ಆಚರಣೆಗಳು ಆಗಬೇಕು. ಬಹಿರಂಗವಾದ ಆಚರಣೆಯಿಂದ ಸಮಾಜ ಸುಧಾರಣೆ ಮಾಡಲು ಸಾಧ್ಯವಿಲ್ಲ. ಅಂತರಂಗದಲ್ಲಿ ಬದಲಾವಣೆ ಮಾಡುವ ಸತ್ಕಾರ್ಯಗಳು ಆಗಬೇಕು. ಅವರ ಆದರ್ಶಗಳನ್ನು ಯುವ ಮನಸ್ಸಿಗಳಲ್ಲಿ ಬಿತ್ತುವ ಕೆಲಸವಾಗಬೇಕು. ಆಚರಣೆಗಳು ಪ್ರಚಾರಕ್ಕೆ, ಸಾಮಾಜಿಕ ಜಾಲತಾಣದಲ್ಲಿ ಹಾಗೂ ಮಾಧ್ಯಮಗಳಲ್ಲಿ ಪ್ರಸಾರಕ್ಕೆ ಮಾತ್ರ ಸೀಮಿತವಾಗಬಾರದು. ಈ ಕುರಿತು ಸರ್ವರೂ ಚಿಂತನೆ ನಡೆಸುವ ಅಗತ್ಯವಿದೆ.

ಪದ ತಾಂಬೂಲ:
ಅನುಸರಣೆ ಇಲ್ಲದ
ಆಚರಣೆ ಆತ್ಮವಿಲ್ಲದ ದೇಹದಂತೆ

ಡಾ.ರಾಜ್‌ಕುಮಾರ್ ರಸ್ತೆಯ ಈ ಅರ್ಧ ಕಿಲೋಮೀಟರ್ ಅಪಾಯಕಾರಿ!

ಮೈಸೂರು, ಜು.7 (ಎಂಕೆ)– ಡಾಂಬರೀಕರಣದಿಂದ ವಂಚಿತವಾಗಿರುವ ಈ ಅರ್ಧ ಕಿಲೋ ಮೀಟರ್ ತುಂಡು ರಸ್ತೆಯಲ್ಲಿವೇ ಪ್ರಾಣಕ್ಕೆ ಕುತ್ತು ತರುವ ಭಾರಿ ಗುಂಡಿಗಳು...!



ಡಾಂಬರೀಕರಣದಿಂದ ವಂಚಿತವಾಗಿರುವ ಯರಗನಹಳ್ಳಿ ಡಾ.ರಾಜ್‌ಕುಮಾರ್ ರಸ್ತೆ.

ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಒಂದಾದ ಯರಗನಹಳ್ಳಿ ಡಾ.ರಾಜ್‌ಕುಮಾರ್ ರಸ್ತೆ ಬಹುತೇಕ ಡಾಂಬರೀಕರಣಗೊಂಡು ಅಭಿವೃದ್ಧಿಯಾಗಿದೆ. ಆದರೆ ರಸ್ತೆಯ ನಡುವೆ ಡಾಂಬರೀಕರಣವಾಗದೆ ಅಧ್ವಾನ ಸೃಷ್ಟಿಸಿರುವ ಕೇವಲ ಅರ್ಧ ಕಿಲೋ ಮೀಟರ್ ರಸ್ತೆ ಕ್ರಮಿಸಲು ವಾಹನ ಸವಾರರು ಹರಸಾಹಸವನ್ನೇ ಮಾಡಬೇಕು. ಟೆರೆಷಿಯನ್ ಕಾಲೇಜು ಸಿಗ್ನಲ್‌ನಿಂದ ಅರ್ಧ ಕಿಲೋ ಮೀಟರ್‌ನಷ್ಟು ಸಾಗಿದರೆ ಅಭಿವೃದ್ಧಿ ಕಾಣದ ಗುಂಡಿಮಯವಾದ ರಸ್ತೆ ಆರಂಭವಾಗಿ ಕಾವೇರಿ ವೃತ್ತದ ಬಳಿ ಅಂತ್ಯವಾಗಲಿದೆ. ಈ ಅರ್ಧ ಕಿ.ಮೀ ರಸ್ತೆಯಲ್ಲಿ ಅಪಾಯಕಾರಿ ಗುಂಡಿಗಳಿದ್ದು, ಕಾರು, ಸ್ಕೂಟರ್, ಬೈಕ್ ಇನ್ನಿತರೆ ವಾಹನಗಳ ಚಲಾಯಿಸಲು ಸವಾರರು ಪರದಾಡುವಂತಾಗಿದೆ. ಮಳೆ ಬಂದರಂತೂ ಭಯದಲ್ಲಿ ಅತೀ ನಿಧಾನವಾಗಿ ವಾಹನ ಚಲಾಯಿಸಿದರಷ್ಟೇ ಬಚಾವ್ ಎನ್ನುವಂತಿದೆ. ಬಹುತೇಕ ಅಭಿವೃದ್ಧಿಯಾಗಿರುವ ಡಾ.ರಾಜ್‌ಕುಮಾರ್ ರಸ್ತೆಯ ತುಂಡು ಜಾಗ ಮಾತ್ರ ಡಾಂಬರೀಕರಣಕ್ಕಾಗಿ ಪರಿತಪಿಸುತ್ತಿದೆ. 20–30 ಕಿಲೋ ಮೀಟರ್ ಸ್ಪೀಡ್‌ನಲ್ಲಿ ಬಂದರೂ ಬೀಳೋದು ಗ್ಯಾರಂಟಿ.

ಅಕ್ಷರಶಃ ಪಾಳು ಬಿದ್ದಂತಿರುವ ಈ ರಸ್ತೆ ಅಭಿವೃದ್ಧಿಗೆ ಜಾಗ ನೀಡಿರುವ ಸ್ಥಳೀಯರಲ್ಲಿ ಕೆಲವರು ಪರಿಹಾರ ಹಣ ದೊರೆತಿಲ್ಲ ಎಂದು ನ್ಯಾಯಾಲಯದ ಮೊರೆ ಹೋಗಿರುವುದರಿಂದ ರಸ್ತೆ ಅಭಿವೃದ್ಧಿಗೊಂಡಿಲ್ಲ. ಅಲ್ಲದೆ ನ್ಯಾಯಾಲಯವೂ ಸೂಕ್ತ ದಾಖಲೆಗಳನ್ನು ನೀಡಿ ಎಂಬುದನ್ನು ಪಾಲಿಸದೇ ಇರುವುದರಿಂದ ರಸ್ತೆ ಅಭಿವೃದ್ಧಿ ಮರೀಚಿಕೆಯಾಗಿದೆ ಎಂದು ಸ್ಥಳೀಯ ನಿವಾಸಿಗಳು ತಿಳಿಸಿದ್ದಾರೆ.

ಪ್ರತಿಭಟನೆ ಎಚ್ಚರಿಕೆ: ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿರುವ ಡಾ.ರಾಜ್‌ಕುಮಾರ್ ರಸ್ತೆಯ ಅಭಿವೃದ್ಧಿಯಾಗದಿದ್ದರೆ ರಸ್ತೆ ತಡೆ ನಡೆಸಿ, ಪ್ರತಿಭಟನೆ ನಡೆಸಲಾಗುವುದು. ಸಾರ್ವಜನಿಕರ ಒಳಿತಿನ ದೃಷ್ಟಿಯಿಂದ ಕೂಡಲೇ ಪಾಲಿಕೆ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕು. ಇಲ್ಲವಾದರೆ ಪ್ರತಿಭಟನೆ ಬಿಸಿ ಎದುರಿಸಬೇಕಾಗುತ್ತದೆ ಎಂದು ಸ್ಥಳೀಯರು ಎಚ್ಚರಿಸಿದ್ದಾರೆ.

ಇಚ್ಛಾಶಕ್ತಿ ಬೇಕಲ್ಲವೇ



❝ ಈ ರಸ್ತೆಯ ಗುಂಡಿ ಮುಚ್ಚಿ, ಡಾಂಬರೀಕರಣಗೊಳಿಸಲು ನ್ಯಾಯಾಲಯ ತಡೆಯಾಜ್ಞೆ ನೀಡಿಲ್ಲ. ರೆವಿನ್ಯೂ ಬಡಾವಣೆ ಎನ್ನುವುದೇ ತೊಡಕಾದರೆ ಅಭಿವೃದ್ಧಿ ಹೇಗೆ ಸಾಧ್ಯ. ಈ ರಸ್ತೆ ಅಭಿವೃದ್ಧಿ ವಿಚಾರದಲ್ಲಿ ಮುಖ್ಯವಾಗಿ ಇಚ್ಛಾಶಕ್ತಿ ಕೊರತೆ ಇದೆ. ಸಂಬಂಧಪಟ್ಟ ಶಾಸಕರು, ಅಧಿಕಾರಿಗಳಲ್ಲಿನ ಇಚ್ಛಾಶಕ್ತಿ ಕೊರತೆಯಿಂದಾಗಿ ತುಂಡು ರಸ್ತೆ ಅಭಿವೃದ್ಧಿ ಕಾಣದೆ ಗುಂಡಿಮಯವಾಗಿದೆ.

–ಸಂದೇಶ್‌ಸ್ವಾಮಿ, ಮಾಜಿ ಮೇಯರ್

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ದೇಶ - ವಿದೇಶ

ಇನ್‌ಸ್ಟಾಗ್ರಾಮ್‌ನಲ್ಲಿ ಅರ್ಚಕನ ಪರಿಚಯ: ಮೂರು ಮಕ್ಕಳ ತಾಯಿ ಪರಾರಿ!

ಸಿರೋಹಿ: ಇತ್ತೀಚೆಗೆ ಮದುವೆಯಾದ ಮಹಿಳೆಯರು ಅವಿವಾಹಿತ ಯುವಕರ ಜೊತೆ ಸಂಬಂಧ ಹೊಂದುವ ಅಥವಾ ಪರಾರಿಯಾಗುತ್ತಿರುವ ಘಟನೆಗಳು ಪದೇ ಪದೇ ಸಂಭವಿಸುತ್ತಿರುತ್ತವೆ. ಪಡ್ಡೆ ಹುಡುಗರು ಕೂಡ ಯುವತಿಯರಿಗಿಂತ ವಿವಾಹಿತ ಮಹಿಳೆಯರ ಬಗ್ಗೆಯೇ ಹೆಚ್ಚು ಆಸಕ್ತಿ ಹೊಂದುವ ಘಟನೆಗಳು ತುಂಬಾ ಕಡೆ ಬೆಳಕಿಗೆ ಬಂದಿದೆ. ಇದೀಗ ಇಂತಹದೇ ಪ್ರಕರಣವೊಂದು ಮತ್ತೆ ನಡೆದಿದೆ.



ಅಚ್ಚರಿ ಸಂಗತಿ ಎಂದರೆ, ಮೂರು ಮಕ್ಕಳ ತಾಯಿಂಯೊಬ್ಬಳು ಇನ್‌ಸ್ಟಾಗ್ರಾಮ್ ಮೂಲಕ ಪರಿಚಯವಾದ ಯುವಕನ ಜೊತೆ ಗಂಡ ಮತ್ತು ಮಕ್ಕಳನ್ನು ಬಿಟ್ಟು ಪರಾರಿಯಾದ ಘಟನೆ ವರದಿಯಾಗಿದೆ. ಈ ಘಟನೆ ರಾಜಸ್ಥಾನದ ಸಿರೋಹಿ ಉಪವಿಭಾಗದ ಕೇರಳದ ಹಳ್ಳಿಯಲ್ಲಿ ನಡೆದಿದೆ. ಇಲ್ಲಿನ ನಿವಾಸಿ ಪ್ರಕಾಶ್ ಕುಮಾರ್ ರಾವಲ್ ಎಂಬಾತ ಮೊಕಲ್ಸರ್‌ನ ಜೈನ ದೇವಾಲಯದಲ್ಲಿ ಅರ್ಚಕನಾಗಿದ್ದ. ಈ ವೇಳೆ ಆತನಿಗೆ ಇನ್‌ಸ್ಟಾಗ್ರಾಮ್ ಮೂಲಕ ವಿವಾಹಿತ ಮಹಿಳೆಯ ಪರಿಚಯವಾಗಿದೆ. ಪರಿಚಯ ಪ್ರೀತಿಗೆ ತಿರುಗಿ ಇಬ್ಬರೂ ಕೂಡ ಆಗಾಗ ಸೇರುತ್ತಿದ್ದರು. ಆಗಾಗ ದೇವಸ್ಥಾನಕ್ಕೆ ಹೋಗಿ ಯುವಕನನ್ನು ಭೇಟಿಯಾಗುತ್ತಿದ್ದಳು.

ಪತ್ನಿಯ ವರ್ತನೆಯಿಂದ ಗಂಡನಿಗೂ ಅನುಮಾನ ಉಂಟಾಗಿದ್ದು, ಕಳೆದ ಒಂದೂವರೆ ವರ್ಷದಿಂದ ಮೊಬೈಲ್‌ನಲ್ಲಿಯೇ ಕಾಲ ಕಳೆಯುತ್ತಿದ್ದ ಪತ್ನಿಯನ್ನು ಗಂಡ ಆಗಾಗ ಪ್ರಶ್ನಿಸುತ್ತಿದ್ದ. ಆದರೆ ಆಕೆ ಮಾತ್ರ ಕೇಳಿದಾಗಲೆಲ್ಲ ಅಕ್ಕನ ಜೊತೆ ಮಾತನಾಡುತ್ತಿರುವುದಾಗಿ ಹೇಳುತ್ತಿದ್ದಳು. ಅಷ್ಟೇ ಅಲ್ಲದೇ, ನಾನು ಅಕ್ಕನ ಜೊತೆ ಮಾತನಾಡಿದರೆ ನೀನಗೇನು ಸಮಸ್ಯೆ ಎಂದು ಪ್ರಶ್ನಿಸುತ್ತಿದ್ದಳು. ಇನ್‌ಸ್ಟಾಗ್ರಾಮ್‌ನಲ್ಲೇ ಹೆಚ್ಚು ಕಾಲ ಕಳೆಯುತ್ತಿದ್ದ ಆಕೆ ದೇಗುಲದ ಅರ್ಚಕ ಪ್ರಕಾಶ್‌ಕುಮಾರ್ ರಾವಲ್ ಜೊತೆ ವಿಡಿಯೋ ಚಾಟಿಂಗ್ ಮಾಡುತ್ತಿದ್ದಳು ಎನ್ನಲಾಗಿದೆ. ಜೂ.6ರಂದು ನಾನಾ ಗ್ರಾಮದ ನಿವಾಸಿ ನಿಕೇಶ್ ಕುಮಾರ್ ರಾವಲ್ ಜತೆ ಓಡಿ ಹೋಗಿದ್ದಾಳೆ. ಹೊರಡುವಾಗ ಲಿವ್-ಇನ್ ರಿಲೇಶನ್ ಶಿಪ್ ಡಾಕ್ಯುಮೆಂಟ್ ರೆಡಿ ಮಾಡಿ ತೆಗೆದುಕೊಂಡು ಹೋಗಿದ್ದಾಳೆ ಎನ್ನಲಾಅಗಿದೆ. ಘಟನೆ ಸಂಬಂಧ ರಾಣಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಶಿವಸೇನೆ ನಾಯಕನಿಗೆ ಸೇರಿದ ಕಾರು ಡಿಕ್ಕಿಯಾಗಿ ಮಹಿಳೆ ಸಾವು!

ಮುಂಬೈ: ಮಹಾರಾಷ್ಟ್ರದಲ್ಲಿ ಮತ್ತೊಂದು ಐಷಾರಾಮಿ ಕಾರು ಹಿಟ್-ಅಂಡ್-ರನ್ ಪ್ರಕರಣದಲ್ಲಿ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ. ಮುಂಬೈನ ವರ್ಲಿಯಲ್ಲಿ ಭಾನುವಾರ ಮುಂಜಾನೆ ದ್ವಿಚಕ್ರ ವಾಹನಕ್ಕೆ ಅತಿ ವೇಗದ ಬಿಎಂಡಬ್ಲ್ಯು ಕಾರು ಡಿಕ್ಕಿ ಹೊಡೆದ ಪರಿಣಾಮ ಮಹಿಳೆ ಸಾವನ್ನಪ್ಪಿದ್ದು ಆಕೆಯ ಪತಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.



ಡಿಕ್ಕಿ ಹೊಡೆದ ನಂತರ ಐಷಾರಾಮಿ ಕಾರು ಮಹಿಳೆಯರನ್ನು 100 ಮೀಟರ್ ದೂರಕ್ಕೆ ಎಳೆದೊಯ್ದಿತ್ತು ಮುಂಬೈ ಪೊಲೀಸರ ಪ್ರಕಾರ, ಕೋಲಿವಾಡಾದ ದಂಪತಿಗಳು ಮೀನು ಖರೀದಿಸಿ ಮನೆಗೆ ತೆರಳುತ್ತಿದ್ದಾಗ ಅಪಘಾತ ಸಂಭವಿಸಿದೆ. ಬೆಳಿಗ್ಗೆ 5.30ರ ಸುಮಾರಿಗೆ, ದಂಪತಿ ಆಟ್ರಿಯಾ ಮಾಲ್ ಬಳಿ ಬರುತ್ತಿದ್ದಾಗ ವೇಗವಾಗಿ ಬಂದ ಬಿಎಂಡಬ್ಲ್ಯು ಬೈಕ್‌ಗೆ ಹಿಂದಿನಿಂದ ಹೊಡೆದಿದೆ. ಪರಿಣಾಮ ದಂಪತಿ ಐಷಾರಾಮಿ ಕಾರಿನ ಬಾನೆಟ್ ಮೇಲೆ ಬಿದ್ದಿದ್ದಾರೆ. ಪತಿ ಚಲಿಸುವ ಕಾರಿನಿಂದ ನೆಗೆಯುವಲ್ಲಿ ಯಶಸ್ವಿಯಾಗಿ ಜೀವ ಉಳಿಸಿಕೊಂಡಿದ್ದಾರೆ. ಆದರೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಮಹಿಳೆ ಸಾವನ್ನಪ್ಪಿದ್ದಾರೆ. ಕಾರಿನ ಮಾಲೀಕರು ರಾಜೇಶ್ ಶಾ ಎಂದು ತಿಳಿದುಬಂದಿದ್ದು, ಇವರು ಮಹಾರಾಷ್ಟ್ರ ಸಿಎಂ ಶಿಂಧೆ ಅವರ ಶಿವಸೇನೆ ಬಣದ ನಾಯಕ ಎಂದು ಹೇಳಲಾಗುತ್ತದೆ. ಮತ್ತೊಂದೆಡೆ ಅಪಘಾದ ವೇಳೆ ಕಾರನ್ನು ರಾಜೇಶ್ ಶಾ ಅವರ ಪುತ್ರ ಓಡಿಸುತ್ತಿದ್ದ ಎನ್ನಲಾಗಿದೆ. 2 ತಿಂಗಳ ಹಿಂದೆ ಪುಣೆಯಲ್ಲಿ ಅಪ್ರಾಪ್ತ ಬಾಲಕನೊಬ್ಬ ವೇಗವಾಗಿ ಕಾರು ಚಲಾಯಿಸಿ ಯುವ ಜೋಡಿ ಸಾವಿಗೆ ಕಾರಣವಾಗಿದ್ದು ಇದಾದ ಎರಡು ತಿಂಗಳ ಬಳಿಕ ಅದೇ ರೀತಿಯ ಮತ್ತೊಂದು ಪ್ರಕರಣ ಮಹಾರಾಷ್ಟ್ರದಲ್ಲಿ ನಡೆದಿದೆ.

2ರಿಂದ 3 ಗ್ರಾಂ ತೂಗುವ ಈ ಕೀಟದ ಬೆಲೆ 75 ಲಕ್ಷ?

ಲಂಡನ್: ಜೀರುಂಡೆಯಂತಹ ಸಣ್ಣದೊಂದು ಕೀಟಕ್ಕೆ ಒಂದು ಲಕ್ಸುರಿ ಕಾರಿಗಿಂತಲೂ ಅಧಿಕ ಬೆಲೆ ಇದೆ. ಮರ ಕೊರೆಯುವ ಕೀಟದಂತೆ ಕಾಣುವ ಈ ಸ್ಟಾಗ್ ಬೀಟಲ್‌ನ ಬೆಲೆ ಒಂದೆರಡು ರೂಪಾಯಿ ಅಲ್ಲ, ಬರೋಬ್ಬರಿ 75 ಲಕ್ಷ ಅಂದರೆ ಅಚ್ಚರಿ ಆಗುವುದಂತೂ ಗ್ಯಾರಂಟಿ. ಇದು ಪ್ರಪಂಚದಲ್ಲೇ ಅತ್ಯಂತ ದುಬಾರಿ ಬೆಲೆಯ ಕೀಟವಂತೆ. ಈ ಅಪರೂಪದ ಕೀಟವನ್ನು ಅದೃಷ್ಟ ಎಂದು ನಂಬಲಾಗುತ್ತದೆಯಂತೆ. ಇದನ್ನು ತಮ್ಮ ಬಳಿ ಇಟ್ಟುಕೊಂಡರೆ ರಾತ್ರೋರಾತ್ರಿ ಶ್ರೀಮಂತರಾಗಬಹುದು ಎಂಬುದು ಜನರ ನಂಬಿಕೆ ಇದೇ ಕಾರಣಕ್ಕೆ ಈ ಸಾರಂಗ ಜೀರುಂಡೆ ಅಥವಾ ಸ್ಟಾಗ್ ಬೀಟಲ್ ಎಂದು ಕರೆಯಲ್ಪಡುವ ಈ ಕೀಟಕ್ಕೆ ಬರೋಬ್ಬರಿ 75 ಲಕ್ಷ ರೂಪಾಯಿ ಬೆಲೆ ಇದೆ.



ಲಂಡನ್ ಮೂಲದ ಜೈವಿಕ ಇತಿಹಾಸ ಸಂಗ್ರಹಾಲಯದ ಪ್ರಕಾರ, ಈ ಕೀಟಗಳು 2ರಿಂದ 6 ಗ್ರಾಂನಷ್ಟು ತೂಗುತ್ತವೆ. ಹೆಚ್ಚೆಂದರೆ 3ರಿಂದ 7 ವರ್ಷಗಳ ಕಾಲ ಜೀವಿತಾವಧಿ ಹೊಂದಿರುತ್ತವೆ. ಅದರಲ್ಲಿ ಗಂಡು ಕೀಟಗಳು 35ರಿಂದ 75 ಮಿಲಿ ಮೀಟರ್ ಉದ್ದವಿದ್ದರೆ ಹೆಣ್ಣು ಕೀಟಗಳು 30ರಿಂದ 50 ಮಿಲಿ ಮೀಟರ್‌ನಷ್ಟು ಉದ್ದವಿರುತ್ತೆ. ಇವುಗಳನ್ನು ಔಷಧೀಯ ಕಾರಣಕ್ಕೂ ಬಳಸಲಾಗುತ್ತದೆ. ಗಂಡು ಜೀರುಂಡೆಯ ದವಡೆಯ ಮೇಲೆ ಸಾರಂಗಗಳ ಕೊಂಬುಗಳನ್ನು ಹೋಲುವ ವಿಶಿಷ್ಟವಾದ ರಚನೆ ಇರುವ ಕಾರಣಕ್ಕೆ ಈ ಕೀಟಗಳಿಗೆ ಸ್ಟೇಗ್ ಬಿಟಲ್ ಎಂಬ ಹೆಸರು ಬಂದಿದೆ. ಈ ಕೊಂಬುಗಳಂತಿರುವ ದವಡೆಯನ್ನು ಸಾರಂಗ ಜೀರುಂಡೆಗಳು ತಮ್ಮ ಸಂತಾನಾಭಿವೃದ್ಧಿಯ ಕಾಲದಲ್ಲಿ ಹೆಣ್ಣು ಕೀಟದೊಂದಿಗೆ ಸೇರುವುದಕ್ಕಾಗಿ ಹೋರಾಡುವ ಸಮಯದಲ್ಲಿ ಪರಸ್ಪರ ಕಾದಾಡುವುದಕ್ಕಾಗಿ ಬಳಸುತ್ತವೆಯಂತೆ.

ಖಾತೆಗೆ ಬಂತು ಸರ್ಕಾರಿ ಯೋಜನೆ ಹಣ, ಗಂಡನನ್ನು ಬಿಟ್ಟು ಪ್ರೇಮಿಗಳ ಜೊತೆ 11 ಮಹಿಳೆಯರು ಎಸ್ಕೇಪ್!

ಉತ್ತರ ಪ್ರದೇಶ: ಬಡವರಿಗೆ ಸೂರು ನೀಡಬೇಕು ಎಂಬ ಉದ್ದೇಶದಿಂದ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಆರ್ಥಿಕ ನೆರವು ನೀಡಲಾಗುತ್ತದೆ. ಇದರಿಂದ ಅವರು ವಾಸಿಸಲು ಸ್ವಂತ ಮನೆಗಳನ್ನು ನಿರ್ಮಿಸಿಕೊಳ್ಳಬಹುದು. ಆದರೆ, ಪ್ರಧಾನಮಂತ್ರಿ ಆವಾಸ್ ಯೋಜನೆಯ ಮೊದಲ ಕಂತಿನ ಹಣ ಪಡೆದ ಮಹಿಳೆಯರು, ತಮ್ಮ ಗಂಡಂದಿರನ್ನು ಬಿಟ್ಟು, ತಮ್ಮ ತಮ್ಮ ಪ್ರೇಮಿಗಳ ಜೊತೆ ಊರಿನಿಂದ ಪರಾರಿಯಾಗಿದ್ದಾರಂತೆ.

ಉತ್ತರಪ್ರದೇಶದ ಮಹಾರಾಜ್‌ಗಂಜ್ ಜಿಲ್ಲೆಯ ಗ್ರಾಮವೊಂದರಲ್ಲಿ ಇಂಥದ್ದೊಂದು ವಿಲಕ್ಷಣ ಘಟನೆ ನಡೆದಿವೆ. ಅದೂ ಒಂದಿಬ್ಬರಲ್ಲ, ಬರೋಬ್ಬರಿ 11 ಮಹಿಳೆಯರು ಪ್ರಧಾನಮಂತ್ರಿ ಆವಾಸ್ ಯೋಜನೆ ಮೊದಲ ಕಂತಿನ ಹಣ ಪಡೆದ ತಕ್ಷಣ 11 ಮಹಿಳೆಯರು ತಮ್ಮ ಪತಿಯನ್ನು ತೊರೆದು ಪ್ರೇಮಿಗಳೊಂದಿಗೆ ಓಡಿಹೋಗಿದ್ದಾರಂತೆ. ಮಹಾರಾಜ್‌ಗಂಜ್‌ನ ನಿಚ್ಲಾಲ್ ಬ್ಲಾಕ್ ಪ್ರದೇಶದ ಒಟ್ಟು 108 ಗ್ರಾಮಗಳಲ್ಲಿ 2023-24ನೇ ಸಾಲಿನಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆ ಅಡಿ 2350 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಈ ಪೈಕಿ 2 ಸಾವಿರಕ್ಕೂ ಹೆಚ್ಚು ಫಲಾನುಭವಿಗಳ ಮನೆಗಳೂ ಪೂರ್ಣಗೊಂಡಿವೆ. ಇದರ ಅಡಿಯಲ್ಲಿ 11 ಮಹಿಳಾ ಫಲಾನುಭವಿಗಳ ಖಾತೆಗಳಿಗೆ ಮೊದಲ ಕಂತಿನ ಹಣವಾಗಿ 40 ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿತ್ತಂತೆ.

ಅತ್ತ ಮೊದಲ ಕಂತಿನ ಹಣದೊಂದಿಗೆ ಹೆಂಡತಿಯರು ಪರಾರಿಯಾಗಿದ್ದರೆ, ಇತ್ತ ಪತಿ, ಮಕ್ಕಳು ಹಾಗೂ ಕುಟುಂಬಸ್ಥರು ಮನೆಯೂ ಇಲ್ಲ, ಹೆಂಡತಿಯೂ ಇಲ್ಲ ಅಂತ ಪರದಾಡುತ್ತಿದ್ದಾರೆ. ಕಂತು ಕಟ್ಟಿಸಿಕೊಂಡು ಓಡಿ ಹೋದ ಮಹಿಳೆಯರ ಗಂಡಂದಿರು ಎರಡನೇ ಕಂತಿನ ಹಣವನ್ನು ಪತ್ನಿಯ ಖಾತೆಗೆ ಕಳುಹಿಸದಂತೆ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

ಮುಡಾ ಹಗರಣದಲ್ಲಿ ನಮ್ಮ ಸಾಹೇಬರ ಹೆಸರು ತರುವುದು ತರವಲ್ಲ

ಮೈಸೂರು, ಜು.7(ಎಸ್‌ಪಿಎನ್)- ಮುಡಾ ಹಗರಣದಲ್ಲಿ ನಮ್ಮ ಸಾಹೇಬ (ಮುಖ್ಯಮಂತ್ರಿ ಸಿದ್ದರಾಮಯ್ಯ)ರ ಹೆಸರು ತಳಕು ಹಾಕುವುದು ತರವಲ್ಲ ಎಂದು ಶಾಸಕ ಕೆ.ಹರೀಶ್‌ಗೌಡ ತಿಳಿಸಿದರು.

ಸಹರಾ ಹ್ಯಾಂಡಿಕ್ರಾಫ್ಟ್ ಅಂಡ್ ಹ್ಯಾಂಡ್‌ಲೂಮ್ ಅಸೋಸಿಯೇಷನ್ ಮೇಳವನ್ನು ಉದ್ಘಾಟಿಸಿದ ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಸಿದ್ದರಾಮಯ್ಯನವರ ಪತ್ನಿ, ತಮ್ಮ ಜಮೀನಿಗೆ ಬದಲಾಗಿ, 50:50 ಯೋಜನೆಯಡಿ ನಿವೇಶನ ಪಡೆದುಕೊಂಡಿದ್ದಾರೆ. ಇದರಲ್ಲಿ ತಪ್ಪೇನಿದೆ. ಬಿಜೆಪಿ ಹೇಳಿದಂತೆ ಮುಡಾದಲ್ಲಿ ಬೃಹತ್ ಹಗರಣ ನಡೆದಿಲ್ಲ ಸಮರ್ಥಿಸಿಕೊಂಡರು.



ಈ ಯೋಜನೆಯಡಿ ಮಾಜಿ ಸಚಿವ ಸಾ.ರಾ.ಮಹೇಶ್, ಶಾಸಕ ಜಿ.ಟಿ.ದೇವೇಗೌಡ, ಮಾಜಿ ಎಂಎಲ್‌ಸಿ ಮರಿತಿಬ್ಬೇಗೌಡ, ಎಂಎಲ್‌ಸಿ ಮಂಜೇಗೌಡ ಸೇರಿದಂತೆ ಎಲ್ಲಾ ಜನಪ್ರತಿನಿಧಿಗಳು, ಅಧಿಕಾರಿಗಳು ನಿವೇಶನ ಪಡೆದಿದ್ದಾರೆ. ನಿಯಮದಂತೆ ನಿವೇಶನ ಪಡೆದಿದ್ದರೂ ಹಗರಣ ಎಂದು ಬೊಬ್ಬೆ ಹೊಡೆಯುವುದು ತರವಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಬಿಜೆಪಿ ಇದೇ ರೀತಿ ಪ್ರತಿಭಟನೆ ಮಾಡುತ್ತಿದ್ದರೆ, ನಾವು ಸಹ ದಾಖಲಾತಿಗಳೊಂದಿಗೆ ಪತ್ರಿಕಾಗೋಷ್ಠಿ ಕರೆದು ಎಲ್ಲಾ ವಿವರ ನೀಡುತ್ತೇವೆ ಎಂದು ತಿಳಿಸಿದರು.

ಮೈಸೂರು ಮಿತ್ರ ಸೋಮವಾರ 8 ಜುಲೈ 2024

ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡರ ಮನವಿಗೆ ಸ್ಪಂದಿಸಿದ ಸಿಎಂ

ಮೈಷುಗರ್ ವಿದ್ಯುತ್ ಬಿಲ್ ಬಾಕಿ ಮನ್ನಾ ಸಾಧ್ಯತೆ

ಬಿಲ್ ಬಾಕಿ ಕುರಿತು ಕಡತ ಮಂಡಿಸುವಂತೆ ಅಪರ ಮುಖ್ಯ ಕಾರ್ಯದರ್ಶಿಗೆ ಸಿಎಂ ಸೂಚನೆ




ಸಿದ್ದರಾಮಯ್ಯ

ಬೆಂಗಳೂರು, ಜು.7–ಮಂಡ್ಯದ ಮೈಷುಗರ್ ಸಕ್ಕರೆ ಕಾರ್ಖಾನೆಯ 52.25 ಕೋಟಿ ರೂ. ವಿದ್ಯುತ್ ಬಿಲ್ ಮನ್ನಾವಾಗುವ ಸಾಧ್ಯತೆ ಇದೆ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡ್ಯದ ಮೈಷುಗರ್ ಸಕ್ಕರೆ ಕಾರ್ಖಾನೆಯ ವಿದ್ಯುತ್ ಬಿಲ್ ಬಾಕಿಯನ್ನು ಮನ್ನಾ ಮಾಡುವ ಬಗ್ಗೆ ಪರಿಶೀಲಿಸಿ, ಕಡತ ಮಂಡಿಸುವಂತೆ ಹಣಕಾಸು ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗೆ ಆದೇಶಿಸಿದ್ದಾರೆ.

ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡರು ಮೈಷುಗರ್ ಸಕ್ಕರೆ ಕಾರ್ಖಾನೆಯ ಬಾಕಿ ವಿದ್ಯುತ್ ಬಿಲ್ ಅನ್ನು ಮನ್ನಾ ಮಾಡುವಂತೆ ಮಾಡಿರುವ ಮನವಿಗೆ ಸಿಎಂ ಸ್ಪಂದಿಸಿದ್ದು, ಪ್ರಸ್ತಾವನೆಯನ್ನು ಸಚಿವ ಸಂಪುಟದ ಮುಂದೆ ತರಲು ಕ್ರಮವಹಿಸುವಂತೆ ಸೂಚಿಸಿದ್ದಾರೆ. ರೈತರ ಹಿತದೃಷ್ಟಿಯಿಂದ ಕಾರ್ಖಾನೆಯನ್ನು ಉಳಿಸಿಕೊಳ್ಳಬೇಕಾಗಿರುವುದರಿಂದ ಈ ಬಗ್ಗೆ ಪರಿಶೀಲಿಸಿ, ಸಚಿವ ಸಂಪುಟದ ಮುಂದಿಟ್ಟು ಚರ್ಚಿಸಿ ತೀರ್ಮಾನಿಸಬೇಕಾಗಿರುವುದರಿಂದ ಕಡತ ಮಂಡಿಸುವಂತೆ ಸಿಎಂ ಸೂಚಿಸಿದ್ದಾರೆ.

ಮಂಡ್ಯ ಮೈಷುಗರ್ ಕಾರ್ಖಾನೆ ಕಳೆದ 25 ವರ್ಷಗಳಿಂದ ವಿದ್ಯುತ್ ಬಿಲ್ ಕಟ್ಟಿಲ್ಲ ಹೀಗಾಗಿ 52.25 ಕೋಟಿ ರೂ. ಬಾಕಿ ಪಾವತಿಸುವಂತೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಯು ಮೈಷುಗರ್ ಸಕ್ಕರೆ ಕಾರ್ಖಾನೆಗೆ ನೋಟಿಸ್ ನೀಡಿತ್ತು. ರೈತರ ಹಿತದೃಷ್ಟಿಯಿಂದ ಕಾರ್ಖಾನೆಯನ್ನು ಉಳಿಸಿಕೊಳ್ಳುವುದು ಅವಶ್ಯವಾಗಿದ್ದು, ವಿದ್ಯುತ್ ಬಿಲ್ ಮನ್ನಾ ಮಾಡಬೇಕು ಎಂದು ದಿನೇಶ್ ಗೂಳಿಗೌಡ ಸಿಎಂ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದರು.



ವಿದ್ಯುತ್ ಬಾಕಿ ಉಳಿಸಿಕೊಂಡಿರುವ ಮಂಡ್ಯ ಮೈಷುಗರ್ ಸಕ್ಕರೆ ಕಾರ್ಖಾನೆ.

ಮನವಿ ಪತ್ರದಲ್ಲೇನಿತ್ತು: ಮಂಡ್ಯದ ರೈತರ ಜೀವನಾಡಿಯಾಗಿರುವ ಮೈಷುಗರ್ ಕಾರ್ಖಾನೆಯು ರಾಜ್ಯದ ಏಕೈಕ ಸರ್ಕಾರಿ ಸ್ವಾಮ್ಯದ ಕಾರ್ಖಾನೆಯಾಗಿದೆ. ದೇಶದ ಮಾತ್ರವಲ್ಲ ಇಡೀ ಏಷ್ಯಾ ಖಂಡದಲ್ಲೇ ಮೊದಲು ಎಂದೆ, 1932ರಲ್ಲಿ ಈ ಕಾರ್ಖಾನೆಯು ಪ್ರಾರಂಭವಾಯಿತು. ಇದು ಮಂಡ್ಯ ಜಿಲ್ಲೆಯ ಹಾಗೂ ಕರ್ನಾಟಕದ ಹೆಮ್ಮೆಯಾಗಿದೆ. ಆದರೆ, ಇದೀಗ ಕಳೆದ 25 ವರ್ಷಗಳಿಂದ ವಿದ್ಯುತ್ ಬಿಲ್ ಕಟ್ಟದೆ ತೀವ್ರ ಸಂಕಷ್ಟಕ್ಕೆ ಗುರಿಯಾಗಿದೆ. ಇದರಿಂದ ಪಾರು ಮಾಡುವ ಗುರುತರ ಜವಾಬ್ದಾರಿ ಸರ್ಕಾರದ ಮೇಲಿದ್ದು, ಸಂಪುಟ ಸಭೆ ಕರೆದು ಬಾಕಿ ಇರುವ ವಿದ್ಯುತ್ ಬಿಲ್ 52.25 ಕೋಟಿ ರೂಪಾಯಿಯನ್ನು ಮನ್ನಾ ಮಾಡಬೇಕು ಎಂದು ಮನವಿ ಮಾಡಿದ್ದರು.

ಹಲವು ವರ್ಷಗಳಿಂದ ಹಲವಾರು ಕಾರಣಗಳಿಂದಾಗಿ ಬಂದ್ ಆಗಿದ್ದ ಸಕ್ಕರೆ ಕಾರ್ಖಾನೆಯು ಕಳೆದ ವರ್ಷ ರಾಜ್ಯ ಕಾಂಗ್ರೆಸ್ ಸರ್ಕಾರದ ಮುತುವರ್ಜಿಯಿಂದ ಪುನರಾರಂಭಗೊಂಡಿತು. ರಾಜ್ಯ ಸರ್ಕಾರ ಕಾರ್ಖಾನೆ ಪ್ರಾರಂಭೋತ್ಸವ, ಹಾಗೂ ಗ್ಯಾಂಗ್‌ಗಳಿಗೆ ನೀಡಲು 15 ಕೋಟಿ ರೂ. ದುಡಿಯುವ ಬಂಡವಾಳಕ್ಕಾಗಿ (ಕ್ಯಾಪಿಟಲ್) 35 ಕೋಟಿ ರೂ. ಸೇರಿ ಒಟ್ಟಾರೆ 50 ಕೋಟಿ ರೂ.ಗಳನ್ನು ಕಾರ್ಖಾನೆಯ ಪುನಶ್ಚೇತನಕ್ಕೆ ನೀಡಲಾಗಿದೆ. ಪರಿಣಾಮ ಕಳೆದ ವರ್ಷ ಕಾರ್ಖಾನೆಯು ಮಂಡ್ಯದ ರೈತರು ಬೆಳೆದ 2 ಲಕ್ಷ 41 ಸಾವಿರ ಟನ್ ಕಬ್ಬನ್ನು ನುರಿಸಲಾಗಿತ್ತು. ರೈತರಿಗೆ ಕಬ್ಬಿನ ಹಣ ಪಾವತಿಯಾಗಿದೆ. ಕಾರ್ಖಾನೆಯಿಂದ ರೈತ ರಿಗೆ ತುಂಬಾ ಅನುಕೂಲವಾಗುತ್ತಿದೆ. ಈ ವರ್ಷ ಕನಿಷ್ಠ 2 ಲಕ್ಷ 5 ಸಾವಿರ ಟನ್ ಕಬ್ಬನ್ನು ನುರಿಸುವ ಸಂಬಂಧ ರೈತರು ಒಪ್ಪಂದವನ್ನು ಮಾಡಿಕೊಂಡಿದ್ದಾರೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದರು. ಆದರೆ, ಕಾರ್ಖಾನೆ ಕೆಲವು ಅನಿವಾರ್ಯ ಕಾರಣಗಳಿಂದ ಕಳೆದ 25 ವರ್ಷಗಳಿಂದ ವಿದ್ಯುತ್ ಬಿಲ್ ಕಟ್ಟಿಲ್ಲ. 52.25 ಕೋಟಿ ರೂ. ವಿದ್ಯುತ್ ಬಿಲ್ ಬಾಕಿ ಇರುವ ಬಗ್ಗೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ಕಾರ್ಖಾನೆಗೆ ನೋಟಿಸ್ ನೀಡಿದೆ ವಿದ್ಯುತ್ ಪಾವತಿ ಮಾಡುವಂತೆ ಕಾರ್ಖಾನೆಯ ಆರ್ಥಿಕ ಪರಿಸ್ಥಿತಿ ಸುಮಾರ್ಕವಾಗಿಲ್ಲ ಕೋಟ್ಯಂತರ ರೂಪಾಯಿ ನಷ್ಟದಲ್ಲಿದೆ. ಅಷ್ಟೊಂದು ಹಣವನ್ನು ವಿದ್ಯುತ್ ಬಿಲ್‌ಗೆ ಪಾವತಿಸಿದರೆ, ಈ ಹಂಗಾಮಿನಲ್ಲಿ ಕಬ್ಬು ನುರಿಸುವುದೇ ಕಷ್ಟವಾಗಬಹುದು. ಇದರಿಂದ ಈಗಾಗಲೇ ಕಾರ್ಖಾನೆ ನಂಬಿ ಕಬ್ಬು ಬೆಳೆದಿರುವ ರೈತರಿಗೆ ನಷ್ಟವಾಗಬಹುದು ಎಂದು ದಿನೇಶ್ ಗೂಳಿಗೌಡ ಅವರು ಮನವಿ ಪತ್ರದಲ್ಲಿ ಸಮಸ್ಯೆಗಳ ತೀವ್ರತೆಯನ್ನು ತಿಳಿಸಿದ್ದರು. ಇದೀಗ ಈ ಪತ್ರಕ್ಕೆ ಸಿಎಂ ಸ್ಪಂದಿಸಿದ್ದಾರೆ.



ದಿನೇಶ್ ಗೂಳಿಗೌಡ

ಹುಬ್ಬನಹಳ್ಳಿ ಹಾಲು ಉತ್ಪಾದಕರ ಸಂಘಕ್ಕೆ ನಿರ್ದೇಶಕರ ಆಯ್ಕೆ



ಹುಬ್ಬನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನಿರ್ದೇಶಕರಾಗಿ ಆಯ್ಕೆಗೊಂಡಿರುವ ಡಾಲು ರವಿ ಬಣ

ಕೆ.ಆರ್.ಪೇಟೆ,ಜು.7– ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಹುಬ್ಬನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಮನ್‌ಮುಲ್ ಹಿರಿಯ ನಿರ್ದೇಶಕ ಡಾಲು ರವಿ ಬಣದ ಎಲ್ಲಾ 11 ಮಂದಿ ನಿರ್ದೇಶಕರು ಭರ್ಜರಿ ಗೆಲುವು ಸಾಧಿಸಿದ್ದಾರೆ.

ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ಹರೀಶ್(148), ಉಮೇಶ್(142), ವೀರಭದ್ರೇಗೌಡ(131) ಎಚ್.ಎನ್.ಸೋಮಶೇಖರ್(131), ಜಗದೀಶ್(123), ಎಚ್.ಸಿ.ಕೃಷ್ಣೇಗೌಡ(122) ಮತ ಪಡೆದು ಗೆಲುವು ಸಾಧಿಸಿದ್ದಾರೆ, ಮಹಿಳಾ ಮೀಸಲು ಕ್ಷೇತ್ರದಿಂದ ಕೀರ್ತಿ ನಾಗರಾಜೇಗೌಡ(134), ಹೇಮಾ ಧನಂಜಯ(117) ಜಯ ಸಾಧಿಸಿದರು. ಬಿಸಿಎಂ(ಎ) ಮೀಸಲು ಕ್ಷೇತ್ರದಿಂದ ಪ್ರಕಾಶ್(118), ಬಿಸಿಎಂ(ಬಿ) ಮೀಸಲು ಕ್ಷೇತ್ರದಿಂದ ಪರಮೇಶ್(145), ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ರಾಜೇಶ್(105) ಮತಗಳನ್ನು ಪಡೆದು ಚುನಾಯಿತರಾಗಿದ್ದಾರೆ.

ಚುನಾವಣಾಧಿಕಾರಿಯಾಗಿ ಪಾಂಡವಪುರ ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿಯ ಸಹಕಾರ ಅಧಿಕಾರಿ ಆನಂದ್ ನಾಯಕ್, ಸಹ ಚುನಾವಣಾಧಿಕಾರಿಯಾಗಿ ಸಂಘದ ಸಿಇಓ ಹೆಚ್.ಎನ್. ಪ್ರವೀಣ್ ಕಾರ್ಯನಿರ್ವಹಿಸಿದರು.

ನೂತನ ನಿರ್ದೇಶಕರನ್ನು ಗ್ರಾಮದೇವತೆ ಹುಚ್ಚಮ್ಮದೇವಿ ದೇವಾಲಯದ ಆವರಣದಲ್ಲಿ ನಿರ್ದೇಶಕ ಡಾಲು ರವಿ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಗ್ರಾಪಂ ಸದಸ್ಯ ಕುಮಾರಸ್ವಾಮಿ, ಸೋಮಶೇಖರ್, ಪಟೇಲ್ ಉಮೇಶ್, ದಶರಥ, ಮಂಜು, ಹೊನ್ನೇಗೌಡ, ಮಾಳಗೂರು ಜಗದೀಶ್, ಗ್ರಾಪಂ. ಮಾಜಿ ಅಧ್ಯಕ್ಷ ಮೋಹನ್ ಕುಮಾರ್, ಹಡವನಹಳ್ಳಿ ಗೋಪಾಲ್, ಸಂತೇಬಾಚಹಳ್ಳಿ ಸೋಮಶೇಖರ್ ಉಪಸ್ಥಿತರಿದ್ದರು.

ಮದ್ದೂರು ಬಳಿ ನಿಂತಿದ್ದ ಲಾರಿಗೆ ಬೈಕ್ ಡಿಕ್ಕಿ: ಪತ್ರಕರ್ತ ಸಾವು



ಮದ್ದೂರು, ಜು.7– ನಿಂತಿದ್ದ ಲಾರಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಪತ್ರಕರ್ತನೊಬ್ಬ ಸಾವನ್ನಪ್ಪಿರುವ ಘಟನೆ ಕಳೆದ ಶನಿವಾರ ರಾತ್ರಿ ಸಂಭವಿಸಿದೆ. ಘಟನೆಯಲ್ಲಿ ತಾಲೂಕಿನ ಬೆಸಗರಹಳ್ಳಿ ಗ್ರಾಮದ ಜಿ.ಎ.ಮಧುಕುಮಾರ್(30) ಮೃತಪಟ್ಟ ಪತ್ರಕರ್ತನಾಗಿದ್ದಾರೆ.

ಕಳೆದ ರಾತ್ರಿ 9.45ರ ಸಮಯದಲ್ಲಿ ಕೆಲಸ ಮುಗಿಸಿಕೊಂಡು ಮದ್ದೂರು ಪಟ್ಟಣದಿಂದ ಬೆಸಗರಹಳ್ಳಿ ಗ್ರಾಮಕ್ಕೆ ವಾಪಸ್ಸಾಗುವಾಗ ಟಿ.ಬಿ.ವೃತ್ತದ ಬಳಿ ನಿಂತಿದ್ದ ಲಾರಿಗೆ ಬೈಕ್ ಡಿಕ್ಕಿ ಹೊಡೆದಿದೆ. ಸ್ಥಳದಲ್ಲಿ ಸಮರ್ಪಕ ವಿದ್ಯುತ್ ಇಲ್ಲದ ಪರಿಣಾಮ ಕತ್ತಲೆ ಇದ್ದುದ್ದರಿಂದ ಮಧು ಚಲಾಯಿಸುತ್ತಿದ್ದ ಬೈಕ್ ಲಾರಿಗೆ ಡಿಕ್ಕಿ ಹೊಡೆದ ಪರಿಣಾಮ, ತಲೆಗೆ ತೀವ್ರವಾದ ಪೆಟ್ಟು ಬಿದ್ದು ಮಧು ರಕ್ತಸ್ರಾವದಿಂದ ಪ್ರಜ್ಞೆ ತಪ್ಪಿದ್ದಾರೆ.

ಕೂಡಲೇ ಸ್ಥಳೀಯರು ಅವರನ್ನು ಮದ್ದೂರು ತಾಲೂಕು ಆಸ್ಪತ್ರೆಗೆ ದಾಖಲು ಮಾಡಿದ್ದು, ಅಲ್ಲಿ ಪ್ರಥಮ ಚಿಕಿತ್ಸೆ ನೀಡಿ ಬಳಿಕ ಹೆಚ್ಚಿನ ಚಿಕಿತ್ಸೆಗೆ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಿಸುವ ಮಾರ್ಗ ಮಧ್ಯೆ ಮಧು ಮೃತಪಟ್ಟಿದ್ದಾರೆ.

ಕಳೆದ ಹಲವು ವರ್ಷಗಳಿಂದ ಪತ್ರಿಕೋದ್ಯಮ ವೃತ್ತಿ ನಿರ್ವಹಿಸುತ್ತಿದ್ದ ಮಧು, ಬೆಸಗರಹಳ್ಳಿ ಹೋಬಳಿಯ ಪ್ರಜಾವಾಣಿ ವರದಿಗಾರನಾಗಿ ಕಾರ್ಯನಿರ್ವಹಿಸಿ, ಪ್ರಸ್ತುತ ಪ್ರತಿನಿಧಿ ದಿನಪತ್ರಿಕೆಯ ಮದ್ದೂರು ತಾಲೂಕು ವರದಿಗಾರನಾಗಿ ಕಾರ್ಯನಿರ್ವಹಿಸುತ್ತಿದ್ದರು. ತಂದೆ–ತಾಯಿ ಇಬ್ಬರನ್ನು ಕಳೆದುಕೊಂಡಿದ್ದ ಮಧು, ಆರು ತಿಂಗಳ ಗರ್ಭಿಣಿಯಾದ ಪತ್ನಿ, ಹಾಗೂ ಮೂರು ವರ್ಷದ ಮಗುವನ್ನು ಅಗಲಿದ್ದಾರೆ. ಈ ಸಂಬಂಧ ಮದ್ದೂರು ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಸಿಸಿ ಚರಂಡಿ, ರಸ್ತೆ ಕಾಮಗಾರಿಗೆ ಚಾಲನೆ



ಹಲಗೂರು,ಜು.7– ಹಲಗೂರಿನ ಮುಸ್ಲಿಂ ಬ್ಲಾಕ್ ಹಾಗೂ ಧನಗೂರು ಮುಸ್ಲಿಂ ಬ್ಲಾಕ್‌ನಲ್ಲಿ 1 ಕೋಟಿ ಹಾಗೂ 75 ಲಕ್ಷ ವೆಚ್ಚದಲ್ಲಿ ಸಿಸಿ ಚರಂಡಿ ಮತ್ತು ಸಿಸಿ ರಸ್ತೆ ಕಾಮಗಾರಿಗೆ ಕ್ಷೇತ್ರದ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಗುದ್ದಲಿ ಪೂಜೆಯನ್ನು ನೆರವೇರಿಸಿದರು. ಗ್ರಾಪಂ ಅಧ್ಯಕ್ಷೆ ಟಿ.ರಕ್ಷಿತ ಜೀವನ್ ಕುಮಾರ್, ಉಪಾಧ್ಯಕ್ಷೆ ಲತಾ ಮಹದೇವ್, ಗ್ರಾಪಂ ಸದಸ್ಯರಾದ ಲಿಯಾಕತ್ ಅಲಿ, ಜಮೀಲ್, ಸದ್ರುಲ್, ವಂದರಿ ಬಾಬು, ಹೆಚ್.ಕೆ.ಮೂರ್ತಿ, ಗುಲ್ನಾಜ್ ಭಾನು, ಶಶಿಕಲಾ, ಮುಖಂಡರಾದ ಪದ್ಮನಾಬ್, ಹೆಚ್.ವಿ.ರಾಜಣ್ಣ, ಸಾಗ್ಯ ಕೆಂಪಣ್ಣ, ಸೋಹೇಲ್, ಬಾ.ಗೋ ಕುಮಾರ್,ಮೋಹನ್,ಜೀವನ್ ಕುಮಾರ್ ಇತರರು ಇದ್ದರು.

ಕೆಆರ್‌ಎಸ್‌ನಲ್ಲಿ ಟ್ರಯಲ್ ಬ್ಲಾಸ್ಟ್ ವಿರೋಧಿಸಿ ರೈತರ ಪ್ರತಿಭಟನೆ



ಶ್ರೀರಂಗಪಟ್ಟಣ,ಜು.7– ಕೆಆರ್‌ಎಸ್ ಅಣೆಕಟ್ಟೆ ಬಳಿ ಟ್ರಯಲ್ ಬ್ಲಾಸ್ಟ್ ನಡೆಸಲು ಮುಂದಾಗಿರುವ ಕ್ರಮವನ್ನು ವಿರೋಧಿಸಿ ಭೂಮಿತಾಯಿ ಹೋರಾಟ ಸಮಿತಿ ಕಾರ್ಯಕರ್ತರು ಹಾಗೂ ರೈತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.


ಬೆಂಗಳೂರು–ಮೈಸೂರು ಹೆದ್ದಾರಿಯ ಕುವೆಂಪು ವೃತ್ತದಲ್ಲಿ ಭೂಮಿತಾಯಿ ಹೋರಾಟ ಸಮಿತಿ ಅಧ್ಯಕ್ಷ ಬಿ.ಸಿ.ಕೃಷ್ಣೇಗೌಡ, ರೈತ ಮುಖಂಡ ಕೆ.ಎಸ್.ನಂಜುಂಡೇಗೌಡ ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ಹಾಗೂ ರೈತರು ರಸ್ತೆ ತಡೆ ನಡೆಸಿ, ರಾಜ್ಯ ಸರ್ಕಾರ, ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಹಾಗೂ ಜಿಲ್ಲೆಯ ಶಾಸಕರುಗಳ ವಿರುದ್ಧ ಘೋಷಣೆ ಕೂಗಿದರು.

ನಂತರ ರೈತ ಮುಖಂಡ ಕೆ.ಎಸ್.ನಂಜುಂಡೇಗೌಡ ಮಾತನಾಡಿ, ಟ್ರಯಲ್ ಬ್ಲಾಸ್ಟ್‌ನಿಂದ ಕನ್ನಂಬಾಡಿ ಅಣೆಕಟ್ಟೆಗೆ ಧಕ್ಕೆಯಾಗಲಿದ್ದು, ವಿಶ್ವಮಟ್ಟದ ಕೆಆರ್‌ಎಸ್ ಅಣೆಕಟ್ಟೆ ಸಮೀಕ್ಷೆ ನಡೆಸಿ, ಅಣೆಕಟ್ಟೆ ಶಿಥಿಲಗೊಂಡಿರುವುದಾಗಿ ವರದಿ ನೀಡಿದ್ದರೂ ಸಹ ಜಿಲ್ಲಾ ಉಸ್ತುವಾರಿ ಮಂತ್ರಿ ಚಲುವರಾಯ ಸ್ವಾಮಿ ಹಾಗೂ ರಾಜ್ಯ ಸರ್ಕಾರ ಅಣೆಕಟ್ಟೆ ವಿಷಯದಲ್ಲಿ ಚೆಲ್ಲಾಟವಾಡುತ್ತಿದ್ದಾರೆ ಎಂದು ಕಿಡಿಕಾರಿದರು. ಈ ವೇಳೆ ಸಮಿತಿ ಕಾರ್ಯದರ್ಶಿಗಳಾದ ಎಂ.ವಿ.ಕೃಷ್ಣ ದರ್ಶನ್, ಉಪಾಧ್ಯಕ್ಷ ಜಯರಾಮೇಗೌಡ, ಜಗದೀಶ್, ಗಂಜಾಂ ಮರಿಯಪ್ಪ ಸಂಚಾಲಕರಾದ ನಾಗೇಂದ್ರ ಕೆ.ಪಿ.ಬಾಬು, ಸಂಘಟಿಕಾ ಕಾರ್ಯದರ್ಶಿಗಳಾದ ಶಿವರಾಜು, ಮಾಲಿಂಗು, ಪಾಲಹಳ್ಳಿ ರಾಮಚಂದ್ರು ಮಾಜಿ ಗ್ರಾಪಂ ಅಧ್ಯಕ್ಷ ರವಿ ಲಕ್ಷ್ಮಣ ಇದ್ದರು.

ಜು.13, ಪಾಂಡವಪುರದಲ್ಲಿ ಲೋಕ ಅದಾಲತ್

ಪಾಂಡವಪುರ,ಜು.7– ಪಟ್ಟಣದ ನ್ಯಾಯಾಲಯದಲ್ಲಿ ಕಾನೂನು ಸೇವೆಗಳ ನಿರ್ದೇಶನದ ಮೇರೆಗೆ ಜು.13ರಂದು ಲೋಕ ಅದಾಲತ್ ಏರ್ಪಡಿಸಲಾಗಿದ್ದು, ಕಕ್ಷಿದಾರರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಪಟ್ಟಣದ ಜೆಎಂಎಫ್‌ಸಿ ನ್ಯಾಯಾಲಯದ ಪ್ರಧಾನ ಹಿರಿಯ ನ್ಯಾಯಾಧೀಶ ಆರ್.ಮಹೇಶ್ ತಿಳಿಸಿದರು. ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕ ಅದಾಲತ್‌ನಲ್ಲಿ ಸಾರ್ವಜನಿಕರು ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳು ಮತ್ತು ವ್ಯಾಜ್ಯಪೂರ್ವ ಪ್ರಕರಣಗಳನ್ನು ರಾಜಿ ಸಂಧಾನ ಮೂಲಕ ಇತ್ಯರ್ಥಪಡಿಸಿಕೊಳ್ಳಲು ಇಚ್ಛಿಸುವವರು ಸಂಬಂಧಪಟ್ಟ ತಾಲೂಕು ಕಾನೂನು ಸೇವಾ ಸಮಿತಿ ಮುಂದೆ ಖುದ್ದು ಹಾಜರಾಗಿ ಮಾಹಿತಿ ಪಡೆದುಕೊಂಡು ನ್ಯಾಯಾಲಯದಲ್ಲಿ ಬಾಕಿ ಇರುವ ಕೇಸುಗಳನ್ನು ಬಗೆಹರಿಸಿಕೊಳ್ಳಬಹುದಾಗಿದೆ ಎಂದರು.

ಕೃಷ್ಣಮೂರ್ತಿ ನಿಧನ



ಕಿಕ್ಕೇರಿ: ಪಟ್ಟಣದ ಸಿಂಗಮ್ಮ ಗುಡಿ ಬೀದಿಯ ನಿವಾಸಿ ಕೃಷ್ಣಮೂರ್ತಿ (82) ಅನಾರೋಗ್ಯದಿಂದ ಶನಿವಾರ ಮೃತರಾದರು.

ಮೃತರು ಸರಳ ವ್ಯಕ್ತಿತ್ವದಿಂದ ದಲಿತ ಹಿರಿಯ ಮುಖಂಡರಾಗಿ ಚಿರಪರಿಚಿತರಾಗಿದ್ದರು. ಮೃತರಿಗೆ ಮೂವರು ಪುತ್ರರು ಇದ್ದಾರೆ. ಮೃತರ ತೋಟದಲ್ಲಿ ಅಂತ್ಯಕ್ರಿಯೆ ಭಾನುವಾರ ಜರುಗಿತು.

ಒಂದನೇ ಪುಟದಿಂದ

ಪೊಲೀಸರೆಂದರೆ ಭಯವಲ್ಲ, ಭರವಸೆ

ಬಹಳ ಅಚ್ಚುಮೆಚ್ಚು. ಕುತೂಹಲ, ಕೌತುಕ, ಆಸಕ್ತಿಗಳ ತವರೂರು. ಅದರಲ್ಲೂ ಸ್ವಾತಂತ್ರ್ಯ ಚಳುವಳಿ ಕುರಿತು ಓದುವಾಗ ಇತರೆ ರಾಜ ಮನೆತನಗಳಿಗಿಂತ ಜನಸಾಮಾನ್ಯರ ಬದುಕಿನಲ್ಲಿ ಬದಲಾವಣೆ ತಂದ ಮೈಸೂರು ರಾಜರ ಆಡಳಿತ ಕುತೂಹಲವಾಗಿದೆ. ಇಂತಹ ಮೈಸೂರಿನಲ್ಲಿ ಕೆಲಸ ಮಾಡುವ ಅವಕಾಶ ದೊರೆತ್ತದ್ದು ನನ್ನ ಪಾಲಿನ ವಿಶೇಷ. 8 ವರ್ಷಗಳ ಬಳಿಕ ಮೈಸೂರಿಗರೊಂದಿಗೆ ಮತ್ತೆ ಸೇರಿದ್ದೇನೆ. ಸಾಮಾನ್ಯ ವಿದ್ಯಾರ್ಥಿಯೊಬ್ಬನ ಸಾಧನೆಯ ಹಾದಿಯಲ್ಲಿ ಏನೆಲ್ಲಾ ಆಗುತ್ತದೆಯೋ ಅದೇ ನನ್ನ ಬದುಕಿನಲ್ಲಿಯೂ ನಡೆದಿದೆ. ರಾಜ್ಯದಲ್ಲಿ 250 ಹಾಗೂ ದೇಶದಲ್ಲಿ 4 ಸಾವಿರ ಐಪಿಎಸ್ ಅಧಿಕಾರಿಗಳಿದ್ದಾರೆ ಅವರಂತೆಯೇ ನಾನು ಒಬ್ಬ. ಆದರೆ ನನ್ನಲ್ಲಿರುವ ತುಡಿತ ಜನರಿಗೆ ಇಷ್ಟವಾಗಿರಬಹುದು ಎಂದು ಧನ್ಯವಾದ ತಿಳಿಸಿದರು.

ನಾನು ವಿದ್ಯಾರ್ಥಿಯಾಗಿದ್ದಾಗ ಪೊಲೀಸ್ ಠಾಣೆ ಎಂದರೆ ಭಯಪಡುತ್ತಿದೆ. ನಮ್ಮೂರಿಗೆ ಪೊಲೀಸರು ಬಂದರೆಂದರೆ ಎಲ್ಲರೂ ಕಾಡು ಬೀಳುತ್ತಿದ್ದೇವು. ಈ ಭಯವನ್ನು ಹೋಗಲಾಡಿಸಬೇಕೆಂದೇ ನಾನು ಕರ್ತವ್ಯ ನಿರ್ವಹಿಸಿದ ಜಿಲ್ಲೆಗಳಲ್ಲಿ ಜನ ಸಂಪರ್ಕ ಸಭೆಗಳನ್ನು ನಡೆಸಿದ್ದೇನೆ. ಪೊಲೀಸರೆಂದರೇ ಭಯವಲ್ಲ ಭರವಸೆ ಎಂಬುದನ್ನು ಜನಸಾಮಾನ್ಯರಲ್ಲಿ ಮೂಡಿಸುವ ಪ್ರಯತ್ನ ಮಾಡಿದ್ದೇನೆ. ಮೈಸೂರಿನ ಹೆಚ್.ಡಿ.ಕೋಟೆ ತಾಲೂಕು, ಟಿ.ನರಸೀಪುರದ ಹದಿನಾರು ಗ್ರಾಮ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಗ್ರಾಮ ವಾಸ್ತವ್ಯ ಮಾಡುವ ಮೂಲಕ ಎಫ್‌ಐಆರ್ ಎಂದರೇನು. ಸಮನ್ಸ್ ಎಂದರೇನು. ವಾರೆಂಟ್ ಎಂದರೇನು, ಆರೆಸ್ಟ್ ಮಾಡುವುದೇಕೆ. ಎಫ್‌ಐಆರ್ ಅನ್ನು ಎಷ್ಟು ದಿನಗಳಲ್ಲಿ ವಿಲೇವಾರಿ ಮಾಡಬೇಕು ಎಂಬಿತ್ಯಾದಿ ವಿಚಾರಗಳನ್ನು ಜನರಿಗೆ ತಿಳಿಹೇಳುವ ಪ್ರಯತ್ನ ಮಾಡಿದ್ದೇನೆ ಎಂದರು.

ಕೊಕ್ಕೆ ಹಾಕಿ ಸತಾಯಿಸುವುದಕಲ್ಲ: ಒಂದು ಕಾಲದಲ್ಲಿ ಪೊಲೀಸ್ ಠಾಣೆಗೆ ಹೋಗುವುದನ್ನೇ ಅವಮಾನ ಎನ್ನುತ್ತಿದ್ದರು. ಆದರೆ ಪೊಲೀಸ್ ಠಾಣೆಗಳು ದೂರು ನಿವಾರಕ ಕೇಂದ್ರಗಳು. ಪೊಲೀಸ್ ಅಧಿಕಾರಿಗಳು ನಿಮ್ಮ ಸಮಸ್ಯೆಗಳನ್ನು ಬಗೆಹರಿಸುವವರು. ಕಾಯ್ದೆಗಳಿರುವುದು ಜನ ಸಾಮಾನ್ಯರ ಉದ್ಧಾರಕ್ಕಾಗಿಯೇ ಹೊರತು, ಕೊಕ್ಕೆ ಹಾಕಿ ಸತಾಯಿಸಲಿಕ್ಕೆ ಅಲ್ಲ. ಪೊಲೀಸ್ ಠಾಣೆಗಳಿರುವುದು ನೊಂದ ವ್ಯಕ್ತಿಯ ಕಣ್ಣೀರನೊರೆಸುವುದಕ್ಕೆ ವಿನಹಃ ಗಾಯದ ಮೇಲೆ ಬರೆ ಎಳೆಯುವ, ದೌರ್ಜನ್ಯಕ್ಕೊಳಗಾದ ವ್ಯಕ್ತಿಯ ಮೇಲೆಯೇ ದೌರ್ಜನ್ಯ ಮಾಡುವ ಕೇಂದ್ರಗಳಲ್ಲ ಎಂಬುದನ್ನು ಸಾಬೀತು ಮಾಡಲು ಜನ ಸಂಪರ್ಕ ಸಭೆಗಳನ್ನು ನಡೆಸಿದ್ದು ಎಂದು ತಿಳಿಸಿದರು.

ಪೊಲೀಸರ ಲಾಠಿ ಮತ್ತು ಬಂದೂಕು ಆಯುಧ ಪೂಜೆಗಲ್ಲ: ಆರ್ಥಿಕ ವಂಚನೆ ಪ್ರಕರಣಗಳು ಜಿಲ್ಲೆಯೊಂದರಲ್ಲೇ 100 ರಿಂದ 200 ಕೋಟಿ ದಾಟಿರುತ್ತವೆ ಎಂದು ತಿಳಿಸಿದರಲ್ಲದೆ, ಆರ್ಥಿಕ ಅಪರಾಧಗಳಲ್ಲಿ ಭಾಗಿಯಾದ ಆರೋಪಿಗಳ ಪರ ಒಳ್ಳೆಯ ವಕೀಲರಿದ್ದರೆ ಬಚಾವ್ ಆಗುತ್ತಾರೆ. ಆದರೆ ಹಳ್ಳಿಯಲ್ಲಿರುವವರು ಏನು ಮಾಡುತ್ತಾರೆ. ಒಬ್ಬ ವ್ಯಕ್ತಿಯ ಸಂಪಾದನೆಯಿಂದಲೇ ಇಡೀ ಕುಟುಂಬ ನಿಂತಿರುತ್ತದೆ. ಆದ್ದರಿಂದ 'ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಕಾರ್ಯಕ್ಕೆ ಸಲ್ಲದಯ್ಯ, ನಾಯಿಯ ಹಾಲು ನಾಯಿ ಮರಿಗಲ್ಲದೆ ಪಂಚಾಮೃತಕ್ಕೆ ಬಾರದಯ್ಯ' ಎಂಬ ಮಾತಿನಂತೆ ಜೂಜು, ದಂಧೆ, ರೌಡಿಸಂ ಮಾಡಿದವರಿಗೆ ಎಫ್‌ಐಆರ್ ಕಡ್ಡಾಯ.. ವಧೆ ಬೋನಸ್... ಪೊಲೀಸರಿಗೆ ಕೊಟ್ಟ ಲಾಠಿ ಮತ್ತು ಬಂದೂಕು ಆಯುಧ ಪೂಜೆಗಲ್ಲ ಎಂದೇಳುತ್ತಿದ್ದೆ ಎಂದು ತಮ್ಮ ಕಾರ್ಯಾಚರಣೆಯನ್ನು ವಿವರಿಸಿದರು.

ಸಂಚಯ ಆ್ಯಪ್‌ನಲ್ಲಿ ಮಾಹಿತಿ: ಸಮಾಜದ ಸಮಸ್ಯೆಗಳನ್ನು ಪರಿಹಾರ ಮಾಡಲಿಕ್ಕೆ ಕಾನೂನುಗಳು ಹುಟ್ಟುವುದು. ಹಾಗಾಗಿ ಕಾನೂನಿನಲ್ಲಿ ಕೆಲ ಬದಲಾವಣೆಗಳಾಗಿದ್ದು, ಪೊಲೀಸ್ ಇಲಾಖೆಯ ಸಂಚಯ ಆ್ಯಪ್ ಮೂಲಕ ಮಾಹಿತಿ ಪಡೆಯಬಹುದು. ಹಳೇ ಕಾನೂನು ಮತ್ತು ಹೊಸ ಕಾನೂನು ಮಾರ್ಪಾಡು ಸೇರಿದಂತೆ ಸಮಗ್ರ ಮಾಹಿತಿ ಪಡೆಯಬಹುದು. ಹಾಗೆಯೇ ನಿತ್ಯ ಬಳಕೆಯ ಎಲ್ಲಾ ಕಾನೂನುಗಳ ಬಗ್ಗೆಯೂ ಮಾಹಿತಿ ಇದೆ. ವಿಡಿಯೋಗಳ ಮೂಲಕವೂ ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

ಮಾಮೂಲಿ...

ಉದ್ದೇಶದಿಂದ ಪ್ರಾಧಿಕಾರದ ಹಿತ ದೃಷ್ಟಿಯಿಂದ ಕ್ರಮ ವಹಿಸಬೇಕು ಎಂದು ಎಲ್ಲಾ ಸದಸ್ಯರೊಂದಿಗೂ ಮಾತನಾಡಿ ಮನವಿ ಮಾಡಿದ್ದೆ. ನನ್ನ ಆ ಪ್ರಯತ್ನವೂ ಸಫಲವಾಗಲಿಲ್ಲ. ಆಗಲೇ ಸೂಕ್ತ ಕ್ರಮವಾಗಿದ್ದರೆ ಇಷ್ಟು ದೊಡ್ಡ ಮಟ್ಟದ ಭ್ರಷ್ಟಾಚಾರ ನಡೆಯುತ್ತಿರಲಿಲ್ಲವೇನೋ? ಎಂದ ಅವರು, ಮುಡಾ ಹಗರಣದ ಬಗ್ಗೆ ತನಿಖೆಯಾಗುತ್ತಿದೆ. ಇನ್ನು ಮುಂದಾದರೂ ಇಲ್ಲಿನ ವ್ಯವಸ್ಥೆ ಸರಿಪಡಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತೇನೆ ಎಂದು ಸೋಮಶೇಖರ್ ಹೇಳಿದರು. ಈ ಪ್ರಕರಣದಲ್ಲಿ ನನ್ನ ಹೆಸರು ಯಾಕೆ ತಳಕು ಹಾಕಿದ್ದಾರೋ ಗೊತ್ತಿಲ್ಲ. ನಾನು ಉಸ್ತುವಾರಿ ಸಚಿವನಾಗಿದ್ದಾಗ ಯಾವುದೇ ರೀತಿಯಲ್ಲೂ ಕೆಟ್ಟ ಹೆಸರು ಪಡೆದಿಲ್ಲ. ನನಗಾಗಿಯಾಗಲೀ ನನ್ನ ಪರವಾಗಿ ಬೇರೆಯವರಿಗಾಗಲೀ ಲಾಭ ಮಾಡಿದ್ದರೆ, ಮುಡಾದಿಂದ ಒಂದೇ ಒಂದು ನಿವೇಶನವನ್ನು ನಾನು ಪಡೆದಿದ್ದೇನೆ ಎಂಬುದು ಸಾಬೀತು ಪಡಿಸಿದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದು ಸವಾಲು ಹಾಕಿದರು.

ಮುನ್ನೆಚ್ಚರಿಕಾ ಕ್ರಮ ವಹಿಸಿ

ಅಂಗನವಾಡಿ, ಶಾಲಾ–ಕಾಲೇಜುಗಳು, ವಸತಿ ಶಾಲೆಗಳ ಮೇಲ್ಚಾವಣಿಗಳು ಮತ್ತು ಆವರಣಗಳಲ್ಲಿ ಮಳೆ ನೀರು ಸಂಗ್ರಹವಾಗದಂತೆ ಹಾಗೂ ನೀರಿನ ಶೇಖರಣೆಗಳಲ್ಲಿ ಈಡಿಸ್ ಸೊಳ್ಳೆಗಳು ಉತ್ಪತ್ತಿಯಾಗದಂತೆ ಕ್ರಮ ವಹಿಸುವುದು. ಸಾರ್ವಜನಿಕ ಸ್ಥಳಗಳು, ರಸ್ತೆಗಳಲ್ಲಿ ಮಳೆಯ ನೀರು ನಿಲ್ಲದಂತೆ ಗುಂಡಿ ಹಾಗೂ ತಗ್ಗುಗಳನ್ನು ಮುಚ್ಚಬೇಕು. ಸಾರ್ವಜನಿಕ ನಲ್ಲಿಗಳು ಹಾಗೂ ಕೊಳವೆ ಬಾವಿಗಳಿಂದ ಹೆಚ್ಚುವರಿ ನೀರು ಸರಾಗವಾಗಿ ಹರಿಯುವಂತೆ ಸೂಕ್ತವಾದ ಚರಂಡಿ ವ್ಯವಸ್ಥೆ ಮಾಡುವುದರ ಜೊತೆಗೆ ಈಗಾಗಲೇ ಇರುವ ಚರಂಡಿಗಳಲ್ಲಿ ಶೇಖರಣೆಗೊಂಡಿರುವ ಹೂಳನ್ನು ಎತ್ತಿ ನೀರು ಸರಾಗವಾಗಿ ಹರಿಯುವಂತೆ ಮತ್ತು ಚರಂಡಿಗಳು ಸ್ವಚ್ಛವಾಗಿರುವಂತೆ ನೋಡಿಕೊಳ್ಳಬೇಕು ಎಂದು ಸಚಿವರು ತಿಳಿಸಿದ್ದಾರೆ.

ಕೊಳವೆ ಬಾವಿಗಳು ಹಾಗೂ ನೀರು ಸರಬರಾಜು ಪೈಪುಗಳು ಒಳ ಚರಂಡಿಯಿಂದ ದೂರದಲ್ಲಿರುವಂತೆ ಕ್ರಮವಹಿಸುವುದು ಮತ್ತು ಪೈಪುಗಳಲ್ಲಿ ನೀರು ಸೋರಿಕೆಯಾಗ ದಂತೆ ನಿಗಾ ವಹಿಸಬೇಕು. ಗ್ರಾಮಗಳಲ್ಲಿರುವ ಸಮುದಾಯದ ಶೌಚಾಲಯಗಳಲ್ಲಿ ಹಾಗೂ ಮನೆಗಳ ಶೌಚಾಲಯಗಳ ಪಕ್ಕದಲ್ಲಿರುವ ನೀರಿನ ತೊಟ್ಟಿಗಳಿಗೆ ಮುಚ್ಚಳವನ್ನು ಅಳವಡಿಸಬೇಕು ಹಾಗೂ ತೊಟ್ಟಿಯನ್ನು ಸ್ವಚ್ಛಗೊಳಿಸಬೇಕು. ಜಾನುವಾರುಗಳಿಗೆ ಕುಡಿಯುವ ನೀರಿನ ಸೌಲಭ್ಯಕ್ಕಾಗಿ ಕಟ್ಟಿಸಿರುವ ತೊಟ್ಟಿಗಳನ್ನು ವಾರಕ್ಕೊಮ್ಮೆ ಕಡ್ಡಾಯವಾಗಿ ಸ್ವಚ್ಛಗೊಳಿಸಬೇಕು. ಖಾಲಿ ನಿವೇಶನಗಳಲ್ಲಿ ಘನತ್ಯಾಜ್ಯ ವಸ್ತುಗಳು ಮತ್ತು ಮಳೆ ನೀರು ಸಂಗ್ರಹವಾಗದಂತೆ ಕ್ರಮ ವಹಿಸಲು ನಿವೇಶನಗಳ ಮಾಲೀಕರಿಗೆ ಸೂಚನೆ ನೀಡಬೇಕು ಹಾಗೂ ಸೂಚನೆ ಪಾಲಿಸದವರಿಗೆ ನಿಯಮಾನುಸಾರ ದಂಡ ವಿಧಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕಟ್ಟೆಚ್ಚರ ನೀಡಿದ್ದಾರೆ.

ಎಳನೀರು ಮಾರಾಟಗಾರರು ಒಡೆದ ಎಳನೀರು ಚಿಪ್ಪುಗಳಲ್ಲಿ ಮಳೆ ನೀರು ಶೇಖರಣೆಯಾಗುವುದನ್ನು ತಡೆಗಟ್ಟಲು ಎಳನೀರು ಬುರುಡೆಗಳನ್ನು ನಾಲು, ಭಾಗಗಳಾಗಿ ಒಡೆದು, ಬೋರಲು ಇಡುವಂತೆ ಸೂಚಿಸಬೇಕು, ಪ್ರತಿದಿನ ಕಡ್ಡಾಯವಾಗಿ ವಿಲೇವಾರಿ ಮಾಡುವಂತೆ ನೋಡಿಕೊಳ್ಳಬೇಕು. ಆರೋಗ್ಯ ಸಿಬ್ಬಂದಿಯವರ ಜೊತೆಗೆ ಗ್ರಾಮ ಪಂಚಾಯತಿಗಳ ಸದಸ್ಯರು, ಮಹಿಳಾ ಸ್ವ–ಸಹಾಯ ಗುಂಪುಗಳ ಸದಸ್ಯರು, ಅಂಗನವಾಡಿ, ಶಾಲೆ ಹಾಗೂ ಇತರ ಸ್ವಯಂ ಸೇವಾ ಸಂಸ್ಥೆಗಳನ್ನು ತೊಡಗಿಸಿಕೊಂಡು ಡೆಂಗ್ಯೂ ನಿಯಂತ್ರಣಕ್ಕೆ ಅರಿವು ಮೂಡಿಸಬೇಕು ಎಂದು ಸೂಚಿಸಿದ್ದಾರೆ.

ಸಿಬ್ಬಂದಿ ಸಾವು: ಡೆಂಗ್ಯೂ ಶಂಕೆ

ಎಂದು ಮೈಸೂರಿನ ಜಯ ದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್. ಸದಾನಂದ ತಿಳಿಸಿದರು. ಡೆತ್ ಆಡಿಟ್ ನಡೆಯುತ್ತಿದ್ದು ಸೋಮ ವಾರ ಜಿಲ್ಲಾ ಆರೋಗ್ಯಾಧಿಕಾರಿಗಳು ಡೆಂಗ್ಯೂನಿಂದ ಮೃತಪಟ್ಟಿರುವ ಬಗ್ಗೆ ಖಚಿತ ಮಾಹಿತಿ ನೀಡಲಿ ದ್ದಾರೆ. ಒಂದು ವೇಳೆ ಡೆಂಗ್ಯೂ ದೃಢಪಟ್ಟಲ್ಲಿ ಮೈಸೂರಿ ನಲ್ಲಿ ವೈದ್ಯಕೀಯ ಕ್ಷೇತ್ರದ 2ನೇ ವ್ಯಕ್ತಿಯೊಬ್ಬರು ಬಲಿಯಾದಂತಾಗಿದೆ. ಈ ಹಿಂದೆ ಹುಣಸೂರಿನಲ್ಲಿ ಸಮುದಾಯ ಆರೋಗ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ನಾಗೇಂದ್ರ(34) ಎಂಬುವವರು ಡೆಂಗೆಯಿಂದ ಮೃತಪಟ್ಟಿದ್ದರು. ಈ ಕುರಿತು ಡಿಹೆಚ್‌ಓ ಡಾ. ಪಿ.ಸಿ.ಕುಮಾರಸ್ವಾಮಿ ಮಾತನಾಡಿ, ಇಂದು ಮೃತಪಟ್ಟ ಲಲಿತಾ ಅವರು ಡೆಂಗ್ಯೂ ಸೇರಿದಂತೆ ಇನ್ನಿತರ ಆರೋಗ್ಯ ಸಮಸ್ಯೆಗೆ ತುತ್ತಾಗಿದ್ದರು. ಅವರ ಸಾವು ಯಾವುದರಿಂದ ಆಗಿದೆ ಎಂದು ನಾಳೆ ಖಚಿತಪಡಿಸುತ್ತೇವೆ. ನಗರದಲ್ಲಿ ಡೆಂಗ್ಯೂ ಪ್ರಕರಣಗಳ ನಿಯಂತ್ರಣಕ್ಕೆ ಬಂದಿದೆ. ಜಿಲ್ಲೆಯಲ್ಲಿ ಇದುವರೆಗೆ 496 ಪ್ರಕರಣ ದೃಢಪಟ್ಟಿವೆ. ಮೈಸೂರು ನಗರ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿಯೇ 196 ಪ್ರಕರಣ ದಾಖಲಾಗಿವೆ. ಇದುವರೆಗೆ 7.86 ಲಕ್ಷ ಮನೆಗಳಲ್ಲಿ ಲಾರ್ವಾ ಪರೀಕ್ಷೆಯಾಗಿದೆ ಎಂದು ತಿಳಿಸಿದರು.

'ಸ್ಮಾರ್ಟ್ ವಿಲೇಜ್' ಮಾದರಿಯಲ್ಲಿ ವಿಶ್ವದಾಖಲೆ ನಿರ್ಮಿಸಿದ ಪೂರ್ಣ ಚೇತನ ಪ್ರೌಢಶಾಲಾ ವಿದ್ಯಾರ್ಥಿಗಳು



ಮೈಸೂರು ಎಚ್.ಡಿ. ಕೋಟೆಯ ರಸ್ತೆಯಲ್ಲಿರುವ ಪೂರ್ಣ ಚೇತನ ಪ್ರೌಢಶಾಲಾ ವಿದ್ಯಾರ್ಥಿಗಳು 'ಸ್ಮಾರ್ಟ್ ವಿಲೇಜ್' ಮಾದರಿಯನ್ನು ಸತತ 16 ಗಂಟೆ 52 ನಿಮಿಷಗಳ ಪ್ರಯತ್ನದಲ್ಲಿ ವಿಶ್ವದಾಖಲೆ ನಿರ್ಮಿಸಿ, ಪ್ರಮಾಣ ಪತ್ರ ಪಡೆದುಕೊಂಡಿದ್ದಾರೆ.

ಮೈಸೂರು, ಜು.7(ಎಸ್‌ಪಿಎನ್)– ಮೈಸೂರು ಎಚ್.ಡಿ. ಕೋಟೆಯ ರಸ್ತೆಯಲ್ಲಿರುವ ಪೂರ್ಣ ಚೇತನ ಪ್ರೌಢಶಾಲಾ ವಿದ್ಯಾರ್ಥಿ ಗಳು 'ಸ್ಮಾರ್ಟ್ ವಿಲೇಜ್' ಮಾದರಿಯನ್ನು ಸತತ 16 ಗಂಟೆ 52 ನಿಮಿಷಗಳ ಪ್ರಯತ್ನದಲ್ಲಿ ವಿಶ್ವದಾಖಲೆ ನಿರ್ಮಿಸಿ, ಪ್ರಮಾಣ ಪತ್ರ ಪಡೆದುಕೊಂಡಿದ್ದಾರೆ.

ಶನಿವಾರ ಬೆಳಗ್ಗೆ 7 ಗಂಟೆಯಿಂದ ರಾತ್ರಿ 11:52 ರವರೆಗೆ ಸತತ 16 ಗಂಟೆ 52 ನಿಮಿಷಗಳ ಅವಧಿಯಲ್ಲಿ ತಮ್ಮ ಕನಸಿನ 'ಸ್ಮಾರ್ಟ್ ವಿಲೇಜ್' ಮಾದರಿಯನ್ನು ಶಾಲಾ ಆವರಣದಲ್ಲಿ ರೂಪಿಸಿದ್ದು, ಎಲೈಟ್ ವರ್ಲ್ಡ್ ರೆಕಾರ್ಡ್ಸ್, ಏಷ್ಯನ್ ರೆಕಾರ್ಡ್ಸ್ ಅಕಾಡಮಿ ಹಾಗೂ ಇಂಡಿಯಾ ರೆಕಾರ್ಡ್ಸ್ ವಿಶ್ವದಾಖಲೆ ಸೃಷ್ಟಿಸಿದ್ದಾರೆ. ಇದು ಪೂರ್ಣ ಚೇತನ ವರ್ಲ್ಡ್ ರೆಕಾರ್ಡ್ಸ್ ಫೆಸ್ಟಿವಲ್‌ನ ಮೊದಲನೇ ಪ್ರಯತ್ನವಾಗಿದೆ. ಈ ವೇಳೆ ಎಸ್‌ಜೆಸಿಇ – ಎಸ್‌ಟಿಇಪಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ.ಶಿವಶಂಕರ್, ವಿಶ್ವದಾಖಲೆ ನಿರ್ಮಿಸಿದ ಪೂರ್ಣಚೇತನ ಪ್ರೌಢಶಾಲೆಯ ವಿದ್ಯಾರ್ಥಿಗಳನ್ನು ಪ್ರಮಾಣ ಪತ್ರ ವಿತರಿಸಿ, ಅಭಿನಂದಿಸಿದ್ದಾರೆ.

ಈ ವೇಳೆ ಬಿ.ಶಿವಶಂಕರ್ ಮಾತನಾಡಿ, ಪೂರ್ಣ ಚೇತನ ಪ್ರೌಢಶಾಲೆಯ 7 ರಿಂದ 10ನೇ ತರಗತಿಯವರೆಗಿನ 136 ವಿದ್ಯಾರ್ಥಿಗಳನ್ನು ಒಳಗೊಂಡ 68 ತಂಡಗಳು ಈ ಪ್ರತಿಕೃತಿಗಳನ್ನು ಸೃಷ್ಟಿಸಿದರು. 68 ವಿಶಿಷ್ಟ ರೊಬೋಟಿಕ್ ಮಾದರಿಗಳನ್ನು ವಿದ್ಯಾರ್ಥಿ ಗಳು 16.52 ನಿಮಿಷಗಳಲ್ಲಿ ಸೃಷ್ಟಿಸಿದ್ದಾರೆ. ಈ ಯುವ ಬಾಲ ಪ್ರತಿಭೆಗಳು ಕೋಡಿಂಗ್, ರೊಬೋಟಿಕ್ ಹಾಗೂ ಕೃತಕ ಬುದ್ಧಿ ಮತ್ತೆಂಯ ತಂತ್ರಜ್ಞಾನ ಬಳಸಿಕೊಂಡು ಅತ್ಯಾಧುನಿಕ, ಸುಸ್ಥಿರ ಸ್ಮಾರ್ಟ್ ಹಳ್ಳಿಯ ಕಲ್ಪನೆಯನ್ನು ಸಾಕಾರಗೊಳಿಸಿರುವುದು ಸಂತೋಷ ಸಂಗತಿ ಎಂದು ಹೇಳಿದ್ದಾರೆ.

'ಸ್ಮಾರ್ಟ್ ವಿಲೇಜ್' ಕಲ್ಪನೆ: ಈ ಹಳ್ಳಿಯಲ್ಲಿ ಕಸ, ತ್ಯಾಜ್ಯ ವಿಂಗಡಣೆ ಸಂಪೂರ್ಣ ಆಟೋಮ್ಯಾಟಿಕ್ (ಸ್ವಯಂ ಚಾಲಿತ). ಇಲ್ಲಿನ ಸ್ಮಾರ್ಟ್ ಕಸದ ಬುಟ್ಟಿಗಳು ಅಷ್ಟು ಸ್ಮಾರ್ಟ್. ಇನ್ನು ಈ ಹಳ್ಳಿಯಲ್ಲಿ ವಾಯು ಮಾಲಿನ್ಯ ಉಂಟಾದರೆ, ತಕ್ಷಣ ಹಳ್ಳಿಗರಿಗೆ ಎಚ್ಚರಿಕೆ ಸಂದೇಶ ರವಾನಿಸುವುದು. ರೈತನ ಬದುಕಿನ ಅವಿಭಾಜ್ಯ ಅಂಗವಾದ ಪಶುಪಾಲನೆಯಲ್ಲಿನ ಪಶುಗಳಿಗೆ ಮೇವು ನೀಡಿಕೆಯ ಕೆಲಸ ಸಂಪೂರ್ಣ ಅಟೋಮೇಟೆಡ್. ರೈತರ ಹೊಲಕ್ಕೆ ಎಷ್ಟು ನೀರು ಬೇಕು, ಹೊಲದ ಮಣ್ಣಿನಲ್ಲಿ ನೀರಿನ ಅಂಶವಿದೆಯೇ ಹೀಗೆ ಎಲ್ಲವನ್ನೂ ಇಲ್ಲಿ ಸ್ಮಾರ್ಟ್ ಆಗಿ ನಿರ್ವಹಿಸುವಂತಹ ತಂತ್ರಜ್ಞಾನ ಅಳವಡಿಸಿದ್ದಾರೆ. 'ಸ್ಮಾರ್ಟ್ ವಿಲೇಜ್' ಮಾದರಿಯಲ್ಲಿ ಅಳವಡಿಸಿರುವ ಎಲ್ಲಾ ರೊಬೊಟಿಕ್‌ಗಳು ಕೆಲಸ ನಿರ್ವಹಿಸುತ್ತಿದ್ದು, ನಮ್ಮ ಹಳ್ಳಿಗಳ ಸಮಸ್ಯೆಗಳಿಗೆ ಪರಿಹಾರ ರೂಪದಲ್ಲಿವೆ. ವಿದ್ಯಾರ್ಥಿಗಳು ನಮ್ಮ ಹಳ್ಳಿಗಳ ಬದುಕನ್ನು ಇನ್ನಷ್ಟು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಇಂತಹ ಪ್ರಯತ್ನ ನಡೆಸಿದ್ದಾರೆ ಎಂದಿದ್ದಾರೆ.

ಎಲೈಟ್ ವರ್ಲ್ಡ್ ರೆಕಾರ್ಡ್ಸ್‌ನ ರಾಯ ಭಾರಿ ಹಾಗೂ ತೀರ್ಪುಗಾರರಾದ ಅಮೀತ್ ಕೆ. ಹಿಂಗೋರಾಣಿ, ಡಾ. ಹನೀಫಾ ಬಾನು, ಎಲೈಟ್ ವರ್ಲ್ಡ್ ರೆಕಾರ್ಡ್ಸ್‌ನ ಡಾ. ಬಿ. ಶಿವಕುಮಾರನ್, ಏಷ್ಯನ್ ರೆಕಾರ್ಡ್ಸ್ ಅಕಾ ಡೆಮಿಯ ರಾಯಭಾರಿ ಮತ್ತು ಹಿರಿಯ ತೀರ್ಪುಗಾರ ಕೆ.ಆರ್. ವೆಂಕಟೇಶ್ವರನ್, ಇಂಡಿಯಾ ರೆಕಾರ್ಡ್ಸ್ ಅಕಾಡೆಮಿಯ ವ್ಯವಸ್ಥಾಪಕ ಡಾ. ಜಮುನಾ ರಾಜು, ಇಂಡಿಯಾ ರೆಕಾರ್ಡ್ಸ್ ಅಕಾಡೆಮಿಯ ರೆಕಾರ್ಡ್ಸ್ ವ್ಯವಸ್ಥಾಪಕರು ಮಕ್ಕಳ ಪ್ರತಿಕೃತಿಗಳನ್ನು ಪರಿಶೀಲಿಸಿದರು.

ಈ ವೇಳೆ ಪೂರ್ಣ ಚೇತನ ಶಾಲೆಯ ಅಧ್ಯಕ್ಷ ಡಾ. ಪಿ.ವಿದ್ಯಾ ಸಾಗರ್, ಸಿಇಓ ಬಿ.ದರ್ಶನ್ ರಾಜ್, ಮುಖ್ಯ ಆಡಳಿತಾ ಧಿಕಾರಿ ಮಾಧುರ್ಯ ರಾಮಸ್ವಾಮಿ, ಡೀನ್ ಲಾವಣ್ಯ, ಪ್ರಾಂಶುಪಾಲರು – ಪ್ರಿಯಾಂಕಾ ಬಿ, ವಿದ್ಯಾರ್ಥಿಗಳು, ಪೋಷಕರು ಉಪಸ್ಥಿತರಿದ್ದರು.

ಸಹರಾ ಹ್ಯಾಂಡಿಕ್ರಾಫ್ಟ್, ಹ್ಯಾಂಡ್‌ಲೂಮ್ ವಸ್ತು ಪ್ರದರ್ಶನಕ್ಕೆ ಚಾಲನೆ

ಮೈಸೂರು, ಜು.7(ಎಸ್‌ಪಿಎನ್)– ಮೈಸೂರು ಸ್ಕೌಟ್ ಅಂಡ್ ಗೈಡ್ ಮೈದಾನ(ಹಳೆ ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗ)ದಲ್ಲಿ ಸಹರಾ ಹ್ಯಾಂಡಿಕ್ರಾಫ್ಟ್ ಅಂಡ್ ಹ್ಯಾಂಡ್‌ಲೂಮ್ ಅಸೋಸಿಯೇಷನ್ ವತಿಯಿಂದ 'ಹ್ಯಾಂಡ್‌ಕ್ರಾಫ್ಟ್ ಅಂಡ್ ಹ್ಯಾಂಡ್ ಲೂಮ್ ಎಕ್ಸಿಬಿಷನ್–2024ಕ್ಕೆ ಶಾಸಕ ಕೆ.ಹರೀಶ್ ಗೌಡ ಭಾನುವಾರ ಚಾಲನೆ ನೀಡಿದರು.

ಈ ಪ್ರದರ್ಶನ ಮತ್ತು ಮಾರಾಟದಲ್ಲಿ ದೇಶದ ವಿವಿಧ ರಾಜ್ಯಗಳ ಕರಕುಶಲ ವಸ್ತುಗಳು, ವಿವಿಧ ಸಿಲ್ಕ್ ಕಾಟನ್ ಸ್ಯಾರಿಗಳು, ಕಾಶ್ಮೀರಿ, ಪಶ್ಚಿಮ ಬಂಗಾಳ, ಗುಜರಾತ್, ಉತ್ತರ ಪ್ರದೇಶದ ಬನಾರಸ್, ಆರ್ಡಿಶಾ ಸೀರೆಗಳು ಮಾರಾಟಕ್ಕಿದ್ದು, ಇಲ್ಲಿಗೆ ಮೈಸೂರಿನ ಜನತೆ ಭೇಟಿ ನೀಡಿ, ಖರೀದಿಸಿ ಕರಕುಶಲ ಕರ್ಮಿಗಳನ್ನು ಪ್ರೋತ್ಸಾಹಿಸುವಂತೆ ಮನವಿ ಮಾಡಿದರು.

ಈ ಮೇಳದ ಪ್ರದರ್ಶನ ಮತ್ತು ಮಾರಾಟ ಭಾನುವಾರದಿಂದ ಜು.15ರವರೆಗೆ (9 ದಿನಗಳು) ಇರಲಿದ್ದು, 170 ಮಳಿಗೆಗಳಿವೆ. ವಿವಿಧ ಮಳಿಗೆಗಳಲ್ಲಿ ಟಸ್ಸರ್ ಸಿಲ್ಕ್, ಜ್ಯೂಟ್ ಸೀರೆ, ರಾಜಸ್ಥಾನ್ ಜೈಪುರ ಟಾಪ್ಸ್, ಬಾಗಲ್‌ಪುರ್, ಸೂಟ್‌ಗಳು, ಅಲಂಕಾರಿಕ ವಸ್ತುಗಳು, ಗೃಹೋಪಯೋಗಿ ವಸ್ತುಗಳು, ಜೈಪುರ ಬೆಡ್‌ಶೀಟ್‌ಗಳು, ಕುಚ್‌ಬುಚ್ ಟಾಪ್ಸ್, ಗೋಲ್ಡ್ ಜ್ಯುವೆಲ್ಲರಿ, ಪೋಚಂಪಾಲಿ ಸೇರಿದಂತೆ ವಸ್ತುಗಳು ಮಾರಾಟಕ್ಕಿವೆ ಎಂದು ಮಾಹಿತಿ ನೀಡಿದರು.

ಈ ವೇಳೆ ಸಹರಾ ಹ್ಯಾಂಡಿಕ್ರಾಫ್ಟ್ ಅಂಡ್ ಹ್ಯಾಂಡ್‌ಲೂಮ್ ಅಸೋಸಿಯೇಷನ್‌ನ ತಬ್ರೀಜ್, ಸಾಹಿಲ್, ಅಸ್ಲಂ, ಅಮಿಜ್, ಎಸ್.ಎನ್.ಆದಿ ಸೇರಿದಂತೆ ಇತರರಿದ್ದರು.



ಸಹರಾ ಹ್ಯಾಂಡಿಕ್ರಾಫ್ಟ್ ಅಂಡ್ ಹ್ಯಾಂಡ್‌ಲೂಮ್ ಅಸೋಸಿಯೇಷನ್ ವತಿಯಿಂದ 'ಹ್ಯಾಂಡ್‌ಕ್ರಾಫ್ಟ್ ಅಂಡ್ ಹ್ಯಾಂಡ್ ಲೂಮ್ ಎಕ್ಸಿಬಿಷನ್ ಮಳಿಗೆಗೆ ಶಾಸಕ ಕೆ.ಹರೀಶ್‌ಗೌಡ ಭಾನುವಾರ ಭೇಟಿ ನೀಡಿದರು.

32 ಮಕ್ಕಳಿಗೆ ವಿದ್ಯಾನಿಧಿ ವಿತರಣೆ

ಶಿಕ್ಷಣಕ್ಕೆ ಒತ್ತು ನೀಡಲು ಕೊಡಗು ಪತ್ರಿಕಾ ಭವನ ಟ್ರಸ್ಟ್‌ನಿಂದ ನೆರವು



ಮಡಿಕೇರಿ ರೆಡ್‌ಬ್ರಿಕ್ಸ್‌ನ ಸತ್ಕಾರ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೊಡಗು ಪತ್ರಿಕಾ ಭವನ ಟ್ರಸ್ಟ್‌ನಿಂದ 32 ಮಕ್ಕಳಿಗೆ ವಿದ್ಯಾನಿಧಿ ವಿತರಿಸಲಾಯಿತು.

ಮಡಿಕೇರಿ, ಜು.7–ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿ ನೆರವಾಗುವ ಪ್ರಮುಖ ಧ್ಯೇಯದೊಂದಿಗೆ ಕೊಡಗು ಪತ್ರಿಕಾ ಭವನ ಟ್ರಸ್ಟ್‌ನಿಂದ 32 ಮಕ್ಕಳಿಗೆ ವಿದ್ಯಾನಿಧಿ ವಿತರಿಸಲಾಯಿತು.

ನಗರದ ರೆಡ್‌ಬ್ರಿಕ್ಸ್‌ನ ಸತ್ಕಾರ ಸಭಾಂಗಣದಲ್ಲಿ ಕೊಡಗು ಪತ್ರಿಕಾ ಭವನದ ವ್ಯಾನೇಜಿಂಗ್ ಟ್ರಸ್ಟಿ ಎಂ.ಪಿ.ಕೇಶವ ಕಾಮತ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲೆಯ ಪತ್ರಕರ್ತರ 22 ಮಕ್ಕಳು ಹಾಗೂ ನೆರವು ಬಯಸಿದ್ದ ಇತರೆ 10 ಮಕ್ಕಳಿಗೆ ತಲಾ 5 ಸಾವಿರ ರೂ.ನಂತೆ ಒಟ್ಟು 1.60 ಲಕ್ಷ ರೂ. ವಿದ್ಯಾನಿಧಿ ವಿತರಿಸಲಾಯಿತು.

ಹಿರಿಯ ಟ್ರಸ್ಟಿ ಟಿ.ಪಿ.ರಮೇಶ್ ಮಾತನಾಡಿ, ಮಕ್ಕಳ ಶಿಕ್ಷಣಕ್ಕೆ ನೆರವು ಮತ್ತು ಪ್ರೋತ್ಸಾಹ ನೀಡಬೇಕೆನ್ನುವ ಚಿಂತನೆಯಡಿ ವಿದ್ಯಾನಿಧಿಯು ಮೂಲಕ ನೆರವಾಗಲು ಟ್ರಸ್ಟ್ ನಿರ್ಧರಿಸಿದೆ. ಮುಂಬರುವ ದಿನಗಳಲ್ಲಿ ಈ ಯೋಜನೆಯನ್ನು ಮತ್ತಷ್ಟು ವ್ಯಾಪಕವಾಗಿ ವಿತರಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಪತ್ರಿಕಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಪತ್ರಕರ್ತರು, ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಕಿಂಚಿತ್ ನೆರವು ನೀಡುವುದು ವಿದ್ಯಾನಿಧಿಯ ಪ್ರಮುಖ ಉದ್ದೇಶ. ವಿದ್ಯಾನಿಧಿ ವಿತರಣೆಯಲ್ಲಿ ಬಡವ ಬಲ್ಲಿದನೆನ್ನುವ ಯಾವುದೇ ತಾರತಮ್ಯವಿಲ್ಲ. ಇದೊಂದು ಪತ್ರಕರ್ತರ ಕುಟುಂಬದ ಕಾರ್ಯಕ್ರಮವೇ ಆಗಿದ್ದು, ನಾವೆಲ್ಲ ಸೌಹಾರ್ದಭಾವದಿಂದ ಒಂದಾಗಿ ಮಕ್ಕಳ ಶಿಕ್ಷಣಕ್ಕೆ ಬೆನ್ನೆಲುಬಾಗಿ ನಿಲ್ಲಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಶಕ್ತಿ ಪತ್ರಿಕೆಯ ಸಂಪಾದಕ ಜಿ.ಚಿದ್ವಿಲಾಸ್ ಮಾತನಾಡಿ, ಪತ್ರಿಕಾ ಭವನ ಟ್ರಸ್ಟ್ ರಚನೆಯ ಸಂದರ್ಭ ಅದಕ್ಕೆ ಬರುವ ಆದಾಯದಿಂದ ಪತ್ರಕರ್ತರು ಮತ್ತು ಸಾರ್ವಜನಿಕರ ಹಿತಕ್ಕಾಗಿ ಬಳಕೆ ಮಾಡಬೇಕೆನ್ನುವ ಮೂಲ ಚಿಂತನೆಯನ್ನು ಹೊಂದಲಾಗಿತ್ತು. ಮುಂಬರುವ ದಿನಗಳಲ್ಲಿ ವಿದ್ಯಾನಿಧಿಯ ಮೊತ್ತವನ್ನು ಹೆಚ್ಚಿಸಿಕೊಳ್ಳುವ ಮೂಲಕ ಮತ್ತಷ್ಟು ನೆರವು ನೀಡಲು ಇಂದಿನ ಕಾರ್ಯಕ್ರಮ ಪ್ರೇರಣೆಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಎ.ಮುರಳೀಧರ್, ಕೊಡಗು ಪತ್ರಿಕಾ ಭವನ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಎಸ್.ಜಿ.ಉಮೇಶ್, ಖಜಾಂಚಿ ಕೆ.ತಿಮ್ಮಪ್ಪ, ಟ್ರಸ್ಟಿಗಳಾದ ಮುಲ್ಲೇಂಗಡ ಮಧೋಶ್ ಪೂವಯ್ಯ, ಎಚ್.ಟಿ.ಅನಿಲ್, ಶ್ರೀಧರ್ ನೆಲ್ಲಿತ್ತಾಯ, ಉಷಾ ಪ್ರೀತಂ, ಮಕ್ಕಳು ಹಾಗೂ ಪೋಷಕರು ಉಪಸ್ಥಿತರಿದ್ದರು.

ವಿಕಲಚೇತನರಿಗೆ ವಿವಿಧ ಸಲಕರಣೆ ವಿತರಣೆ



ಮಡಿಕೇರಿ ಗಾಂಧಿ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಕಲಚೇತನರಿಗೆ ಸಚಿವ ಎನ್.ಎಸ್.ಭೋಸರಾಜು ಯಂತ್ರಚಾಲಿತ ದ್ವಿಚಕ್ರ ವಾಹನ ವಿತರಿಸಿದರು.

ಮಡಿಕೇರಿ, ಜು.7–ನಗರದ ಗಾಂಧಿ ಮೈದಾನದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿಕಲಚೇತನರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಸಾಧನ ಸಲಕರಣೆ ವಿತರಿಸಿದರು.

ಕಾರ್ಯಕ್ರಮದಲ್ಲಿ 9.95 ಲಕ್ಷ ರೂ. ವೆಚ್ಚದ ಯಂತ್ರಚಾಲಿತ 10 ದ್ವಿಚಕ್ರ ವಾಹನ, 8.64 ಲಕ್ಷ ರೂ. ವೆಚ್ಚದ 9 ಬ್ಯಾಟರಿ ಚಾಲಿತ ವ್ಹೀಲ್‌ಚೇರ್, 2.90 ಲಕ್ಷ ರೂ. ವೆಚ್ಚದ 3 ಲ್ಯಾಪ್‌ಟಾಪ್, 1 ಬ್ರೈಲ್ ಕಿಟ್, 4 ಲಕ್ಷ ರೂ. ವೆಚ್ಚದ 31 ಶ್ರವಣ ಸಾಧನ ವಿತರಣೆ, 27.24 ಲಕ್ಷ ರೂ. ವೆಚ್ಚದ 2 ವಾಕರ್, 2 ವಾಕಿಂಗ್ ಸ್ಟಿಕ್, 2 ಸಿ.ಪಿ. ಚೇರ್ ಮತ್ತು 2 ವ್ಹೀಲ್‌ಚೇರ್ ಸೇರಿದಂತೆ ವಿವಿಧ ಸಾಧನ ಸಲಕರಣೆಗಳನ್ನು ವಿತರಿಸಲಾಯಿತು.

ಶಾಸಕರಾದ ಡಾ.ಮಂತರ್‌ಗೌಡ, ಎ.ಎಸ್.ಪೊನ್ನಣ್ಣ, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಪಂ ಸಿಇಓ ವರ್ಣಿತ್ ನೇಗಿ, ಉಪ ವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ನಟರಾಜು, ವಿಕಲಚೇತನರ ಅಧಿಕಾರಿ ವಿಮಲಾ ಇತರರು ಇದ್ದರು.

ಶಾಸಕ ಎ.ಎಸ್.ಪೊನ್ನಣ್ಣ ಜನ್ಮದಿನದ ಅಂಗವಾಗಿ ನಾಳೆ

ನಿರ್ಮಲ ಕೊಡಗು ಅಭಿಯಾನಕ್ಕೆ ಚಾಲನೆ



ವಿರಾಜಪೇಟೆ ಶಾಸಕರ ಗೃಹಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ ಮಾತನಾಡಿದರು.

ವಿರಾಜಪೇಟೆ, ಜು.7–ಶಾಸಕ ಎ.ಎಸ್.ಪೊನ್ನಣ್ಣ ಅವರ 50ನೇ ವರ್ಷದ ಜನ್ಮದಿನಾಚರಣೆ ಪ್ರಯುಕ್ತ ಜು.9ರಂದು ಪುರಸಭೆ, 58 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಿರ್ಮಲ ಕೊಡಗು ಅಭಿಯಾನಕ್ಕೆ ಚಾಲನೆ ನೀಡುವುದಾಗಿ ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ ತಿಳಿಸಿದರು.

ಶಾಸಕರ ಗೃಹಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 7 ಗಂಟೆಗೆ ತಲಕಾವೇರಿ ಸನ್ನಿಧಾನದಲ್ಲಿ ಪೂಜೆ ಸಲ್ಲಿಸಿ ವಿವಿಧ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು. ನಂತರ ಭಾಗಮಂಡಲದ ಶ್ರೀ ಭಗಂಡೇಶ್ವರ ಕ್ಷೇತ್ರದಲ್ಲಿ ಶಾಸಕರ ನೇತೃತ್ವದಲ್ಲಿ ವಿಶೇಷ ಪೂಜೆ ಸಲ್ಲಿಸಿ ಕೊಡಗಿನಲ್ಲಿ ಪ್ರಕೃತಿ, ಜೀವ ಹಾನಿಗೊಳಗಾಗದಂತೆ, ಜನಜಾನುವಾರುಗಳ ಸಮೃದ್ಧಿಗಾಗಿ ಪ್ರಾರ್ಥನೆ ಸಲ್ಲಿಸಲಾಗುವುದು ಎಂದರು.

ಬಿಟ್ಟಂಗಾಲದ ಕೂರ್ಗ್ ಎಥನಿಕ್ ಹಾಲ್‌ನಲ್ಲಿ ರಕ್ತದಾನ ಶಿಬಿರ ಮತ್ತು ಆರೋಗ್ಯ ತಪಾಸಣೆ ಶಿಬಿರ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ಸಭಾ ಕಾರ್ಯಕ್ರಮ ನಡೆಯಲಿದ್ದು, 120 ಕುಟುಂಬಕ್ಕೆ ಜಿಂಕ್ ಶೀಟ್ ವಿತರಣೆ ಮಾಡಲಾಗುವುದು. ಎಎಸ್‌ಪಿ ಅಸೋಸಿಯೇಟ್‌ನಿಂದ ಸರ್ಕಾರಿ ಆಸ್ಪತ್ರೆಗೆ ಅಗತ್ಯ ಉಪಕರಣಕ್ಕಾಗಿ 5 ಲಕ್ಷ ರೂ. ನೀಡಲಾಗುತ್ತದೆ. ಮಧ್ಯಾಹ್ನ 1.30ಕ್ಕೆ ಭೋಜನ ವ್ಯವಸ್ಥೆ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವಿರಾಜಪೇಟೆ ನಗರ ಕಾಂಗ್ರೆಸ್ ಅಧ್ಯಕ್ಷ ಮಾದಂಡ ತಿಮ್ಮಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಿದೇರಿರ ನವೀನ್, ಇಸ್ಮಾಯಿಲ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ವಿ.ಕೆ.ಸತೀಶ್, ತಾಲೂಕು ಬಗರ್‌ಹುಕಂ ಸಮಿತಿ ಅಧ್ಯಕ್ಷ ಆರ್.ಕೆ.ಸಲಾಂ, ಜಿಲ್ಲಾ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಹನೀಫ್, ರಫೀಕ್, ಮಾಧ್ಯಮ ವಕ್ತಾರ ಸೂರಜ್ ಹೊಸೂರು ಉಪಸ್ಥಿತರಿದ್ದರು.

ಬಾಬು ಜಗಜೀವನ್ ರಾಮ್ ಪುಣ್ಯಸ್ಮರಣೆ



ಮಡಿಕೇರಿ ಗಾಂಧಿ ಭವನದಲ್ಲಿ ನಡೆದ ಬಾಬು ಜಗಜೀವನ್ ರಾಮ್ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಸಚಿವ ಎನ್.ಎಸ್.ಭೋಸರಾಜು, ಶಾಸಕ ಡಾ.ಮಂತರ್‌ಗೌಡ, ಡಿಸಿ ವೆಂಕಟ್ ರಾಜಾ ಉದ್ಘಾಟಿಸಿದರು.

ಮಡಿಕೇರಿ, ಜು.7–ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮಾಜಿ ಉಪ ಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ ಬಾಬು ಜಗಜೀವನ್ ರಾಮ್ ಪುಣ್ಯಸ್ಮರಣೆ ಕಾರ್ಯಕ್ರಮ ನಗರದ ಗಾಂಧಿ ಭವನದಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ಬಾಬು ಜಗಜೀವನ್ ರಾಮ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ರಾಷ್ಟ್ರದ ಅನೇಕ ಮಹನೀಯರಲ್ಲಿ ಜಗಜೀವನ್ ರಾಂ ಅವರು ಒಬ್ಬರು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದ ಅವರು ಕೇಂದ್ರ ರೈಲ್ವೆ ಹಾಗೂ ಕೃಷಿ ಸಚಿವರಾಗಿ ಸಾಕಷ್ಟು ಸುಧಾರಣಾ ಕ್ರಮಗಳನ್ನು ಕೈಗೊಂಡು ದೇಶದ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದು ಸ್ಮರಿಸಿದರು.

ಶಾಸಕ ಡಾ.ಮಂತರ್‌ಗೌಡ ಮಾತನಾಡಿ, ಜಗಜೀವನ್ ರಾಂ ದಕ್ಷ ಆಡಳಿತಗಾರರಾಗಿ ಕಾರ್ಯನಿರ್ವಹಿಸಿದ್ದಾರೆ. ಕಾರ್ಮಿಕ ಸಚಿವರಾಗಿ ಅನೇಕ ಕಾಯ್ದೆಗಳನ್ನು ರಚಿಸಿ ಬಡವರು, ರೈತರು, ಕೂಲಿ ಕಾರ್ಮಿಕರ ಪರವಾಗಿ ನಿರಂತರ ಹೋರಾಟ ನಡೆಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಪಂ ಸಿಇಓ ವರ್ಣಿತ್ ನೇಗಿ, ಉಪ ವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರರಾಜ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶೇಖರ್ ಇತರರು ಇದ್ದರು.

ಕಾರಿನ ಮೇಲೆ ಆನೆ ದಾಳಿ: ನಾಲ್ವರು ಪಾರು

ಗೋಣಿಕೊಪ್ಪ, ಜು.7–ಪೊನ್ನಂಪೇಟೆ ತಾಲೂಕಿನ ಇರ್ಪು ಬಳಿ ಭಾನುವಾರ ಕಾರಿನ ಮೇಲೆ ಕಾಡಾನೆ ದಾಳಿ ನಡೆಸಿದ್ದು, ಅದೃಷ್ಟವಶಾತ್ ನಾಲ್ವರು ಪಾರಾಗಿದ್ದಾರೆ.



ವಿರಾಜಪೇಟೆಯ ಕೊಕ್ಕಲೇರ ಯಶ್ವಂತ್, ಪತ್ನಿ ಲವಿಕಾ, ಮಕ್ಕಳಾದ ಸಿರಿಸ್ ಮತ್ತು ಪವಿನ್ ಮಧ್ಯಾಹ್ನ ಕಾರಿನಲ್ಲಿ ಸಂಬಂಧಿ ನಿತಿನ್ ಅವರ ಮನೆಗೆ ತೆರಳುತ್ತಿದ್ದರು. ಇದೇ ವೇಳೆ ಇರ್ಪು ಬಳಿ ತೋಟವೊಂದರಿಂದ ಬಂದ ಕಾಡಾನೆ ಏಕಾಏಕಿ ಕಾರಿನ ಮೇಲೆ ದಾಳಿ ನಡೆಸಿದೆ. ಪರಿಣಾಮ ಕಾರಿನ ಹಿಂಬದಿ ಜಖಂಗೊಂಡಿದ್ದು, ಯಾವುದೇ ಅಪಾಯ ಸಂಭವಿಸಿಲ್ಲ. ಶ್ರೀಮಂಗಲ ವನ್ಯಜೀವಿ ವಲಯಾಧಿಕಾರಿ ಹಾಗೂ ಸಿಬ್ಬಂದಿ ಭೇಟಿ ನೀಡಿ, ಪರಿಶೀಲಿಸಿದರು.

ಕೊಡಗಿಗೆ ಭೇಟಿ ನೀಡುವಂತೆ ಹೆಚ್‌ಡಿಕೆಗೆ ಮನವಿ

ಮಡಿಕೇರಿ, ಜು.7–ಕೊಡಗು ಜಿಲ್ಲೆಗೂ ಭೇಟಿ ನೀಡುವಂತೆ ಕೇಂದ್ರದ ಬೃಹತ್ ಕೈಗಾರಿಕಾ ಸಚಿವ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಕೊಡಗಿನ ಜೆಡಿಎಸ್ ಮುಖಂಡರು ಬೆಂಗಳೂರಿನಲ್ಲಿ ಮನವಿ ಮಾಡಿದರು.

ಯುವ ಜಾತ್ಯತೀತ ಜನತಾ ದಳದ ಜಿಲ್ಲಾಧ್ಯಕ್ಷ ಸಿ.ಎಲ್.ವಿಶ್ವ, ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ಕೆ.ಜಿ.ಜಾಶಿರ್ ಮೂರ್ನಾಡು, ಪ್ರಮುಖರಾದ ಶಿವದಾಸ್, ಶರತ್ ಮತ್ತಿತರರು ಭೇಟಿಯಾಗಿ ಅಭಿನಂದನೆ ಸಲ್ಲಿಸಿದರು. ಇದೇ ಸಂದರ್ಭ ಕೊಡಗು ಜಿಲ್ಲೆಗೂ ಭೇಟಿ ನೀಡುವಂತೆ ಮನವಿ ಮಾಡಿದರು.

ನಂತರ ಮಾತನಾಡಿದ ಹೆಚ್.ಡಿ.ಕುಮಾರಸ್ವಾಮಿ, ಸದ್ಯದಲ್ಲೇ ಜಿಲ್ಲೆಗೆ ಭೇಟಿ ನೀಡಿ, ಕಾರ್ಯಕರ್ತರ ಸಭೆ ನಡೆಸಿ ಪಕ್ಷ ಸಂಘಟಿಸಲಾಗುವುದು. ನಿಷ್ಠಾವಂತ ಕಾರ್ಯಕರ್ತರಿಗೆ ಮುಂಬರುವ ಜಿಪಂ ಮತ್ತು ತಾಪಂ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡುವುದಾಗಿ ತಿಳಿಸಿದರು.



ಕೊಡಗು ಜಿಲ್ಲೆಗೂ ಭೇಟಿ ನೀಡುವಂತೆ ಕೇಂದ್ರ ಸಚಿವ ಕುಮಾರಸ್ವಾಮಿ ಅವರನ್ನು ಜೆಡಿಎಸ್ ಮುಖಂಡರು ಬೆಂಗಳೂರಿನಲ್ಲಿ ಮನವಿ ಮಾಡಿದರು.

ಸ್ವಯಂ ಅರಿವಿನಿಂದ ಆಂತರಿಕ ಶಕ್ತಿ ವೃದ್ಧಿ

ಅರಿವು ಕಾರ್ಯಕ್ರಮದಲ್ಲಿ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರಿಜೀ ಅಭಿಮತ

ಗುಂಡ್ಲುಪೇಟೆ, ಜು.7–ಸ್ವಯಂ ಅರಿವಿನಿಂದ ಆಂತರಿಕ ಶಕ್ತಿ ವೃದ್ಧಿಯಾಗುತ್ತದೆ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಮುಖ್ಯ ಸಂಚಾಲಕಿ ಹಾಗೂ ಮನೋಬಲ ತರಬೇತುದಾರರಾದ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರಿಜೀ ಅಭಿಪ್ರಾಯಪಟ್ಟರು.

ತಾಲೂಕಿನ ತೆರಕಣಾಂಬಿ ಗ್ರಾಮದ ಮೊರಾರ್ಜಿ ವಸತಿ ಶಾಲೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಯುವ ಸ್ಪಂದನ ಸಹಯೋಗದಲ್ಲಿ ನಡೆದ ವ್ಯಕ್ತಿತ್ವ ಬೆಳವಣಿಗೆ ಮತ್ತು ಜೀವನ ಕೌಶಲ್ಯ ಕುರಿತು ವಿದ್ಯಾರ್ಥಿಗಳಿಗೆ ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅಧ್ಯಯನದಿಂದ ಬದುಕಿನಲ್ಲಿ ಯಶಸ್ಸು ಸಾಧಿಸಬಹುದು. ಅದಕ್ಕೆ ಬೇಕಾದ ಏಕಾಗ್ರತೆಯನ್ನು ಆಧ್ಯಾತ್ಮ ನೀಡುತ್ತದೆ. ಆಧ್ಯಾತ್ಮ ಮೊಬೈಲ್ ಚಾರ್ಜ್ ಮಾಡಿದಂತೆ. 'ಚಾರ್ಜ್' ಕಾಣುವುದಿಲ್ಲ. ಆದರೆ, ಅದರಿಂದ ಎಲ್ಲವೂ ಸಾಧ್ಯವಾಗುತ್ತದೆ ಎಂದರು.

ಮಾನಸಿಕ ಶಾಂತಿ ಇಲ್ಲದಿದ್ದರೆ ಒಂದು ಕೆಲಸಕ್ಕೆ ನಾಲ್ಕು ಪಟ್ಟು ಸಮಯ ವ್ಯರ್ಥವಾಗುತ್ತದೆ. ಶಾಂತಿ ಹೊಂದಿದಾಗ ಒಂದು ಗಂಟೆಯ ಕೆಲಸವನ್ನು 10 ನಿಮಿಷದಲ್ಲಿ ಪೂರೈಸಬಹುದು. ಇದೇ ಆಂತರಿಕ ಸಶಕ್ತೀಕರಣ. ಎಲ್ಲಾ ಧರ್ಮಗಳು ಪರಮಾತ್ಮನನ್ನು ಜ್ಯೋತಿ ರೂಪದಲ್ಲಿ ಕಾಣುತ್ತವೆ. ಅಂತಹ ಜ್ಯೋತಿ ನಮ್ಮ ಆತ್ಮದ ಜೊತೆ ಅನುಸಂಧಾನ ಹೊಂದಬೇಕು. ಇಂತಹ ಆಂತರಿಕ ಶಕ್ತಿ ಧ್ಯಾನದಿಂದ ಬರುತ್ತದೆ. ವ್ಯಾಯಾಮದಿಂದ ದೈಹಿಕ ಶಕ್ತಿ ಹಾಗೂ ವ್ಯವಹಾರದಿಂದ ಆರ್ಥಿಕ ಶಕ್ತಿ ಸಂಪಾದಿಸಿದರೆ, ಸ್ವಯಂ ಅಧ್ಯಯನದಿಂದ ಆಧ್ಯಾತ್ಮ ಶಕ್ತಿ ಪಡೆಯಬಹುದು ಎಂದು ತಿಳಿಸಿದರು.



ತೆರಕಣಾಂಬಿ ಮುರಾರ್ಜಿ ವಸತಿ ಶಾಲೆಯುಲ್ಲಿ ನಡೆದ ಅರಿವು ಕಾರ್ಯಕ್ರಮವನ್ನು ರಾಜ ಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜಿ ಉದ್ಘಾಟಿಸಿದರು.

ಬಾಲನ್ಯಾಯ ಮಂಡಳಿ ಸದಸ್ಯ ಡಿ.ಜೆ.ಸುರೇಶ್ ಮಾತನಾಡಿ, ಪ್ರತಿಯೊಬ್ಬ ಪಾಲಕರು ನಾನು ರಾಷ್ಟ್ರದ ಆಧಾರ ಸ್ತಂಭ ನಿರ್ಮಿಸುತ್ತಿದ್ದೇನೆ ಎಂಬ ವ್ಯಾಪಕ ದೃಷ್ಟಿಕೋನ ಇಟ್ಟುಕೊಂಡು ತಮ್ಮ ಮಕ್ಕಳಿಗೆ ಶಿಕ್ಷಣ ನೀಡುವ ಅವಶ್ಯಕತೆ ಇದೆ. ವ್ಯಕ್ತಿತ್ವ ವಿಕಸನದಿಂದ ಮಕ್ಕಳು ಅನೇಕ ಪ್ರಯೋಜನಗಳನ್ನು ಪಡೆಯಬಹುದು ಎಂದರು.

ಆತ್ಮವಿಶ್ವಾಸ ಮತ್ತು ಸ್ವಾಭಿಮಾನ ಬೆಳೆಸಲು ಅವರ ಸಾಮಾಜಿಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು. ಸ್ನೇಹಿತರನ್ನು ಆಯ್ಕೆ ಮಾಡಲು ಮತ್ತು ಸಂಬಂಧಗಳನ್ನು ಬೆಳೆಸಲು ಅವಶ್ಯಕವಾಗಿದೆ. ಭಾವನೆಗಳನ್ನು ಅರ್ಥ ಮಾಡಿಕೊಳ್ಳಲು ಮುಖ್ಯವಾಗಿದೆ. ಪ್ರತಿಯೊಬ್ಬರು ಸಾಮರ್ಥ್ಯ ಮತ್ತು ದೌರ್ಬಲ್ಯ ತಿಳಿದುಕೊಳ್ಳಲು ಸಹಾಯವಾಗಿದೆ ಎಂದರು.

> **ಮಕ್ಕಳು ವ್ಯಾಸಂಗದ ಜೊತೆಯಲ್ಲಿ ವ್ಯಕ್ತಿತ್ವ ವಿಕಸನಕ್ಕೆ ಪೂರಕ ಚಟುವಟಿಕೆಗಳ ಬಗ್ಗೆ ಗಮನ ನೀಡಬೇಕು. ವ್ಯಕ್ತಿತ್ವ ವಿಕಸನ ಶಿಬಿರಗಳನ್ನು ಸಮರ್ಥವಾಗಿ ಬಳಸಿಕೊಂಡು ಒಳ್ಳೆಯ ಹೆಸರು ಗಳಿಸಬೇಕು. ಇದರಿಂದ ಸಮಾಜದಲ್ಲಿ ಒಳ್ಳೆಯ ಪ್ರಜೆಗಳಾಗಿ ಹಳ್ಳಿಗೆ ಗೌರವ ತರಬೇಕು.**
> –ಮಹದೇವ ಪ್ರಸಾದ್, ಮೊರಾರ್ಜಿ ವಸತಿ ಶಾಲೆ ಪ್ರಾಂಶುಪಾಲ.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಶಾಲೆಯ ಉದ್ಯಾನದಲ್ಲಿ ಬೆಳೆದ ಹೂಗಳಿಂದ ತಾವೇ ತಯಾರಿಸಿದ ಪುಷ್ಪಗುಚ್ಛ ನೀಡಿ ಗಣ್ಯರನ್ನು ಸ್ವಾಗತಿಸಿದರು. ಶಿಕ್ಷಕ ಟಿ.ಎಸ್.ಮಂಜು, ಯುವ ಸ್ಪಂದನ ಗುರುರಾಜ್, ಮನೋಜ್ ಕುಮಾರ್, ಓಂ ಶಾಂತಿ ನ್ಯೂಸ್ ಸರ್ವಿಸ್‌ನ ಬಿ.ಕೆ.ಆರಾಧ್ಯ ಹಾಜರಿದ್ದರು.

ಬೇಗೂರು ಠಾಣೆಗೆ ಎಸ್ಪಿ ಬಿ.ಟಿ.ಕವಿತಾ ಭೇಟಿ

ಬೇಗೂರು, ಜು.7–ಇಲ್ಲಿನ ಪೊಲೀಸ್ ಠಾಣೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಭಾನುವಾರ ಭೇಟಿ ನೀಡಿ, ಠಾಣಾಧಿಕಾರಿಗಳು, ಸಿಬ್ಬಂದಿ ಕರ್ತವ್ಯ ಹಾಗೂ ಸ್ವಚ್ಛತೆ ಪರಿಶೀಲನೆ ನಡೆಸಿದರು.


ನಂತರ ಮಾತನಾಡಿದ ಅವರು, ವಿವಿಧ ಪ್ರಕರಣಗಳಲ್ಲಿ ವಶಪಡಿಸಿಕೊಂಡಿರುವ ಮಾಲುಗಳನ್ನು ತ್ವರಿತಗತಿಯಲ್ಲಿ ವಿಲೇವಾರಿಗೊಳಿಸುವಂತೆ ಪೊಲೀಸರಿಗೆ ಸೂಚಿಸಿದರು. ಇದೇ ವೇಳೆ ಠಾಣೆಯಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಿ, ಸೂಕ್ತ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಪಘಾತ ಸ್ಥಳಕ್ಕೆ ಭೇಟಿ: ಬೇಗೂರು ಹೊರವಲಯದ ಪೆಟ್ರೋಲ್ ಬಂಕ್ ಬಳಿ ಶನಿವಾರ ಸಂಭವಿಸಿದ ಅಪಘಾತದಲ್ಲಿ ಇಬ್ಬರು ಮೃತಪಟ್ಟ ಸ್ಥಳಕ್ಕೆ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ.ಕವಿತಾ ಭೇಟಿ ನೀಡಿ, ಪರಿಶೀಲಿಸಿದರು. ಈ ಸಂದರ್ಭದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ವನರಾಜು, ಸಬ್ ಇನ್ಸ್‌ಪೆಕ್ಟರ್ ಚರಣ್‌ಗೌಡ, ಠಾಣೆ ಸಿಬ್ಬಂದಿ ಹಾಜರಿದ್ದರು.



ಬೇಗೂರು ಠಾಣೆಗೆ ಭೇಟಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಸಾರ್ವಜನಿಕರ ಅಹವಾಲು ಆಲಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿಗೆ ಸನ್ಮಾನ...



ಚಾಮರಾಜನಗರ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವತಿಯಿಂದ ಬಿಇಓ ಸಿ.ಹನುಮಂತ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಕೆ.ಎಸ್.ಮಾದಪ್ಪ, ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ, ತಾಲೂಕು ಅಧ್ಯಕ್ಷ ಸಿ.ಕೆ.ರಾಮಸ್ವಾಮಿ, ಪ್ರಧಾನ ಕಾರ್ಯದರ್ಶಿ ಎನ್.ಸುಧಾ, ಪದಾಧಿಕಾರಿಗಳಾದ ಎಂ.ಡಿ.ಮಹದೇವಯ್ಯ, ಬಿ.ಕೃಷ್ಣಮೂರ್ತಿ, ಸವಿತಾ ರಾಣಿ, ಮಹದೇವಸ್ವಾಮಿ, ಸಿ.ಎಂ.ಮುರುಗೇಶ್ ಕುಮಾರ್, ಎಸ್.ಜಿ.ರಾಜು, ಭವಾನಿದೇವಿ, ಶ್ವೇತಾ, ಸಿ.ಮಲ್ಲಿಕಾರ್ಜುನ, ನಟರಾಜು, ಸಮೀವುಲ್ಲಾ, ಎಸ್.ಬಿ.ರಾಜು, ಸಿದ್ದರಾಜು, ನಂಜುಂಡಸ್ವಾಮಿ ಹಾಜರಿದ್ದರು.

ವೆಂಕಟಯ್ಯನಛತ್ರ ಡೇರಿಗೆ 52 ಲಕ್ಷ ರೂ.



ವೆಂಕಟಯ್ಯನಛತ್ರ ಡೇರಿ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಚಾಮುಲ್ ನಿರ್ದೇಶಕ ಎಚ್.ಎಸ್.ಬಸವರಾಜು ಉದ್ಘಾಟಿಸಿದರು.

ಚಾಮರಾಜನಗರ, ಜು.7–ತಾಲೂಕಿನ ವೆಂಕಟಯ್ಯನಛತ್ರ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ 11 ಕೋಟಿ ರೂ.ಗೂ ಹೆಚ್ಚು ವಹಿವಾಟು ನಡೆದಿದ್ದು, 11,36,285 ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಎಚ್.ಎಸ್.ಬಸವರಾಜು ತಿಳಿಸಿದರು.

ಸಂಘದ ಸರ್ವಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿ ಅವರು, ಸಂಘ ಗುಣಮಟ್ಟದ ಹಾಲು ಸರಬರಾಜು ಮಾಡಿದ ಪರಿಣಾಮ ಹೆಚ್ಚಿನ ಲಾಭಾಂಶ ಬಂದಿದೆ. ಉತ್ಪಾದಕರಿಗೆ 5.20 ಲಕ್ಷ ರೂ. ಬೋನಸ್ ವಿತರಿಸಲಾಗಿದೆ. 5 ರೂ. ಪ್ರೋತ್ಸಾಹಧನ ಹಾಲು ಉತ್ಪಾದಕರ ಖಾತೆಗೆ ನೇರವಾಗಿ ಜಮಾವಾಗಿದ್ದು, 52 ಲಕ್ಷ ರೂ. ಬಂದಿದೆ ಎಂದರು.

ರಾಸುಗಳ ವಿಮೆ ಯೋಜನೆಯಡಿ ಅಕಾಲಿಕ ಮರಣ ಹೊಂದಿದ 28 ರಾಸುಗಳ ಮಾಲೀಕರಿಗೆ 10.80 ಲಕ್ಷ ರೂ. ಪರಿಹಾರ ನೀಡಲಾಗಿದೆ. ತಲಾ 20 ಸಾವಿರ ರೂ. ಸಬ್ಸಿಡಿ ದರದಲ್ಲಿ ಐವರು ರೈತರಿಗೆ ಹಾಲು ಕರೆಯುವ ಯಂತ್ರ ಖರೀದಿ. ಏಳು ರೈತರಿಗೆ ಮೇವು ಕಟಾವು ಯಂತ್ರಗಳಿಗೆ 1.33 ಲಕ್ಷ ರೂ. ಸಬ್ಸಿಡಿ ನೀಡಲಾಗಿದೆ. ಶೇ.95ರಷ್ಟು ಗುಣಮಟ್ಟ ಮತ್ತು ಫ್ಯಾಟ್ ಅಂಶವುಳ್ಳ ಹಾಲನ್ನು ಚಾಮುಲ್‌ಗೆ ಸರಬರಾಜು ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ನಿರ್ದೇಶಕ ಸದಾಶಿವಮೂರ್ತಿ ಮಾತನಾಡಿ, ಸಂಘದ ಅಭಿವೃದ್ಧಿಯಲ್ಲಿ ಸದಸ್ಯರು ಹಾಗೂ ಆಡಳಿತ ಮಂಡಳಿಯ ಪಾತ್ರ ಬಹಳ ಮುಖ್ಯ. ಮುಂದಿನ ದಿನಗಳಲ್ಲಿ ಗುಣಮಟ್ಟ ಮತ್ತು ಹಣಕಾಸು ವ್ಯವಹಾರದಲ್ಲಿ ಇನ್ನು ಹೆಚ್ಚಿನ ಪಾರದರ್ಶಕತೆ ತರಲು ಎಲ್ಲಾ ಡೇರಿಗಳಿಗೂ ಕಮಾನ್ ಸರ್ವಿಸ್ ಸಾಫ್ಟ್‌ವೇರ್ ಅಳವಡಿಸಿ, ಉನ್ನತೀಕರಿಸಲಾಗುತ್ತದೆ ಎಂದರು.

ಚಾಮುಲ್ ಸಹಾಯಕ ವ್ಯವಸ್ಥಾಪಕ ಡಾ.ಅಮರ್ ಮಾತನಾಡಿದರು. ಡೇರಿ ಕಾರ್ಯನಿರ್ವಾಹಕಾಧಿಕಾರಿ ಪುನೀತ್ ಸಂಘದ ವಾರ್ಷಿಕ ವರದಿ ಮಂಡಿಸಿದರು. ಉಪಾಧ್ಯಕ್ಷ ವಿ.ಪದ್ಮರಾಜ್, ಚಾಮುಲ್ ಸಹಾಯಕ ವಿಸ್ತಾರಣಾಧಿಕಾರಿ ಭಾಗ್ಯರಾಜ್, ನಿರ್ದೇಶಕರಾದ ಶಿವರಾಜು, ಸಂಪತ್‌ಕುಮಾರ್, ಎನ್.ಮಹದೇವಸ್ವಾಮಿ, ಮಹದೇವಸ್ವಾಮಿ, ಬಿ.ಎನ್.ನಾಗರಾಜು, ವಿ.ಬಿ.ಕೃಷ್ಣೇಗೌಡ, ಬಂಗಾರು, ರೇಣುಕಾ, ಜಯಮ್ಮ, ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಗಿರಿಮಲ್ಲು, ಸಿಬ್ಬಂದಿ ಮನು, ಮನೋಹರ, ಸುನಂದ, ಮನು ಹಾಜರಿದ್ದರು.

ಬೈಕ್‌ನಿಂದ ಬಿದ್ದು ಮಹಿಳೆ ಸಾವು

ಬೇಗೂರು, ಜು.7–ಬೈಕ್ ಹಿಂಬದಿ ಚಕ್ರಕ್ಕೆ ಸೀರೆ ಸೆರಗು ಸಿಕ್ಕಿಕೊಂಡ ಪರಿಣಾಮ ಮಹಿಳೆ ಬಿದ್ದು ಮೃತಪಟ್ಟಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಬೆಂಡಗಹಳ್ಳಿ ಗೇಟ್ ಸಮೀಪ ನಡೆದಿದೆ.



ಬೇಗೂರು ನಿವಾಸಿ ಮಲ್ಲರಾಜಮ್ಮ (65) ಮೃತ ಮಹಿಳೆ. ಈಕೆ ತನ್ನ ಮಗನೊಂದಿಗೆ ಕೆಬ್ಬೆಕಟ್ಟೆ ಶನಿದೇವರ ದೇವಸ್ಥಾನಕ್ಕೆ ಹೋಗಿ ವಾಪಸ್ ಬರುತ್ತಿದ್ದ ವೇಳೆ ಬೈಕ್ ಹಿಂಬದಿ ಚಕ್ರಕ್ಕೆ ಸೀರೆ ಸೆರಗು ಸಿಕ್ಕಿಕೊಂಡಿದೆ. ಇದರಿಂದ ಕೆಳಗೆ ಬಿದ್ದು ತಲೆಗೆ ತೀವ್ರ ಪೆಟ್ಟಾಗಿದೆ. ಕೂಡಲೇ ಬೇಗೂರು ಆಸ್ಪತ್ರೆಗೆ ರವಾನಿಸಿ ಪ್ರಥಮ ಚಿಕಿತ್ಸೆ ಕೊಡಿಸಿ, ಮೈಸೂರಿನ ಆಸ್ಪತ್ರೆಯೊಂದಕ್ಕೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಾ.ನಗರಕ್ಕೆ 100 ಕೋಟಿ ವಿಶೇಷ ಪ್ಯಾಕೇಜ್ ನೀಡಿ

ಚಾಮರಾಜನಗರ, ಜು.7–ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ಯೋಜನೆಯಡಿ ಚಾಮರಾಜನಗರ ನಗರಸಭೆಗೆ 100 ಕೋಟಿ ರೂ. ವಿಶೇಷ ಅನುದಾನ ನೀಡುವಂತೆ ಬಿಜೆಪಿ ಕಾರ್ಯಕರ್ತರು ಹಾಗೂ ನಗರಸಭೆ ಸದಸ್ಯರು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರಿಗೆ ಮನವಿ ಸಲ್ಲಿಸಿದರು.

ಚಾಮರಾಜನಗರಕ್ಕೆ ಆಗಮಿಸಿದ್ದ ಸಚಿವರನ್ನು ಭೇಟಿ ಮಾಡಿದ ನಗರಸಭೆ ಸದಸ್ಯರಾದ ಶಿವರಾಜು, ಮನೋಜ್ ಪಟೇಲ್, ಚಂದ್ರಶೇಖರ್, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ನಟರಾಜು, ಮುಖಂಡರಾದ ಎಸ್.ಬಾಲಸುಬ್ರಹ್ಮಣ್ಯ ಹಾಗೂ ಇತರರು ಮನವಿ ಸಲ್ಲಿಸಿ, ಗಡಿ ಜಿಲ್ಲಾ ಕೇಂದ್ರದ ಅಭಿವೃದ್ಧಿ ಹಾಗೂ ಮೂಲಸೌಲಭ್ಯ ಕಲ್ಪಿಸಲು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಮನವಿ ಮಾಡಿದರು.

ಈಗಾಗಲೇ ನಗರೋತ್ಥಾನ ಯೋಜನೆಯಡಿ ಬಿಡುಗಡೆಯಾಗಿರುವ ಕಾಮಗಾರಿಗಳು ಕುಂಠಿತವಾಗಿದ್ದು, ಪ್ರಾರಂಭವಾಗಿರುವ ಕಾಮಗಾರಿಗಳು ಕೂಡ ಕಳಪೆಯಾಗಿವೆ. ಇದರ ಬಗ್ಗೆ ಕೂಡಲೇ ಗಮನ ಹರಿಸಬೇಕು. ನಗರೋತ್ಥಾನ ಯೋಜನೆಯಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಲ್ಯಾಬ್ ಟ್ಯಾಪ್, ಮಹಿಳೆಯರಿಗೆ ಹೊಲಿಗೆ ಯಂತ್ರಗಳಿಗೆ ಅನುದಾನಗಳ ಟೆಂಡರ್ ಕರೆಯದೇ ವಿಳಂಬ ಮಾಡಲಾಗುತ್ತಿದೆ ಆದ್ದರಿಂದ ಅಧಿಕಾರಿಗಳಿಗೆ ಸೂಚನೆ ನೀಡಬೇಕು ಎಂದರು.



ಚಾಮರಾಜನಗರಕ್ಕೆ ವಿಶೇಷ ಅನುದಾನ ನೀಡುವಂತೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ ಅವರಿಗೆ ಬಿಜೆಪಿ ಕಾರ್ಯಕರ್ತರು ಮನವಿ ಸಲ್ಲಿಸಿದರು.

ಕೇರಳದ ವೈನಾಡಿನಲ್ಲಿ ಭಾರೀ ಮಳೆ ಹಿನ್ನೆಲೆ
ಕಬಿನಿ ಜಲಾಶಯ ಭರ್ತಿಗೆ 2 ಅಡಿ ಬಾಕಿ



ಕಬಿನಿ ಜಲಾಶಯದ ನೀರಿನ ಮಟ್ಟ

ಗರಿಷ್ಠ 2284 ಅಡಿ

ಇಂದಿನ ಮಟ್ಟ 2282 ಅಡಿ
ಒಳಹರಿವು 5000 ಕ್ಯೂಸೆಕ್
ಹೊರಹರಿವು 2ಸಾವಿರ ಕ್ಯೂಸೆಕ್

ಕಳೆದ ವರ್ಷ

ನೀರಿನ ಮಟ್ಟ 2260 ಅಡಿ
ಒಳಹರಿವು 16000 ಕ್ಯೂಸೆಕ್
ಹೊರಹರಿವು 500 ಕ್ಯೂಸೆಕ್

ಹೆಚ್.ಡಿ.ಕೋಟೆ, ಜು.7– ಕೇರಳದ ವೈನಾಡಿನಲ್ಲಿ ಭಾರೀ ಮಳೆ ಹಿನ್ನೆಲೆಯಲ್ಲಿ ತಾಲೂಕಿನ ಬೀಚನಹಳ್ಳಿ ಗ್ರಾಮದಲ್ಲಿರುವ ಕಬಿನಿ ಜಲಾಶಯಕ್ಕೆ ಅಪಾರ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಜಲಾಶಯ ಭರ್ತಿಗೆ ಕೇವಲ 2 ಅಡಿ ಬಾಕಿ ಇದೆ ಎಂದು ಕಬಿನಿ ಕಾರ್ಯಪಾಲಕ ಅಭಿಯಂತರ ಚಂದ್ರಶೇಖರ್ ತಿಳಿಸಿದರು.

ಕೇರಳದ ವೈನಾಡಿನಲ್ಲಿ ಭಾರೀ ಮಳೆ ಹಿನ್ನೆಲೆಯಲ್ಲಿ ಕಳೆದ ಒಂದು ತಿಂಗಳಿಂದ ಜಲಾಶಯಕ್ಕೆ ಒಳಹರಿವು ಬರುತ್ತಿದ್ದು, 2284 ಅಡಿ ಗರಿಷ್ಠ ಸಾಮರ್ಥ್ಯದ ಜಲಾಶಯದಲ್ಲಿ ಪ್ರಸ್ತುತ 2282 ಅಡಿ ನೀರು ಸಂಗ್ರಹವಾಗಿದೆ ಜಲಾಶಯ ಭರ್ತಿಗೆ ಇನ್ನು 2 ಅಡಿ ಬಾಕಿ ಇದ್ದು, ಪ್ರಸ್ತುತ 5 ಸಾವಿರ ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಕಬಿನಿ ಜಲಾಶಯ ಸದ್ಯದಲ್ಲೇ ಭರ್ತಿಯಾಗಲಿದ್ದು, ಒಳ ಹರಿವು ಜಾಸ್ತಿಯಾಗುವ ಸಾಧ್ಯತೆ ಇರುವುದರಿಂದ ಸುಭಾಷ್ ಕಬಿನಿ ಪವರ್ ಪ್ರಾಜೆಕ್ಟ್ ಮೂಲಕ 2 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ. ಮುಖ್ಯಮಂತ್ರಿಗಳು ಕಬಿನಿ ಜಲಾಶಯಕ್ಕೆ ಬಾಗಿನ ಅರ್ಪಿಸುವ ದಿನಾಂಕ ಸದ್ಯದಲ್ಲೇ ನಿಗದಿಯಾಗುವ ಸಾಧ್ಯತೆ ಇರುವುದರಿಂದ ಜಲಾಶಯದ ಭದ್ರತೆಗಾಗಿ ಎಲ್ಲಾ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ ಎಂದರು.

ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 2260 ಅಡಿ ನೀರು ಸಂಗ್ರಹವಾಗಿತ್ತು. ಜಲಾಶಯಕ್ಕೆ 16000 ಕ್ಯೂಸೆಕ್ ಒಳಹರಿವಿದ್ದು, 500 ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿತ್ತು ಎಂದರು.

ಬಾಗಿನ ಅರ್ಪಿಸಲು ದಿನಾಂಕ ನಿಗದಿ: ಶಾಸಕ ಅನಿಲ್ ಮಾತನಾಡಿ, ಕಬಿನಿ ಜಲಾಶಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಾಗಿನ ಅರ್ಪಿಸಲು ಸದ್ಯದಲ್ಲೇ ದಿನಾಂಕ ನಿಗದಿಪಡಿಸಲಾಗುವುದು ಎಂದು ತಿಳಿಸಿದರು. ಕಬಿನಿ ಜಲಾಶಯ ಭರ್ತಿಯಾಗಲು ಎರಡು ಅಡಿ ಬಾಕಿ ಇದ್ದು, ಬಾಗಿನ ಅರ್ಪಿಸಲು ಜು.11ಕ್ಕೆ ದಿನಾಂಕ ನಿಗದಿಯಾಗಿತ್ತು. ಆದರೆ ಕಬಿನಿ ಜಲಾಶಯದ ಬಳಿ ಬಟಾನಿಕಲ್ ಪಾರ್ಕ್ ಹಾಗೂ ಜಲಾಶಯಕ್ಕೆ 50 ವರ್ಷ ತುಂಬಿದ ಹಿನ್ನೆಲೆಯಲ್ಲಿ ಕಬಿನಿ ಉತ್ಸವ, ಜಲಾಶಯದ ತಳ ಭಾಗದಲ್ಲಿ ಮುಳುಗಡೆ ಯಾಗಿರುವ ಗ್ರಾಮಗಳಿಗೆ ಮೂಲಸೌಕರ್ಯ ಒದಗಿಸುವ ಕಾರ್ಯಕ್ರಮಗಳಿಗೆ ಚಾಲನೆ ನೀಡುವ ಉದ್ದೇಶದಿಂದ ಇದೇ ತಿಂಗಳು ಜಲಾಶಯಕ್ಕೆ ಬಾಗಿನ ಅರ್ಪಿಸಲು ದಿನಾಂಕ ನಿಗದಿ ಮಾಡಲಾಗುವುದು ಎಂದರು.

ಉನ್ನತ ಶಿಕ್ಷಣ ಪಡೆದು ಸಮಾಜಕ್ಕೆ ಆಸ್ತಿಯಾಗಿ
ವಿದ್ಯಾರ್ಥಿಗಳಿಗೆ ತಾಲೂಕು ನಾಯಕರ ಸಂಘದ ಕಾರ್ಯದರ್ಶಿ ಜೆ.ಶಿವಸ್ವಾಮಿ ಕರೆ



ತಿ.ನರಸೀಪುರ ತಾಲೂಕು ನಾಯಕರ ಸಂಘದ ಆವರಣದಲ್ಲಿ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ನಿವೃತ್ತ ಮುಖ್ಯ ಲೆಕ್ಕಾಧಿಕಾರಿ ಮಾಲಂಗಿ ಜೆ.ಶಿವಸ್ವಾಮಿ ಉದ್ಘಾಟಿಸಿದರು.

ತಿ.ನರಸೀಪುರ, ಜು.7– ಸಂಘ ಸಂಸ್ಥೆಗಳ ಪುರಸ್ಕಾರಕ್ಕೆ ಭಾಜನರಾಗುವ ಪ್ರತಿಭಾನ್ವಿತ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆದು ಉತ್ತಮ ಭವಿಷ್ಯ ರೂಪಿಸಿಕೊಂಡು ಹುಟ್ಟಿದ ಸಮುದಾಯ ಮತ್ತು ಬದುಕುವ ಸಮಾಜಕ್ಕೂ ಆಸ್ತಿಯಾಗಬೇಕು ಎಂದು ತಾಲೂಕು ನಾಯಕರ ಸಂಘದ ಕಾರ್ಯದರ್ಶಿ ಹಾಗೂ ನಿವೃತ್ತ ಮುಖ್ಯ ಲೆಕ್ಕಾಧಿಕಾರಿ ಮಾಲಂಗಿ ಜೆ.ಶಿವಸ್ವಾಮಿ ಕರೆ ನೀಡಿದರು.

ಪಟ್ಟಣದ ಶ್ರೀರಾಂಪುರದಲ್ಲಿರುವ ತಾಲೂಕು ನಾಯಕರ ಸಂಘದ ಆವರಣದಲ್ಲಿ ಭಾನುವಾರ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ನಾಯಕ ಸಮುದಾಯದ ವಿದ್ಯಾರ್ಥಿಗಳಿಗೆ ನಾಯಕರ ಸಂಘ ಹಾಗೂ ನಾಯಕ ನೌಕರರ ಸಂಘದಿಂದ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬಡತನ ಮತ್ತು ಮಧ್ಯಮ ವರ್ಗದ ಹಿನ್ನೆಲೆಯಿಂದಲೇ ಬೆಳೆದು ಬರುವ ನಾಯಕ ಸಮುದಾಯದ ಪ್ರತಿಭಾನ್ವಿತ ಮಕ್ಕಳು ಸಮುದಾಯದ ಅಭಿವೃದ್ಧಿಗೂ ಆದ್ಯತೆ ಕೊಟ್ಟು ಸಮಾಜಕ್ಕೂ ಕೊಡುಗೆಯಾಗಬೇಕು ಎಂದು ಕಿವಿಮಾತು ಹೇಳಿದರು.

ನಾಯಕ ನೌಕರರ ಸಂಘದ ಅಧ್ಯಕ್ಷ ಆರ್.ರಾಜು, ಮಾತನಾಡಿ, ಶೈಕ್ಷಣಿಕ ವ್ಯವಸ್ಥೆಯಲ್ಲಿ ಪೈಪೋಟಿ ಹೆಚ್ಚುತ್ತಿರುವುದರಿಂದ ಪ್ರತಿಯೊಂದು ಸರ್ಕಾರಿ ಮತ್ತು ಖಾಸಗಿ ಉದ್ಯೋಗ ಕ್ಷೇತ್ರವೂ ಸ್ಪರ್ಧಾತ್ಮಕವಾಗುತ್ತಿವೆ. ಹಾಗಾಗಿ ಸಮುದಾಯದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಪೋಷಕರು ನೀಡಬೇಕು. ವೈಜ್ಞಾನಿಕ ವಿಚಾರ ಆಧಾರಿತ ಕಲಿಕೆಗೂ ಮಕ್ಕಳು ಗಮನ ನೀಡಬೇಕು. ಸರ್ಕಾರ ಮತ್ತು ಸಂಘ ಸಂಸ್ಥೆಗಳು ನೀಡುವ ಶೈಕ್ಷಣಿಕ ನೆರವನ್ನು ಪಡೆದು ಕಲಿಕೆಯನ್ನು ಪೂರ್ಣಗೊಳಿಸಬೇಕು ಎಂದರು.

ತಾಲೂಕು ನಾಯಕರ ಸಂಘದ ಉಪಾಧ್ಯಕ್ಷ ಆಲಗೂಡು ನಾಗರಾಜು ಮಾತನಾಡಿ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡುವ ಮಾದರಿಯಲ್ಲಿಯೇ ಕಳೆದ ಶೈಕ್ಷಣಿಕ ಸಾಲಿನಲ್ಲಿ ದ್ವಿತೀಯ ಪಿಯುಸಿಯಲ್ಲಿ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳನ್ನು ಮರು ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಅಗತ್ಯವಿರುವ ಶಿಕ್ಷಣ ತರಬೇತಿಗಳನ್ನು ಕೊಟ್ಟು ಅವರನ್ನು ಪ್ರೋತ್ಸಾಹಿಸೋಣ. ಈಗಿನ ಶೈಕ್ಷಣಿಕ ವರ್ಷದಿಂದಲೇ ತಾಲೂಕಿನಲ್ಲಿ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳನ್ನು ಗುರುತಿಸಿ ತಾಲೂಕು ಮಟ್ಟದಲ್ಲಿ ಶಿಕ್ಷಣದ ನೆರವನ್ನ ಕಲ್ಪಿಸಿ, ಕಲಿಕೆಯಿಂದ ವಂಚಿತರಾಗುವುದನ್ನು ನಾವೆಲ್ಲರೂ ತಡೆಗಟ್ಟೋಣ ಎಂಬ ಅಮೂಲ್ಯ ಸಲಹೆ ನೀಡಿದರು.

ಜಿಪಂ ಮಾಜಿ ಸದಸ್ಯ ಮಂಜುನಾಥನ್ ಸೇರಿದಂತೆ ವಾಲ್ಮೀಕಿ ಶಿಕ್ಷಣ ಸಂಸ್ಥೆ ಗೌರವಾಧ್ಯಕ್ಷ ಡಾ.ಎಂ.ಮಹದೇವಯ್ಯ, ನಾಯಕ ಸಂಘದ ಅಧ್ಯಕ್ಷ ಚಿಕ್ಕಯ್ಯ ಮಾತನಾಡಿದರು. ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ 22 ಮತ್ತು ದ್ವಿತೀಯ ಪಿಯುಸಿಯಲ್ಲಿ ಉತ್ತೀರ್ಣರಾದ 31 ಪ್ರತಿಭಾನ್ವಿತ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕಾರ್ಯದರ್ಶಿ ಶಾಂತರಾಜು, ಖಜಾಂಚಿ ಪಿ.ಶಶಿಧರ, ನಿರ್ದೇಶಕರಾದ ಮರಪ್ಪಾಜಿ, ಗೋವಿಂದರಾಜು, ಬಸವರಾಜು, ಮೂಗೂರು ಮರಿಸ್ವಾಮಿ, ಹೆಮ್ಮಿಗೆ ಹೊನ್ನಯ್ಯ, ನಾಗರಾಜು, ಶಾಂತರಾಜು ಹಾಗೂ ಇನ್ನಿತರರು ಹಾಜರಿದ್ದರು.

ಟಿಪ್ಪರ್ ಹರಿದು ಬೈಕ್ ಸವಾರ ಸಾವು

ನಂಜನಗೂಡು, ಜು.7– ಟಿಪ್ಪರ್ ಹರಿದು ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಗರದ ಹುಲ್ಲಹಳ್ಳಿ ರಸ್ತೆಯ ಮಹದೇಶ್ವರ ಲೇಔಟ್ ಬಳಿ ಜರುಗಿದೆ. ತಾಲೂಕಿನ ಹೆಜ್ಜಿಗೆ ಗ್ರಾಮದ ನಿವಾಸಿ ಚಂದ್ರಶೇಖರ ಮೂರ್ತಿ (45) ಸಾವನ್ನಪ್ಪಿದವರು.

ವಿವರ: ಐಸ್‌ಕ್ರೀಮ್ ಕಾರ್ಖಾನೆ ನಡೆಸುತ್ತಿದ್ದ ಚಂದ್ರಶೇಖರಮೂರ್ತಿ ತಮ್ಮ ಹೋಂಡಾ ಆಕ್ಟಿವಾ ಸ್ಕೂಟರ್‌ನಲ್ಲಿ ಐಸ್‌ಕ್ರೀಂ ತೆಗೆದುಕೊಂಡು ಹುಲ್ಲಹಳ್ಳಿ ರಸ್ತೆಗೆ ಬರುತ್ತಿದ್ದ ವೇಳೆ ಜೆಸಿಬಿ ಹತ್ತಿಸಿಕೊಳ್ಳಲೆಂದು ಟಿಪ್ಪರ್ ಹಿಂದಕ್ಕೆ ಚಲಿಸುತ್ತಿದ್ದನ್ನು ಗಮನಿಸಿದ ಚಂದ್ರಶೇಖರ್ ತಮ್ಮ ಬೈಕ್ ಅನ್ನು ನಿಲ್ಲಿಸಿಕೊಂಡು ಹಾರ್ನ್ ಹೊಡೆದರೂ ಸಹ ಟಿಪ್ಪರ್ ಚಾಲಕ ನಿರ್ಲಕ್ಷ್ಯದಿಂದ ಹಿಂದಕ್ಕೆ ಚಾಲನೆ ಮಾಡಿದ ಪರಿಣಾಮ ಚಂದ್ರಶೇಖರ ಮೂರ್ತಿ ಮೇಲೆ ಟಿಪ್ಪರ್ ಚಕ್ರ ಹರಿದು ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಘಟನೆ ಬಳಿಕ ಲಾರಿ ಚಾಲಕ ನಾಪತ್ತೆಯಾಗಿದ್ದಾನೆ ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಸಂಚಾರಿ ಪೊಲೀಸ್ ಠಾಣೆ ಎಸ್‌ಐ ಸಿದ್ದರಾಜು, ಸಿಬ್ಬಂದಿಗಳಾದ ಕೇಶವಮೂರ್ತಿ ಭೇಟಿ ನೀಡಿ ಸ್ಥಳ ಪರಿಶೀಲಿಸಿ, ಶವವನ್ನು ಮರಣೋತ್ತರ ಪರೀಕ್ಷೆಗಾಗಿ ನಗರದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದರು. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಸಂಸದ ಸುನೀಲ್ ಬೋಸ್‌ಗೆ ಸನ್ಮಾನ



ಚಾಮರಾಜನಗರ ನೂತನ ಸಂಸದ ಸುನೀಲ್ ಬೋಸ್ ಅವರನ್ನ ಸೋಸಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ. ಪುರಶಿವಮೂರ್ತಿ ಸನ್ಮಾನಿಸಿದರು. ಈ ವೇಳೆ ಉಕ್ಕಲಗೆರೆ ಗ್ರಾಪಂ ಮಾಜಿ ಸದಸ್ಯ ಎಂ.ರಾಜು ಇತರರಿದ್ದಾರೆ.

ಅಂಬೇಡ್ಕರ್ ದೇಶದ ಬಡಜನರ ಆಸ್ತಿ: ಎಸ್.ಮಹದೇವಯ್ಯ



ಅಂಬೇಡ್ಕರ್ ಜಯಂತಿಯಲ್ಲಿ ಎಸ್.ಮಹದೇವಯ್ಯ ಮಾತನಾಡಿದರು.

ಮಲ್ಲುಂಡಿ, ಜು.7– ಡಾ.ಬಿ.ಆರ್. ಅಂಬೇಡ್ಕರ್ ದೇಶದ ಬಡವರ ಆಸ್ತಿ ಎಂದು ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ ತಿಳಿಸಿದರು.

ಗ್ರಾಮದಲ್ಲಿ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಅವರ 133ನೇ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಪ್ರತಿಯೊಬ್ಬ ಪ್ರಜೆಗೂ ಕಾನೂನುಗಳ ಅರಿವು ಅಗತ್ಯ ಅವುಗಳ ಬಗ್ಗೆ ಅರಿವು ಮೂಡಿಸುವ ಜವಾಬ್ದಾರಿ ಯುವ ಪೀಳಿಗೆ ಮೇಲಿದೆ. ದಲಿತರು, ಹಿಂದುಳಿದ ವರ್ಗಗಳು ಸೇರಿದಂತೆ ವಿವಿಧ ಧರ್ಮಗಳ ವ್ಯಕ್ತಿಗಳಿಗೆ ರಕ್ಷಣೆ ನೀಡುವ ಕಾನೂನನ್ನು ಸಂವಿಧಾನದಲ್ಲಿ ಅಳವಡಿಸಿರುವುದರಿಂದ ದೇಶದ ಎಲ್ಲಾ ಜನತೆ ಉತ್ತಮ ಜೀವನ ನಡೆಸಲು ಅನುಕೂಲವಾಗಿದೆ. ಸಮಾನತೆಯ ಸಮ ಸಮಾಜ ನಿರ್ಮಾಣ ಮಾಡಲು ಹಾಗೂ ದೇಶದಲ್ಲಿರುವ ಅಸ್ಪೃಶ್ಯತೆ ಹೋಗಲಾಡಿಸಲು ಹೋರಾಟ ಮಾಡಿದ ಮಹಾನ್ ವ್ಯಕ್ತಿ ಅಂಬೇಡ್ಕರ್ ಎಂದರು.

ಕೋಲಾರದ ದಲಿತ ಹೋರಾಟಗಾರ ಸಂದೇಶ್ ಮಾತನಾಡಿ, ಡಾ.ಅಂಬೇಡ್ಕರ್ ಅವರು ಸಂವಿಧಾನ ರಚನೆ ಮಾಡದಿದ್ದರೆ ನಾವು ಈ ಮಟ್ಟಕ್ಕೆ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ. ಡಾ.ಅಂಬೇಡ್ಕರ್ ಅವರು ಕೇವಲ ಒಂದೇ ಜಾತಿಗೆ ಸೀಮಿತರಲ್ಲ. ಅವರು ಎಲ್ಲಾ ಜನಾಂಗದ ರಕ್ಷಣೆಗಾಗಿ ಹೋರಾಡಿದ ಒಬ್ಬ ಮಹಾನ್ ವ್ಯಕ್ತಿ. ಅಂತಹ ವ್ಯಕ್ತಿಯನ್ನು ನಿತ್ಯ ನೆನೆಯುವುದು ನಮ್ಮೆಲ್ಲರ ಕರ್ತವ್ಯ ಅದೇ ರೀತಿ ಪ್ರತಿಯೊಬ್ಬ ಯುವಕರು ಡಾ.ಅಂಬೇಡ್ಕರ್ ಅವರ ತತ್ವ, ಸಿದ್ಧಾಂತವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಇದೇ ವೇಳೆ ಡಾ.ಅಂಬೇಡ್ಕರ್ ಅವರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿಟ್ಟು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ತಾಪಂ ಮಾಜಿ ಸದಸ್ಯ ಎಸ್. ಬಸವರಾಜ್, ಸಾಹಿತಿ ಮಲ್ಲುಂಡಿ ಮಹದೇವ ಸ್ವಾಮಿ, ದಸಂಸ ಮುಖಂಡ ಕೃಷ್ಣ, ಎಂ. ಪುಟ್ಟಸ್ವಾಮಿ, ಪುಟ್ಟಬುದ್ಧಿ, ಗ್ರಾಪಂ ಅಧ್ಯಕ್ಷೆ ದೇವಮ್ಮ, ಸದಸ್ಯ ಪಾಪ, ಶಿವ ಕುಮಾರ್, ಪುಟ್ಟವೀರಪ್ಪ, ವೀರಭದ್ರಪ್ಪ, ಗ್ರಾಪಂ ಮಾಜಿ ಸದಸ್ಯ ಎಂ.ಎನ್.ಸತೀಶ್ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಹುಲಿ ಸೆರೆ ಹಿಡಿಯಲು ಅರಣ್ಯ ಇಲಾಖೆ ವಿಫಲ: ಆರೋಪ



ಅರಣ್ಯ ಇಲಾಖೆ ಬೋನ್ ತಂದಿಟ್ಟಿರುವುದು

ಸರಗೂರು, ಜು.7– ತಾಲೂಕಿನ ತೆರಣಿ ಮುಂಟಿ ಗ್ರಾಮದಲ್ಲಿ ಹುಲಿ ಹಾವಳಿ ಹೆಚ್ಚಾಗಿದ್ದರೂ, ಅರಣ್ಯ ಇಲಾಖೆ ಹುಲಿ ಸೆರೆ ಹಿಡಿಯುವಲ್ಲಿ ವಿಫಲವಾಗಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಗ್ರಾಮದಲ್ಲಿ ಹುಲಿ ಕಾಣಿಸಿಕೊಂಡಿದ್ದು, ಸುತ್ತಮುತ್ತಲಿನ ಗ್ರಾಮಸ್ಥರು ಜಮೀನುಗಳಿಗೆ ತೆರಳಲು ಭಯಭೀತರಾಗಿದ್ದಾರೆ. ಇತ್ತೀಚೆಗೆ ಬೀರಂಬಳ್ಳಿ ಬಸಪ್ಪ ಅವರ ಹಸುವನ್ನು ಹುಲಿ ಎಳೆದೊಯ್ದು ರವಿರಾಮೇಶ್ವರ ದೇವಸ್ಥಾನದ ಮುಂಭಾಗದ ಕಂಬಿನ ಗದ್ದೆಯಲ್ಲಿ ತಿಂದು ಹಾಕಿದೆ. ಇದನ್ನು ಕಂಡ ನಿಂಗರಾಜಚಾರಿ ಅವರು ಭಯಗೊಂಡು ಅಲ್ಲಿಂದ ಓಡಿ ಬಂದಿದ್ದಾರೆ ಗ್ರಾಮದಲ್ಲಿ ಆಗ್ಗಿಂದಾಗೆ ಹುಲಿ ದಾಳಿ ನಡೆಸಿ ಸಾಕುಪ್ರಾಣಿಗಳನ್ನು ತಿಂದು ಹಾಕುತ್ತಿದೆ. ಹೀಗಾಗಿ ಹುಲಿ ಸೆರೆ ಹಿಡಿಯುವಂತೆ ಗ್ರಾಮಸ್ಥರು ಸಲ್ಲಿಸಿದ ಮನವಿ ಮೇರೆಗೆ ಗ್ರಾಮಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ಬೋನು ತಂದಿಟ್ಟರಾದರೂ, ಇದುವರೆಗೆ ಹುಲಿ ಸೆರೆಗೆ ಮುಂದಾಗಿಲ್ಲ ಎಂದು ಆರೋಪಿಸಿದರು.

ಶ್ರೀರವಿರಾಮೇಶ್ವರ ದೇವಸ್ಥಾನದ ಪ್ರಧಾನ ಅರ್ಚಕ ಕಿತ್ತೂರು ಭಾಸ್ಕರ್ ಮಾತನಾಡಿ, ಹುಲಿ ಶ್ರೀರವಿರಾಮೇಶ್ವರ ದೇವಸ್ಥಾನಕ್ಕೆ ವಿದೇಶಿಯರು ಹಾಗೂ ಅಂತಾರಾಜ್ಯ ಭಕ್ತರು ಆಗಮಿಸುತ್ತಾರೆ. ಆದರೆ ಹುಲಿ ಕಾಣಿಸಿಕೊಂಡಿರುವುದರಿಂದ ಸ್ಥಳೀಯ ಭಕ್ತರು ದೇವಾಲಯಕ್ಕೆ ಬರಲು ಹೆದರುತ್ತಿದ್ದಾರೆ. ಹೀಗಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಹುಲಿ ಸೆರೆಗೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ತಾಯಿ ಹೆಸರಲ್ಲಿ ಗಿಡ ನೆಡೋಣ: ಎಸ್.ಡಿ.ರಾಜೇಶ್

ಬನ್ನೂರಿನ ಟಿಟಿಐ ಕಾಲೇಜು ಆವರಣದಲ್ಲಿ ವನ ಮಹೋತ್ಸವ ಕಾರ್ಯಕ್ರಮ ಆಚರಿಸಲಾಯಿತು.



ಬನ್ನೂರು, ಜು.7– ಅರಣ್ಯ ಬೆಳೆಸಿ, ನಾಡನ್ನು ಉಳಿಸುವಂತಹ ನಿಟ್ಟಿನಲ್ಲಿ ನಾವೆಲ್ಲರೂ ನಮ್ಮ ತಾಯಿ ಹೆಸರಿನಲ್ಲಿ ಗಿಡ ನೆಟ್ಟು ಪೋಷಣೆ ಮಾಡುವ ಮೂಲಕ ತಾಯಿಗೊಂದು ಮರ ಹೆಸರಿನಲ್ಲಿ ವನ ಮಹೋತ್ಸವ ಮಾಡೋಣ ಎಂದು ಸಾಮಾಜಿಕ ವಲಯ ಅರಣ್ಯಾಧಿಕಾರಿ ಎಸ್.ಡಿ ರಾಜೇಶ್ ತಿಳಿಸಿದರು.

ಪಟ್ಟಣದ ಟಿಟಿಐ ಕಾಲೇಜು ಆವರಣದಲ್ಲಿ 'ತಾಯಿಗೊಂದು ಮರ' ಶೀರ್ಷಿಕೆಯಡಿ ಗಿಡಕ್ಕೆ ನೀರು ಹಾಕುವ ಮೂಲಕ ವನ ಮಹೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡದ ಅವರು, ಅಭಿವೃದ್ಧಿ ಹೆಸರಿನಲ್ಲಿ ಅರಣ್ಯ ನಾಶದಿಂದ ಇಂದು ವಾತವರಣದಲ್ಲಿ ಗಣನೀಯ ಬದಲಾವಣೆಯಾಗಿದ್ದು, ಪರಿಸ್ಥಿತಿ ಹೀಗೆ ಮುಂದುವರೆದರೆ ಅದರಿಂದ ಮನುಕುಲ ಸೇರಿದಂತೆ ಇತರ ಪ್ರಾಣಿ ಪಕ್ಷಿ, ಜೀವಜಂತುಗಳ ನಾಶ ಕಟ್ಟಿಟ್ಟ ಬುತ್ತಿ ಎಂದು ತಿಳಿಸಿದರು.

ಈಗಾಗಲೇ ಅರಣ್ಯ ನಾಶದಿಂದ ಪ್ರಪಂಚದ ಎಷ್ಟೋ ದೇಶಗಳು ನಾಶವಾಗುತ್ತಿದ್ದು, ಮಾನವ ಜೀವನ ಅಳಿವಿನ ಅಂಚಿಗೆ ತಲುಪಿದೆ. ಹೀಗಾಗಿ ಪ್ರತಿ ಜೀವಿಗೂ ಶುದ್ಧ ಗಾಳಿ, ನೀರು, ಉತ್ತಮ ಪರಿಸರ ಮತ್ತು ಮುಂದಿನ ಪೀಳಿಗೆಗಾಗಿ ಪ್ರತಿಯೊಬ್ಬರೂ ವನ ಸಂರಕ್ಷಣೆ ಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಖಾಲಿ ಜಾಗದಲ್ಲಿ ಗಿಡನೆಟ್ಟು ಪೋಷಣೆ ಮಾಡಬೇಕಿದೆ. ಈ ಕಾರ್ಯ ವಿದ್ಯಾರ್ಥಿಗಳಿಂದ ಮಾತ್ರ ಸಾಧ್ಯ ಎಂಬುದನ್ನು ಅರಿತು ಕಾರ್ಯಕ್ರಮವನ್ನು ಶಾಲಾ ಕಾಲೇಜಿನಲ್ಲಿ ಹಮ್ಮಿಕೊಳ್ಳುವ ಮೂಲಕ ಅರಿವು ಮೂಡಿಸಲಾಗುತ್ತಿದೆ ಎಂದರು. ಪ್ರತಿಯೊಬ್ಬರೂ ಅವರ ತಾಯಿಯ ಹೆಸರಲ್ಲಿ ಗಿಡ ನೆಟ್ಟು ಬೆಳಸಿ ಪೋಷಣೆ ಮಾಡಿದರೆ, ಪ್ರಕೃತಿಯಂತ ತಾಯಿಯು ಪ್ರಸನ್ನಳಾಗುತ್ತಾಳೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಉಪವಲಯ ಅರಣ್ಯಾಧಿಕಾರಿ ವಿನಯ್, ಮಹದೇವ ಸ್ವಾಮಿ, ಉಪನ್ಯಾಸಕರಾದ ಕೆಂಚಪ್ಪ, ಪ್ರಸನ್ನ, ವಿಜಯ, ರಮೇಶ್, ತೇಜೋಮೂರ್ತಿ ಸೇರಿದಂತೆ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಹುಣಸೂರಲ್ಲಿ ಸವಾರರಿಗೆ ಹೆಲ್ಮೆಟ್ ಧರಿಸುವಂತೆ ಜಾಗೃತಿ



ಹುಣಸೂರಲ್ಲಿ ವಾಹನ ಸವಾರರಿಗೆ ಹೆಲ್ಮೆಟ್ ಧರಿಸುವಂತೆ ಜಾಗೃತಿ ಮೂಡಿಸಲಾಯಿತು

ಹುಣಸೂರು, ಜು.7– ನಗರ ಮತ್ತು ತಾಲೂಕಿನ ಸಾರ್ವಜನಿಕರು ಹೆಲ್ಮೆಟ್ ಧರಿಸಿ ಬೈಕ್ ಚಾಲನೆ ಮಾಡುವಂತೆ ಡಿವೈಎಸ್ಪಿ ಗೋಪಾಲಕೃಷ್ಣ ಮನವಿ ಮಾಡಿದರು.

ನಗರದ ಸಂವಿಧಾನ ವೃತ್ತದಲ್ಲಿ ಹುಣಸೂರು ರೋಟರಿ ಸಂಸ್ಥೆ ಹಾಗೂ ನಗರದ ಪೊಲೀಸ್ ಠಾಣೆ ಸಂಯುಕ್ತಾಶ್ರಯದಲ್ಲಿ ನಡೆದ ಹೆಲ್ಮೆಟ್ ಧರಿಸಿ ಜಾಗೃತಿ ಕಾರ್ಯಕ್ರಮದಲ್ಲಿ ಹೆಲ್ಮೆಟ್ ಧರಿಸದೆ ಚಾಲನೆ ಮಾಡುತ್ತಿದ್ದ ಬೈಕ್ ಸವಾರರಿಗೆ ಗುಲಾಬಿ ಹೂ ನೀಡಿ ಮಾತನಾಡಿದ ಅವರು, ರೋಟರಿ ಸಂಸ್ಥೆ ನಮ್ಮೊಂದಿಗೆ ಕೈ ಜೋಡಿಸಿ ಜನತೆಗೆ ಜಾಗೃತಿ ಮೂಡಿಸಲು ಮುಂದಾಗಿರುವುದು ಶ್ಲಾಘನೀಯ ಎಂದರು.

ನಗರದ ಕಲ್ಪತರು ವೃತ್ತದಲ್ಲಿ ಐಟಿಎಂಎಸ್ ತಂತ್ರಜ್ಞಾನ ಯಂತ್ರ ಅಳವಡಿಸಿದ್ದು, ನೀವು ಸಂಚರಿಸುವಾಗ ಹೆಲ್ಮೆಟ್ ಧರಿಸದಿದ್ದರೆ ಅದು ನಿಮ್ಮ ವಾಹನವನ್ನು ಸೆರೆ ಹಿಡಿಯುವ ಮೂಲಕ ನಿಮ್ಮ ಮನೆಗೆ ನೋಟಿಸ್ ಬರಲಿದೆ. ನೀವು ದಿನಕ್ಕೆ ಎಷ್ಟು ಬಾರಿ ಸಂಚಾರ ಮಾಡುತ್ತೀರೊ ಅಷ್ಟು ಬಾರಿಯೂ ದಂಡ ಕಟ್ಟಬೇಕಾಗುತ್ತದೆ ಎಂದರು.

ವಾಹನ ಚಾಲನೆ ಮಾಡುವ ವೇಳೆ ನಿಯಮ ಪಾಲಿಸಿ ಕಡ್ಡಾಯವಾಗಿ ಹೆಲ್ಮೆಟ್ ಧರಿಸುವ ಮೂಲಕ ನಿಮ್ಮ ಪ್ರಾಣ ಉಳಿಸಿಕೊಳ್ಳಿ. ಕಾರು ಚಾಲನೆ ಮಾಡುವಾಗ ಬೆಲ್ಟ್ ತಪ್ಪದೆ ಧರಿಸಿ. ಹಾಗೆಯೇ ವೀಲ್ಲಿಂಗ್, ಅಪ್ರಾಪ್ತ ಮಕ್ಕಳು ವಾಹನ ಚಾಲನೆ, ಮೊಬೈಲ್ ಬಳಕೆ ಇವುಗಳು ಕಾನೂನು ವಿರುದ್ಧವಾಗಿದ್ದು ಅಂತವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದರು.

ರೋಟರಿ ಸಂಸ್ಥೆ ಅಧ್ಯಕ್ಷ ಡಾ.ಪ್ರಸನ್ನ ಕೆ.ಪಿ.ಮಾತನಾಡಿ, ನಗರದ ಕಲ್ಪತರು ವೃತ್ತ ಸೇರಿದಂತೆ ಹಲವು ಕಡೆ ಸಿಸಿ ಕ್ಯಾಮರಾ ಅಳವಡಿಸಿದ್ದು, ಪ್ರತಿಯೊಬ್ಬರೂ ಹೆಲ್ಮೆಟ್ ಧರಿಸಿ ಚಾಲನೆ ಮಾಡುವಂತೆ ಸಾರ್ವಜನಿಕರಿಗೆ ತಿಳಿ ಹೇಳಿದರು.

ದೇವಾಲಯ ಆವರಣ ಸ್ವಚ್ಛತೆ



ಆಷಾಢ ಹಿನ್ನೆಲೆಯಲ್ಲಿ ಬನ್ನೂರಿನ ಆನಂದವಲ್ಲಿ ಹನುಮಂತೇಶ್ವರ ದೇವಾಲಯದ ಆವರಣವನ್ನು ಪೌರ ಕಾರ್ಮಿಕರು ಸ್ವಚ್ಛಗೊಳಿಸಿದರು. ಅರ್ಚಕ ಮಂಜುನಾಥ ಪ್ರಭು, ಮುಖಂಡ ಬಾಲರಾಜ್ ಸೇರಿದಂತೆ ಸಿಬ್ಬಂದಿ ಇದ್ದರು.

ಆಸ್ಪತ್ರೆ ಕಾಮಗಾರಿಗೆ 9 ಕೋಟಿ ಹೆಚ್ಚುವರಿ ಅನುದಾನ ಬಿಡುಗಡೆ
ಆರೋಗ್ಯ ಸಚಿವರಿಗೆ ಮಾಜಿ ಶಾಸಕರಿಂದ ಕೃತಜ್ಞತೆ ಸಲ್ಲಿಕೆ



ಹುಣಸೂರು, ಜು.7– ನಗರದ ಡಿ.ದೇವರಾಜ ಅರಸು ನೂತನ ಆಸ್ಪತ್ರೆ ಕಟ್ಟಡ ಕಾಮಗಾರಿಗೆ 9 ಕೋಟಿ ರೂ. ಹೆಚ್ಚುವರಿ ಅನುದಾನ ಮಂಜೂರಾಗಿದ್ದು, ಅನುದಾನ ಬಿಡುಗಡೆಗೆ ಸಹಕರಿಸಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಕೃತಜ್ಞತೆ ಸಲ್ಲಿಸಿದ್ದಾರೆ.

ಕಳೆದ 14ನೇ ವಿಧಾನಸಭೆ ಅವಧಿಯಲ್ಲಿ ಡಿ.ದೇವರಾಜ ಅರಸು ಶತಮಾನೋತ್ಸವ ಅಂಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಾಗೂ ಅಂದಿನ ಆರೋಗ್ಯ ಸಚಿವ ರಮೇಶ್ ಕುಮಾರ್ ಸಹಕಾರದಿಂದ ಹುಣಸೂರಿಗೆ ಸುಸಜ್ಜಿತ 100 ಹಾಸಿಗೆ ಸಾಮರ್ಥ್ಯವುಳ್ಳ ಆಸ್ಪತ್ರೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಯಿತು. ಈಗ ಕಟ್ಟಡ ಸಂಪೂರ್ಣಗೊಂಡಿದ್ದು, ಆಸ್ಪತ್ರೆಯ ಉಪಕರಣ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸಲು 9 ಕೋಟಿ ಹೆಚ್ಚುವರಿ ಅನುದಾನ ಅವಶ್ಯಕತೆ ಇದೆ ಎಂದು 15ನೇ ವಿಧಾನಸಭೆ ಅವಧಿಯಲ್ಲಿ ಅಂದಿನ ಆರೋಗ್ಯ ಸಚಿವರಾಗಿದ್ದ ಡಾ.ಸುಧಾಕರ್ ಅವರ ಮೇಲೆ ಒತ್ತಡ ಹಾಕಿದ್ದೆ. ಆದರೆ ವಿರೋಧ ಪಕ್ಷದ ಶಾಸಕನಾಗಿದ್ದ ಕಾರಣ ಹೆಚ್ಚುವರಿ ಅನುದಾನ ಬಿಡುಗಡೆ ಮಾಡದೆ ಕಾಲ ಮುಂದೂಡಿದ್ದರು.

ಆದರೆ ಈ ಬಾರಿ ನಮ್ಮದೇ ಸರ್ಕಾರ ಅಧಿಕಾರಕ್ಕೆ ಬಂದಿದೆ. ನಾನು ಹುಣ ಸೂರು ಕ್ಷೇತ್ರದಲ್ಲಿ ಸೋಲು ಕಂಡಿದ್ದರೂ ನನ್ನ ಅಧಿಕಾರ ಅವಧಿಯಲ್ಲಿ ಕೈಗೊಂಡಿ ರುವ ಅಭಿವೃದ್ಧಿ ಕಾಮಗಾರಿಗಳಿಗೆ ಹಿನ್ನಡೆ ಯಾಗಬಾರದೆಂದು ಆರೋಗ್ಯ ಸಚಿವರಲ್ಲಿ ಹೆಚ್ಚುವರಿ ಅನುದಾನ ನೀಡುವಂತೆ ಈ ಹಿಂದೆಯೇ ಮನವಿ ಮಾಡಿದ್ದೆ. ಶುಕ್ರವಾರ ಸಚಿವರ ಕಚೇರಿಗೆ ಭೇಟಿ ನೀಡಿದ್ದ ವೇಳೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರೇ ಖುದ್ದಾಗಿ ನಿಮ್ಮ ದೊಡ್ಡ ಆಸ್ಪತ್ರೆಗೆ ಅನುದಾನ ಮಂಜೂರು ಮಾಡಿರುವು ದಾಗಿ ತಿಳಿಸಿದ್ದಾರೆ ಎಂದು ಪತ್ರಿಕಾ ಹೇಳಿಕೆಯಲ್ಲಿ ಮಂಜುನಾಥ್ ತಿಳಿಸಿದ್ದಾರೆ.

ಜನಸಮಾನ್ಯರ ಕಷ್ಟಗಳಿಗೆ ಸ್ಪಂದಿಸುವ ಮೈಮುಲ್ ನಿರ್ದೇಶಕ
ಆರ್.ಚೆಲುವರಾಜು ಅವರದ್ದು ಸಮಾಜಮುಖಿ ಬದುಕು
ಮೈಮುಲ್ ಮಾಜಿ ನಿರ್ದೇಶಕ ಕೇತುಪುರ ಪ್ರಭಾಕರ್ ಬಣ್ಣನೆ



ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಹುಟ್ಟುಹಬ್ಬದ ಪ್ರಯುಕ್ತ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ಶಿಬಿರದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ತಿ.ನರಸೀಪುರ, ಜು.7– ಸ್ಥಳೀಯವಾಗಿ ದೊರೆತ ರಾಜಕೀಯ ಅಧಿಕಾರವನ್ನು ಸಮಾಜ ಸೇವೆಗೆ ಬಳಕೆ ಮತ್ತು ಸಾಮಾನ್ಯ ಜನರ ಕಷ್ಟ ಸುಖಗಳಿಗೆ ಸ್ಪಂದಿಸುವ ಗುಣ ಹೊಂದಿರುವ ತಾಪಂ ಮಾಜಿ ಅಧ್ಯಕ್ಷ, ಮೈಸೂರು ಹಾಲು ಒಕ್ಕೂಟದ ನಿರ್ದೇಶಕ ಆರ್.ಚೆಲುವರಾಜು ಅವರದ್ದು ಸಮಾಜಮುಖಿ ಬದುಕು ಎಂದು ಮೈಮುಲ್ ಮಾಜಿ ನಿರ್ದೇಶಕ ಕೇತುಪುರ ಪ್ರಭಾಕರ್ ಬಣ್ಣಿಸಿದರು.

ತಾಲೂಕಿನ ಬನ್ನೂರು ಪಟ್ಟಣದ ರೋಟರಿ ಶಾಲೆಯಲ್ಲಿ ಭಾನುವಾರ ಆರ್. ಚೆಲುವರಾಜು ಅವರ 40ನೇ ಹುಟ್ಟುಹಬ್ಬದ ಪ್ರಯುಕ್ತ ಸ್ನೇಹ ಬಳಗದಿಂದ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ, ರಕ್ತದಾನ ಶಿಬಿರ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆರ್. ಚೆಲುವರಾಜು ಅವರು ಜನರಿಂದ ಏನನ್ನು ಅಪೇಕ್ಷಿಸದೇ ಒಂದಲ್ಲ ಒಂದು ಸಮಾಜಮುಖಿ ಸೇವಾ ಕಾರ್ಯದಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುತ್ತಾರೆ ಎಂದರು.

ಉದ್ಯೋಗ ದಾತ ಸಂಸ್ಥೆಯ ಡಿ.ಬಿ. ರುಕ್ಮಾಂಗದ ಮಾತನಾಡಿದರು. ಇದೇ ವೇಳೆ ಬೆಳಗ್ಗೆಯಿಂದ ಸಂಜೆವರೆಗೂ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ 700ಕ್ಕೂ ಹೆಚ್ಚು ಮಂದಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಸ್ನೇಹ ಬಳಗದ 30 ಮಂದಿ ಸದಸ್ಯರು ರಕ್ತದಾನ ಮಾಡಿದರು. ಅಲ್ಲದೇ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿ ಉತ್ತೀರ್ಣರಾದ ಬನ್ನೂರು ಹೋಬಳಿಯ ಪ್ರತಿಭಾನ್ವಿತ 20 ವಿದ್ಯಾರ್ಥಿಗಳಿಗೆ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಿ, ಗೌರವಿಸಲಾಯಿತು.

ಚೆಲುವರಾಜು ಅವರ ಹುಟ್ಟುಹಬ್ಬವನ್ನು ಎಲ್ಲೆಡೆ ಸಂಭ್ರಮ ಸಡಗರದಿಂದ ಆಚರಣೆ ಮಾಡಲಾಯಿತು. ಮೈಸೂರಿನ ನಿವಾಸ ಸೇರಿದಂತೆ ಬನ್ನೂರು ಹೋಬಳಿಯ ಹಲವೆಡೆ ಶುಭ ಹಾರೈಸಿದ ಸ್ನೇಹ ಬಳಗದ ಸದಸ್ಯರು ಕಾಂಗ್ರೆಸ್ ಪಕ್ಷದಲ್ಲಿ ಉದಯೋನ್ಮುಖ ಯುವ ನಾಯಕರಾಗಿ ಪಕ್ಷ ಸಂಘಟನೆಗೆ ದುಡಿಯುತ್ತಿರುವ ಅವರ ರಾಜಕೀಯ ಭವಿಷ್ಯ ಉಜ್ವಲವಾಗಿರಲಿ ಎಂದು ಶುಭ ಕೋರಿದರು.

ಈ ವೇಳೆ ಎಪಿಎಂಸಿ ಮಾಜಿ ಅಧ್ಯಕ್ಷ ವೆಂಕಟೇಶ್, ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ, ರೋಟರಿ ಅಧ್ಯಕ್ಷ ಕೃಷ್ಣೇಗೌಡ, ಪುರಸಭೆ ಮಾಜಿ ಅಧ್ಯಕ್ಷ ಮುನಾವರ್ ಪಾಷ, ಮಾಜಿ ಉಪಾಧ್ಯಕ್ಷ ಬಿ.ಎಸ್.ರಾಮಲಿಂಗೇಗೌಡ, ರವಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚೆನ್ನಕೇಶವ, ಹಿಂದುಳಿದ ವರ್ಗಗಳ ಅಧ್ಯಕ್ಷ ಎ.ಎನ್.ಸ್ವಾಮಿ, ಕಾರ್ಮಿಕ ಅಧ್ಯಕ್ಷ ಕಟ್ಟೆಕೊಪ್ಪಲು ಶಿವಸಿದ್ದು, ಅತ್ತಹಳ್ಳಿ ಗ್ರಾಪಂ ಅಧ್ಯಕ್ಷ ಡಿ.ಸುನಿಲ್ ಕುಮಾರ್, ಮಾಜಿ ಅಧ್ಯಕ್ಷ ಬಸವನಹಳ್ಳಿ ರಾಜು, ಸದಸ್ಯ ಎ.ಎಸ್.ಮಹೇಶ್, ಮಾಜಿ ಸದಸ್ಯರಾದ ಕೃಷ್ಣೇಗೌಡ, ಅಶೋಕ್ ಕುಮಾರ್ ಅಶೋಕ್ ಕುಮಾರ, ಲಾಯರ್ ರವಿ, ಮುಖಂಡರಾದ ಸಿ.ಎಂ.ಶಶಿಭೂಷಣ್, ಟಿ.ಎಸ್.ಲೋಕೇಶ್, ದೇವರಾಜು, ಹನುಮನಾಳು ಮರಿಗೌಡ, ಬಾಣಗವಾಡಿ ನಾಗೇಶ, ದೀಪು, ಭಾಸ್ಕರ, ಅಶೋಕ, ಜಯರಾಮು, ಅಶೋಕ್ ಕುಮಾರ್, ಉಮೇಶ, ಮಧು, ರಂಜಿತ್, ಬೇವಿನಹಳ್ಳಿ ಲೋಕೇಶ್ ಹಾಗೂ ಇನ್ನಿತರರಿದ್ದರು.

ಜನರು ಪ್ರೀತಿಯಿಂದ ಅಭಿಮಾನ ವಿಟ್ಟು ಆಶೀರ್ವದಿಸಿ ದರೆ ಓರ್ವ ವ್ಯಕ್ತಿ ರಾಜಕೀಯ ನಾಯಕ, ಜನಪ್ರತಿನಿಧಿಯಾಗಲು ಸಾಧ್ಯ. ಸಾಮಾನ್ಯ ಕುಟುಂಬದ ಹಿನ್ನೆಲೆಯಿಂದ ಬಂದ ನನ್ನನ್ನು ಜನರು ಸಣ್ಣ ಮಟ್ಟದಲ್ಲಾದರೂ ಗುರುತಿಸಿ ಅಧಿಕಾರ ನೀಡಿದ್ದರಿಂದ ಸಮುದಾಯಕ್ಕೆ ಕೈಲಾದಷ್ಟು ಸೇವೆ ಮಾಡುತ್ತಿದ್ದೇನೆ. ಮುಂದೆಯೂ ಅಧಿಕಾರ ಇರಲಿ, ಇಲ್ಲದಿರಲಿ ಜಿಲ್ಲೆ ಹಾಗೂ ತಾಲೂಕಿನ ಜನರೊಂದಿಗೆ ಸಾಮಾಜಿಕ ಸೇವಾ ಕೆಲಸ ಕಾರ್ಯ ಮುಂದುವರೆಸುತ್ತೇನೆ.

-ಆರ್.ಚೆಲುವರಾಜು, ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕ.

ಮೈಸೂರು ಜಿಲ್ಲೆಯಲ್ಲಿ ಡೆಂಗ್ಯೂ ನಿಯಂತ್ರಣದಲ್ಲಿದೆ, ಆದರೂ ಮುಂಜಾಗ್ರತಾ ಕ್ರಮ

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ



ಮೈಸೂರು, ಜು.7(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ ಡೆಂಗ್ಯೂ ನಿಯಂತ್ರಣದಲ್ಲಿದ್ದು, ಜನವರಿಯಿಂದ ಇದುವರೆಗೆ ಪತ್ತೆಯಾದ 496 ಪ್ರಕರಣಗಳಲ್ಲಿ ಪ್ರಸ್ತುತ 34 ಸಕ್ರಿಯ ಪ್ರಕರಣಗಳಿದ್ದು, ಡೆಂಗ್ಯೂ ತಡೆಗೆ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ಜಲದರ್ಶಿನಿ ಅತಿಥಿಗೃಹದಲ್ಲಿ ಭಾನುವಾರ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಮಳೆಗಾಲ ಆರಂಭವಾದ ಬಳಿಕ ಡೆಂಗ್ಯೂ ಪ್ರಕರಣ ಹೆಚ್ಚಾಗುತ್ತಿದೆ. ಮೈಸೂರು ಜಿಲ್ಲೆಯಲ್ಲಿ ಜನವರಿಯಿಂದ 3595 ಜನರಿಗೆ ಡೆಂಗ್ಯು ಪರೀಕ್ಷೆ ನಡೆಸಲಾಗಿದ್ದು, 496 ದೃಢಪಟ್ಟಿದೆ. ಜಿಲ್ಲೆಯಲ್ಲಿ ಡೆಂಗ್ಯು ಪತ್ತೆ ಪ್ರಮಾಣ ಶೇ.14ರಷ್ಟಿದ್ದು, ಹುಣಸೂರಿನಲ್ಲಿ ಸಮುದಾಯ ಆರೋಗ್ಯಾಧಿಕಾರಿಯಾಗಿದ್ದ ನಾಗೇಂದ್ರ ಎಂಬುವರು ಆಸ್ಪತ್ರೆಗೆ ದಾಖಲಾಗದೆ ಸ್ವಯಂ ಔಷಧಿ ತೆಗೆದುಕೊಂಡು ಮೃತಪಟ್ಟಿದ್ದಾರೆ. ಈ ಪ್ರಕರಣ ಹೊರತುಪಡಿಸಿದರೆ ಜಿಲ್ಲೆಯಲ್ಲಿ ಸಾವಿನ ಪ್ರಮಾಣ ಕಡಿಮೆ ಇದೆ ಎಂದರು.

ಹಿಂದಿನ ಮೂರು ತಿಂಗಳಿಗೆ ಹೋಲಿಸಿದರೆ ಡೆಂಗ್ಯೂ ಪ್ರಕರಣಗಳ ಸಂಖ್ಯೆ ಕುಸಿದಿದೆ. 496 ಪ್ರಕರಣಗಳಲ್ಲಿ ಮೈಸೂರು ನಗರದಲ್ಲಿಯೇ 190 ಪ್ರಕರಣ ಕಂಡು ಬಂದರೆ, ಹುಣಸೂರು ತಾಲೂಕಿನಲ್ಲಿ ಹೆಚ್ಚು ಪ್ರಕರಣಗಳು ವರದಿಯಾಗಿದೆ. ಜಿಲ್ಲೆಯಲ್ಲಿ ಡೆಂಗ್ಯೂ ನಿಯಂತ್ರಣಕ್ಕೆ ಬರುತ್ತಿದೆ. ಮಳೆ ನೀರು ನಿಂತ ಸ್ಥಳದಲ್ಲಿ ಡೆಂಗ್ಯು ಸೋಂಕು ಹರಡುವ ಈಡಿಸ್ ಈಜಿಪ್ಟೈ ಸೊಳ್ಳೆ ಉತ್ಪತ್ತಿಯಾಗುತ್ತದೆ. ಸೊಳ್ಳೆಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವುದರೊಂದಿಗೆ ಜಿಲ್ಲೆಯಲ್ಲಿ ಮನೆ ಮನೆ ಸರ್ವೆ ನಡೆಸುವ ಮೂಲಕ ಡೆಂಗ್ಯು ಹಬ್ಬದಂತೆ ಕಟ್ಟೆಚ್ಚರ ವಹಿಸಲಾಗಿದೆ ಎಂದು ವಿವರಿಸಿದರು.

ಸೆಕ್ಷನ್ 7ಡಿ ರದ್ದು: ಎಸ್‌ಸಿಪಿ, ಟಿಎಸ್‌ಪಿ ಅನುದಾನವನ್ನು ಇತರೆ ಉದ್ದೇಶಗಳಿಗೆ ಬಳಸಿಕೊಳ್ಳಲು ಅವಕಾಶವಿದ್ದ ಎಸ್‌ಸಿಪಿ–ಟಿಎಸ್‌ಪಿ ಕಾಯ್ದೆಯ ಸೆಕ್ಷನ್ 7ಡಿ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ರದ್ದು ಮಾಡಿದ್ದಾರೆ. ಸೆಕ್ಷನ್ 7ಡಿ ಮೂಲಕ ಹಿಂದಿನ ಬಿಜೆಪಿ ಸರ್ಕಾರ ದಲಿತರಿಗೆ ಮೀಸಲಿಟ್ಟ ಅನುದಾನದಲ್ಲಿ 10 ಸಾವಿರ ಕೋಟಿ ಹಣವನ್ನು ಬೇರೆ ಉದ್ದೇಶಕ್ಕೆ ಬಳಸಿಕೊಂಡಿದೆ. ಪರಿಶಿಷ್ಟರಿಗೆ ಮೀಸಲಿಟ್ಟ ಅನುದಾನವನ್ನು ಗ್ಯಾರಂಟಿಗೆ ಬಳಸಲಾಗುತ್ತಿದೆ ಎಂದು ವಿಪಕ್ಷ ನಾಯಕರು, ರಾಜಕೀಯ ನಾಯಕರು ಗುಲ್ಲೆಬ್ಬಿಸುತ್ತಿದ್ದಾರೆ. ಆದರೆ, ಗ್ಯಾರಂಟಿ ಕಾರ್ಯಕ್ರಮಕ್ಕೆ ಈ ಹಣ ಬಳಸುತ್ತಿಲ್ಲ ಎಂದು ಹೇಳಿದರು.

ಸಹಾಯಧನ ಹೆಚ್ಚಳ: ನವದೆಹಲಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ 10 ಸಾವಿರ ರೂ. ಸಹಾಯಧನ ನೀಡಲಾಗುತ್ತಿದ್ದನ್ನು 15 ಸಾವಿರಕ್ಕೆ ಏರಿಕೆ ಮಾಡಲಾಗಿದೆ. ಸುಸಜ್ಜಿತ ಹಾಸ್ಟೆಲ್, ಹೈಟೆಕ್ ಗ್ರಂಥಾಲಯ ಸ್ಥಾಪನೆಗೂ ಚಿಂತನೆ ಮಾಡಲಾಗಿದೆ ಎಂದು ಹೇಳಿದರು.



ಮನೆ ಮನೆಗೆ ತೆರಳಿ ಆರೋಗ್ಯ ಸಿಬ್ಬಂದಿಗಳು ಲಾರ್ವ ಸರ್ವೆ ಮಾಡುತ್ತಿರುವುದು

ಜು.10ರಿಂದ ಕಬಿನಿ ನಾಲೆಗೆ ನೀರು

ಕಬಿನಿ ಜಲಾಶಯದಲ್ಲಿ 81 ಅಡಿ ನೀರು ಸಂಗ್ರಹವಾಗಿದೆ. ಕೆರೆ–ಕಟ್ಟೆಗಳಿಗೆ ನೀರು ತುಂಬಿಸುವುದಕ್ಕಾಗಿ ಜು. 10ರಿಂದ ನಾಲೆಗಳಿಗೆ ನೀರು ಹರಿಸಲು ತೀರ್ಮಾನಿಸಲಾಗಿದೆ. ಒಳಹರಿವಿನ ಪ್ರಮಾಣ ನೋಡಿಕೊಂಡು ನೀರಾವರಿ ಸಲಹಾ ಸಮಿತಿ ಸಭೆ ನಡೆಸಿ ತೀರ್ಮಾನ ಮಾಡುತ್ತೇವೆ ಎಂದು ಹೇಳಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರತ್ನಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಲ್ಕಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಜಿಗರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಕಿಲ್ (ಹಿಂ)	4 ಪ್ರದರ್ಶನಗಳು
ಸಂಗಂ	
ಕಾದಾಡಿ (ಕ)	4 ಪ್ರದರ್ಶನಗಳು
ಲಿಡೋ	
ಜಿಗರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗರುಡನ್ (ತ)	4 ಪ್ರದರ್ಶನಗಳು
ಪ್ರಭಾ	
ಕಾಗದ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡೆಸ್ಪಿಕಬಲ್ ಮಿ 4 (3ಡಿ) (ಇಂ): ಬೆ.11ಕ್ಕೆ, ಸಂ.4.30ಕ್ಕೆ, ಕಲ್ಕಿ 2898 ಎಡಿ (ಕ): ಮ.1ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಲವ್ ಲಿ (ಕ): ಬೆ.10.35ಕ್ಕೆ, ಡೆಸ್ಪಿಕಬಲ್ ಮಿ 4 (3ಡಿ) (ಇಂ): ಮ.1.45ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಸಂ.4.05ಕ್ಕೆ, ಕಿಲ್ (ಹಿಂ): ರಾ.7.35ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (3ಡಿ) (ತೆ): ಬೆ.11.45ಕ್ಕೆ, ಕಲ್ಕಿ 2898 ಎಡಿ (ಕ): ಮ.3.15ಕ್ಕೆ, ಕಲ್ಕಿ 2898 ಎಡಿ (3ಡಿ) (ಹಿಂ): ಸಂ.6.45ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಕಿಲ್ (ಹಿಂ): ಬೆ.11, ಕಲ್ಕಿ 2898 ಎಡಿ (3ಡಿ) (ತೆ): ಮ.1.15ಕ್ಕೆ, ಸಂ.6.40ಕ್ಕೆ, ರಾ.10.10ಕ್ಕೆ, ಇನ್‌ಸೈಟ್ ಔಟ್ (3ಡಿ)(ಇಂ): ಸಂ.4.40ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಕಲ್ಕಿ 2898 ಎಡಿ (3ಡಿ) (ಹಿಂ): ಬೆ.11.15ಕ್ಕೆ, ಸಂ.6.45ಕ್ಕೆ, ಕಲ್ಕಿ 2898 ಎಡಿ (3ಡಿ) (ತೆ): ಮ.3ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.10.15ಕ್ಕೆ, ಮ.2ಕ್ಕೆ, ಸಂ.5.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ತೆ): ಬೆ.10.45ಕ್ಕೆ, ಸಂ.6.15ಕ್ಕೆ, ಕಲ್ಕಿ 2898 ಎಡಿ (ಹಿಂ): ಮ.2.30ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಡೆಸ್ಪಿಕಬಲ್ ಮಿ 4 (3ಡಿ) (ಇಂ): ಬೆ.10.40ಕ್ಕೆ, ಮ.3.20ಕ್ಕೆ, ರಾ.8ಕ್ಕೆ, ರಾ.10.15ಕ್ಕೆ, ಕಿಲ್ (ಹಿಂ): ಮ.12.55ಕ್ಕೆ, ಸಂ.5.35ಕ್ಕೆ.

MVC ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಲವ್ ಲಿ (ಕ): ಮ.1ಕ್ಕೆ, ಕಾಗದ (ಕ): ಸಂ.4ಕ್ಕೆ, ಬಿಗ್ ಬೆನ್ (ಮ): ಸಂ.6.55ಕ್ಕೆ, ಕುಂಡಲ ಪುರಾಣಂ (ಮ): ರಾ.9.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ(3ಡಿ) (ತೆ): ಮ.2.30ಕ್ಕೆ, ರಾ.9.30ಕ್ಕೆ, ಕಲ್ಕಿ 2898 ಎಡಿ (ಕ): ಸಂ.6ಕ್ಕೆ
ಸ್ಕ್ರೀನ್ 3	ಕಲ್ಕಿ 2898 ಎಡಿ (ಕ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ.
ಸ್ಕ್ರೀನ್ 4	ಕಲ್ಕಿ 2898 ಎಡಿ (3ಡಿ) (ತೆ): ಸಂ.4ಕ್ಕೆ, ರಾ.7.25ಕ್ಕೆ.

PVR CINEMAS ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಆಷಾಢ ಶುಕ್ರವಾರ, ನೋ ಪಾಸ್

ಮೈಸೂರು, ಜು.7(ಎಂಟಿವೈ)– ಆಷಾಢ ಮಾಸದ ಶುಕ್ರವಾರದಂದು ನಡೆಯುವ ವಿಶೇಷ ಪೂಜಾ ಮಹೋತ್ಸವಕ್ಕಾಗಿ ಚಾಮುಂಡಿಬೆಟ್ಟಕ್ಕೆ ತೆರಳುವವರಿಗೆ ಯಾವುದೇ ಪಾಸ್ ನೀಡುವುದಿಲ್ಲ ಎಂದು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸ್ಪಷ್ಟಪಡಿಸಿದ್ದಾರೆ.

ಕಳೆದ ವರ್ಷ ಪಾಸ್ ನೀಡದೇ ಇರುವುದಕ್ಕೆ ಪ್ರಶಂಸೆ ವ್ಯಕ್ತವಾಗಿತ್ತು. ಈ ಹಿನ್ನೆಲೆಯಲ್ಲಿ ಈ ಬಾರಿಯೂ ಯಾರಿಗೂ ಪಾಸ್ ನೀಡುವುದಿಲ್ಲ. ಭಕ್ತರು ಸರಾಗವಾಗಿ ದೇವರ ದರ್ಶನ ಮಾಡಿಕೊಂಡು ಬರುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಅದೇ ಮಾದರಿಯನ್ನು ಈ ವರ್ಷವೂ ಮುಂದುವರಿಸುವಂತೆ ಹೇಳಿದ್ದೇನೆ. ನನಗೂ ಪಾಸ್ ಇರುವುದಿಲ್ಲ. ಪಾರ್ಕಿಂಗ್ ತೊಂದರೆ ಬಗ್ಗೆ ಅಧಿಕಾರಿಗಳು ಗಮನಕ್ಕೆ ತಂದಿದ್ದಾರೆ. ಮತ್ತೊಂದು ಕಡೆ ಪಾರ್ಕಿಂಗ್ ವ್ಯವಸ್ಥೆ ಮಾಡುವಂತೆ ಹೇಳಿದ್ದೇನೆ. ಮುಂಜಾನೆ 5 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸಿ ದರ್ಶನ ಪಡೆಯಬಹುದು ಎಂದು ತಿಳಿಸಿದರು.

ಎಂಎಲ್‌ಸಿಗೆ ಅಭಿನಂದನೆ



ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರನ್ನು ಮುಖಂಡರಾದ ವಿಕ್ರಾಂತ್ ಪಿ.ದೇವೇಗೌಡ ಹಾಗೂ ಕುರುಬರಹಳ್ಳಿ ಕ್ಯಾಂಟೀನ್ ರವಿ ಅಭಿನಂದಿಸಿದರು.

ಗಿರಿಜಾ ಕಲ್ಯಾಣದಲ್ಲಿ ವೀಣಾವಾದನ

ನಂಜನಗೂಡು, ಜು.7– ಪಟ್ಟಣದ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವದ ಅಂಗವಾಗಿ ಜು.9ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಜು.12ರಂದು ಸಂಜೆ 6.30ರಿಂದ ನಂಜನಗೂಡಿನ ಶ್ರೀವಿದ್ಯಾ ಸಂಗೀತ ಮತ್ತು ನೃತ್ಯ ಶಾಲೆಯ ಸಂಸ್ಥಾಪಕರಾದ ಶ್ರೀಮತಿ ಶ್ರೀವಿದ್ಯಾ ಅವರಿಂದ ವೀಣಾವಾದನ ಕಾರ್ಯಕ್ರಮ ನಡೆಯಲಿದೆ ಎಂದು ಸಂಗೀತ ಕಲಾವಿದೆ ಎಂದು ವೈಷ್ಣವಿ ರಾಮನ್ ತಿಳಿಸಿದ್ದಾರೆ.

ಕಾವೇರಿ ಸಮೂಹ ವಿದ್ಯಾಸಂಸ್ಥೆಯಲ್ಲಿ ಪದವಿ ಪ್ರದಾನ ಸಮಾರಂಭ



ಮೈಸೂರಿನ ಹೆಸರಾಂತ ಕಾವೇರಿ ಸಮೂಹ ವಿದ್ಯಾಸಂಸ್ಥೆಯಲ್ಲಿ 17ನೇ ಪದವಿ ಪ್ರದಾನ ಸಮಾರಂಭ ನೆರವೇರಿತು.

ಮೈಸೂರು, ಜು.7(ಎಸ್‌ಬಿಡಿ)– ಹೆಸರಾಂತ ಡಾ.ಚಂದ್ರಶೇಖರ್ ಫೌಂಡೇಷನ್‌ನ ಕಾವೇರಿ ಸಮೂಹ ವಿದ್ಯಾಸಂಸ್ಥೆ ಆವರಣದಲ್ಲಿ ಶನಿವಾರ 17ನೇ ಪದವಿ ಪ್ರದಾನ ಸಮಾರಂಭ ನಡೆಯಿತು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸಮಾರಂಭ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಪದವಿ ಜೊತೆಗೆ ದೂರದೃಷ್ಟಿತ್ವ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಕಾವೇರಿ ಸಮೂಹ ವಿದ್ಯಾಸಂಸ್ಥೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುತ್ತಿದೆ. ಪರಿಣಾಮ ಇಲ್ಲಿ ಪದವಿ ಪಡೆದವರಿಗೆ ಜಗತ್ತಿನಾದ್ಯಂತ ಉದ್ಯೋಗ ದೊರಕುತ್ತಿರುವುದು ಶ್ಲಾಘನೀಯ ಎಂದರು.

ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಡೀನ್ ಅಂಡ್ ಡೈರೆಕ್ಟರ್ ಡಾ. ಹೆಚ್.ಜಿ.ಮಂಜುನಾಥ್ ಮಾತನಾಡಿ, ಆರೋಗ್ಯ ಕ್ಷೇತ್ರದಲ್ಲಿ ನರ್ಸಿಂಗ್ ಸೇವೆಗೆ ಹೆಚ್ಚಿನ ಪ್ರಾಮುಖ್ಯತೆ ಇದೆ. ವೈದ್ಯರ ಸೇವೆಗಿಂತ ಶುಶ್ರೂಷಕರ ಸೇವೆ ಮಹತ್ವಪೂರ್ಣವಾದುದು ಎಂದು ಬಣ್ಣಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ.ಚಂದ್ರಶೇಖರ್ ಫೌಂಡೇಷನ್‌ನ ಅಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್ ಮಾತನಾಡಿ, ಆರೋಗ್ಯ ಸೇವೆಯಲ್ಲಿ ಕಾರ್ಯ ನಿರ್ವಹಿಸುವವರಿಗೆ ಮಾನವೀಯತೆ, ಸಹಾನುಭೂತಿ, ಕರುಣೆ ಬಹಳ ಮುಖ್ಯ. ಇವು ವೈದ್ಯರು ನೀಡುವ ಔಷಧಿಗಿಂತ ಹೆಚ್ಚು ಪರಿಣಾಮಕಾರಿ. ಜ್ಞಾನದ ಜೊತೆಗೆ ಉತ್ತಮ ವ್ಯಕ್ತಿತ್ವ ವೃತ್ತಿ ಜೀವನಕ್ಕೆ ಅತ್ಯಗತ್ಯ. ಪ್ರತಿಯೊಬ್ಬರೂ ರೋಗ ಗುಣಪಡಿಸುವ ಜ್ಞಾನದ ಜೊತೆಗೆ ರೋಗಿಯ ಬಗ್ಗೆ ಕಾಳಜಿ ಹೊಂದಿರಬೇಕು. ಆಗ ಮಾತ್ರ ನಮ್ಮ ವೃತ್ತಿಯ ಗೌರವ ಹೆಚ್ಚಲಿದೆ ಎಂದು ಕಿವಿಮಾತು ಹೇಳಿದರು.

ಸಮಾರಂಭದಲ್ಲಿ ನರ್ಸಿಂಗ್‌ನ 176, ಫಿಜಿಯೋಥೆರಪಿ 40, ಅಲೈಡ್ ಹೆಲ್ತ್ ಸೈನ್ಸ್‌ನ 102 ಸೇರಿ ಒಟ್ಟು 318 ವಿದ್ಯಾರ್ಥಿಗಳಿಗೆ ಪದವಿ ಪತ್ರ ಪ್ರದಾನ ಮಾಡಲಾಯಿತು. ಇದೇ ವೇಳೆ ಪ್ರತಿಭಾವಂತ 29 ವಿದ್ಯಾರ್ಥಿಗಳಿಗೆ ಪದಕ, ಪ್ರಶಸ್ತಿ ಪತ್ರದೊಂದಿಗೆ ನಗದು ಬಹುಮಾನ ನೀಡಿ, ಅಭಿನಂದಿಸಲಾಯಿತು. ಕಾವೇರಿ ಹಾರ್ಟ್ ಅಂಡ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕಿ ಡಾ.ಸರಳ ಚಂದ್ರಶೇಖರ್, ಕಾಲೇಜಿನ ಡೀನ್ ಪ್ರೊ.ಎಸ್.ಶ್ರೀಕಂಠಸ್ವಾಮಿ, ಪ್ರಾಂಶುಪಾಲರುಗಳು, ಪ್ರಾಧ್ಯಾಪಕರು, ಆಡಳಿತ ವಿಭಾಗದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಮತ್ತು ಪೋಷಕರು ಭಾಗವಹಿಸಿದ್ದರು.

ಸಿದ್ದರಾಮಯ್ಯ ಪತ್ನಿಗೆ ಮುಡಾ ನಿವೇಶನ ನೀಡಿರುವುದು ಕ್ರಮಬದ್ಧವಾಗಿದೆ

ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಸಮರ್ಥನೆ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಭಾನುವಾರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಜು.7(ಎಂಟಿವೈ)–ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಶ್ರೀಮತಿ ಪಾರ್ವತಿ ಅವರಿಗೆ ಮುಡಾದಿಂದ ನಿವೇಶನಗಳನ್ನು ನೀಡಿರುವುದು ಕ್ರಮಬದ್ಧವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಸಮರ್ಥಿಸಿಕೊಂಡಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀಮತಿ ಪಾರ್ವತಿ ಅವರಿಗೆ ನಿವೇಶನ ನೀಡಿರುವುದು ಶೇ.50:50 ಅನುಪಾತದ ವ್ಯಾಪ್ತಿಗೆ ಒಳಪಡುವುದಿಲ್ಲ. ಅವರಿಗೆ ಸೇರಿದ ಜಮೀನನ್ನು ಕಾನೂನುಬಾಹಿರವಾಗಿ ಮುಡಾ ವಶಪಡಿಸಿಕೊಂಡು ನಿವೇಶನಗಳನ್ನು ರಚಿಸಿದ ತಪ್ಪಿಗಾಗಿ ಶ್ರೀಮತಿ ಪಾರ್ವತಿ ಅವರಿಗೆ ವಿಜಯನಗರದಲ್ಲಿ ನಿವೇಶನಗಳನ್ನು ನೀಡಲಾಗಿದೆ. ಇವೆಲ್ಲವೂ ಮುಡಾ ನಿಯಮಾನುಸಾರವೇ ನಡೆದಿದೆ ಹಾಗೂ ಕ್ರಮಬದ್ಧವಾಗಿದೆ ಎಂದರು.

ರಾಜಕಾರಣದಲ್ಲಿ ಪ್ರಾಮಾಣಿಕ ರಾಜಕಾರಣಿಯಾಗಿದ್ದು, ಯಾವುದೇ ಕಪ್ಪುಚುಕ್ಕೆ ಇಲ್ಲದೆ ಕ್ಲೀನ್ ಇಮೇಜ್ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಇಮೇಜ್‌ಗೆ ಧಕ್ಕೆ ಉಂಟು ಮಾಡಬೇಕೆಂಬ ರಾಜಕೀಯ ದುರುದ್ದೇಶದಿಂದ ಸುಳ್ಳು ಆರೋಪ ಮಾಡಲಾಗುತ್ತಿದೆ. ಸಿದ್ದರಾಮಯ್ಯ ವಿರುದ್ಧ ಕುತಂತ್ರ ನಡೆದಿದೆ ಎಂದರು.

ಗ್ರ್ಯಾಂಟ್ ಭೂಮಿಯಲ್ಲ: ಸಿದ್ದರಾಮಯ್ಯ ಪತ್ನಿ ಶ್ರೀಮತಿ ಪಾರ್ವತಿ ಅವರಿಗೆ ಮುಡಾ ನೀಡಿರುವ ನಿವೇಶನಗಳು ಕ್ರಮಬದ್ಧವಾಗಿವೆ ಎಂಬುದು ಮನವರಿಕೆಯಾಗಿದ್ದರೂ ಒಬ್ಬರು ಪಾರ್ವತಿ ಅವರ ಸಹೋದರ ಕಾನೂನು ವಿರೋಧವಾಗಿ ದಲಿತರ ಭೂಮಿ ಕಬಳಿಸಿದ್ದಾರೆ ಎಂದು ದುರುದ್ದೇಶಪೂರಿತವಾಗಿ ಮತ್ತೊಂದು ಆರೋಪ ಮಾಡಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ವಿರುದ್ಧ ಪರೋಕ್ಷವಾಗಿ ಕಿಡಿಕಾರಿದರು.

ದಲಿತರಿಗೆ ಸರ್ಕಾರದಿಂದ ಗ್ರ್ಯಾಂಟ್ ಆದ ಭೂಮಿಯನ್ನು ದಲಿತರಲ್ಲದವರು ಖರೀದಿಸುವುದು ಕಾನೂನುಬಾಹಿರ. ಆದರೆ ಈ ಭೂಮಿ ಗ್ರ್ಯಾಂಟ್ ಭೂಮಿಯಲ್ಲ. 1980ರಲ್ಲಿ ನಿಂಗ ಎಂಬುವರು ಹರಾಜು ಮೂಲಕ ಸರ್ಕಾರದ ಖಜಾನೆಗೆ ಹಣ ಪಾವತಿಸಿ ಖರೀದಿಸಿರುವ ಭೂಮಿಯಾಗಿದೆ. ಹೀಗಾಗಿ ಇದನ್ನು ದಲಿತರಲ್ಲದವರು ಖರೀದಿಸುವುದು ಕಾನೂನುಬಾಹಿರವಲ್ಲ ಎಂದರು.

ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ: ಮುಡಾ ಹಗರಣ ಸಂಬಂಧ ತನಿಖೆ ಪ್ರಗತಿಯಲ್ಲಿದೆ. ಈ ಪ್ರಕರಣದಲ್ಲಿ ರಾಜಕಾರಣಿಗಳೂ ಸೇರಿದಂತೆ ಯಾರೇ ತಪ್ಪಿತಸ್ಥರಾದರೂ, ಮುಲಾಜಿಲ್ಲದೇ ಕ್ರಮ ಕೈಗೊಳ್ಳಲಾಗುತ್ತದೆ. ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಕೋತಿ ಹೋಯಿತು, ನಾಯಿ ಹೋಯಿತು ಎಂದರೂ ಸಿಬಿಐ ತನಿಖೆಗೆ ಕೊಡುವಂತೆ ಒತ್ತಾಯಿಸುತ್ತಾರೆ. ಇವರು ಈ ಹಿಂದೆ ಎಷ್ಟು ಪ್ರಕರಣಗಳನ್ನು ಸಿಬಿಐಗೆ ಕೊಟ್ಟಿದ್ದರು. ಈಗ ಯಾಕೆ ಸಿಬಿಐ ಮೇಲೆ ಇವರಿಗೆ ವಿಶೇಷ ಒಲವು ಬಂದಿದೆ ಎಂದು ಡಾ. ಹೆಚ್.ಸಿ.ಮಹದೇವಪ್ಪ ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ.ವಿಜಯಕುಮಾರ್, ಜಿಪಂ ಅಧ್ಯಕ್ಷ ಬಿ.ಎಂ.ರಾಮು, ಮಾಧ್ಯಮ ವಕ್ತಾರ ಕೆ.ಮಹೇಶ್ ಉಪಸ್ಥಿತರಿದ್ದರು.

ವೇಶ್ಯಾವಾಟಿಕೆ: ಲಾಡ್ಜ್ ಮೇಲೆ ಸಿಸಿಬಿ ದಾಳಿ

ಮೈಸೂರು, ಜು.7(ಎಸ್‌ಪಿಎನ್)– ವೇಶ್ಯಾವಾಟಿಕೆ ನಡೆಯುತ್ತಿದ್ದ ಲಾಡ್ಜ್ ಮೇಲೆ ದಾಳಿ ನಡೆಸಿದ ಸಿಸಿಬಿ ಪೊಲೀಸರು ಇಬ್ಬರು ಯುವತಿಯರನ್ನು ರಕ್ಷಿಸಿ, ಮೂವರು ಯುವಕರನ್ನು ಬಂಧಿಸಿದ್ದಾರೆ.


ವಿಜಯನಗರದ ಟ್ಯಾಂಕ್ ರಸ್ತೆಯಲ್ಲಿರುವ ಕರಣ್ ರೆಸಿಡೆನ್ಸಿಯಲ್ಲಿ ವೇಶ್ಯಾವಾಟಿಕೆ ನಡೆಯುತ್ತಿರುವ ಖಚಿತ ಮಾಹಿತಿ ಆಧರಿಸಿ ಸಿಸಿಬಿ ಕಾರ್ಯಾಚರಣೆ ನಡೆಸಿದೆ. ಈ ವೇಳೆ ಜಾರ್ಖಂಡ್ ಮತ್ತು ಮೈಸೂರು ಜಿಲ್ಲೆ ಹುಣಸೂರಿನ ಯುವತಿಯರಿಬ್ಬರನ್ನು ರಕ್ಷಿಸಿದ್ದಾರೆ. ಹುಬ್ಬಳ್ಳಿಯ ರಾಜು ಎಂಬುವರು ಲಾಡ್ಜ್ ನಡೆಸುತ್ತಿದ್ದರೆಂದು ಹೇಳಲಾಗಿದೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಭಾನುವಾರ	102 ಅಡಿ
ಒಳಹರಿವು	11027 ಕ್ಯೂಸೆಕ್
ಹೊರಹರಿವು	562 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಭಾನುವಾರ	2281.56 ಅಡಿ
ಒಳಹರಿವು	5039 ಕ್ಯೂಸೆಕ್
ಹೊರಹರಿವು	3250 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಭಾನುವಾರ	2847.92 ಅಡಿ
ಒಳಹರಿವು	2472 ಕ್ಯೂಸೆಕ್
ಹೊರಹರಿವು	200 ಕ್ಯೂಸೆಕ್

ಕನ್ನಡ ಮಾತನಾಡುವವರು ಕಡಿಮೆಯಾದರೂ ಕನ್ನಡ ಪುಸ್ತಕೋದ್ಯಮಕ್ಕೆ ಹೊಡೆತ ಬಿದ್ದಿಲ್ಲ

ಪ್ರಕಾಶಕ ಜಮೀಲ್ ಸಾವಣ್ಣ ಅಭಿಮತ



ಪ್ರಕಾಶನ ಕಲೆ– ಓದುಗರ ಮತ್ತು ಲೇಖಕರ ನಡುವಿನ ಕೊಂಡಿ' ಸಂವಾದದಲ್ಲಿ ಸಾವಣ್ಣ ಪ್ರಕಾಶನದ ಪ್ರಕಾಶಕ ಜಮೀಲ್ ಸಾವಣ್ಣ , ಚಿಂತನ ಚಿತ್ತಾರ ಪ್ರಕಾಶನದ ಪ್ರಕಾಶಕ ನಿಂಗರಾಜು ಚಿತ್ತಣ್ಣವರ್, ಅಭಿರುಚಿ ಪ್ರಕಾಶನದ ಪ್ರಕಾಶಕ ಅಭಿರುಚಿ ಗಣೇಶ್, ಚಿಂತಕಿ ಮೀನಾ ಮೈಸೂರು ಉಪಸ್ಥಿತರಿದ್ದರು.

ಮೈಸೂರು, ಜು.7(ಎಸ್‌ಪಿಎನ್)– ಕನ್ನಡ ಮಾತನಾಡುವವರ ಸಂಖ್ಯೆ ದಿನೇದಿನೆ ಕಡಿಮೆಯಾಗುತ್ತಿದೆ. ಇದರಿಂದ ಕನ್ನಡ ಪುಸ್ತಕೋದ್ಯಮಕ್ಕೆ ಹೊಡೆತ ಬೀಳುತ್ತದೆ ಎನ್ನುವ ವಾದವನ್ನು ನಾನು ಒಪ್ಪುವುದಿಲ್ಲ ಎಂದು ಬೆಂಗಳೂರು ಸಾವಣ್ಣ ಪ್ರಕಾಶನದ ಪ್ರಕಾಶಕ ಜಮೀಲ್ ಸಾವಣ್ಣ ಅಭಿಪ್ರಾಯಪಟ್ಟರು.

ಮೈಸೂರು ಸಾಹಿತ್ಯ ಸಂಭ್ರಮದ 8ನೇ ಆವೃತ್ತಿ ಎರಡನೇ ದಿನದ ಆರನೇ ಗೋಷ್ಠಿಯಲ್ಲಿ ಪ್ರಕಾಶನ ಕಲೆ– ಓದುಗರ ಮತ್ತು ಲೇಖಕರ ನಡುವಿನ ಕೊಂಡಿ' ವಿಷಯ ಕುರಿತು ಮಾತನಾಡಿದರು.

ಮೈಸೂರಿನಲ್ಲಿ ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪನವರು ಪುಸ್ತಕದ ಮೇಲೆ ರಾಯಲ್ಟಿ ಪಡೆಯುತ್ತಿದ್ದರು. ಇದೀಗ ಮೈಸೂರಿನವರೇ ಆದ ಮೂಕನಹಳ್ಳಿ ರಂಗಸ್ವಾಮಿ ರಚಿತ 'ಷೇರು ಮಾರುಕಟ್ಟೆ', 'ಹಣ ಏನಿದೆ ವಿಚಿತ್ರ ಗುಣ', 'ಸಿರಿವಂತನಿಗೆ ಸರಳ ಸೂತ್ರಗಳು', ಹಣ ಹನಿ', 'ಷೇರು ಸಾಮ್ರಾಜ್ಯ' ಶೀರ್ಷಿಕೆಯ ಪುಸ್ತಕಗಳು ಅತೀ ಹೆಚ್ಚು ಮಾರಾಟವಾಗಿವೆ. ಇವುಗಳಿಗೆ 5.5 ಲಕ್ಷ ರಾಯಲ್ಟಿ ಪಡೆದಿದ್ದಾರೆ. ಇದನ್ನು ಗಮನಿಸಿದರೆ, ಓದುಗರು ಇಷ್ಟಪಡುವ ಪುಸ್ತಕಗಳನ್ನು ಪ್ರಕಟಿಸಿದರೆ, ಖಂಡಿತವಾಗಿಯೂ ಕನ್ನಡ ಪುಸ್ತಕಗಳನ್ನು ಕೊಂಡು ಓದುತ್ತಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ ಎಂದು ತಿಳಿಸಿದರು.

ನಮ್ಮ ಪ್ರಕಾಶನದಿಂದ ಪುಸ್ತಕವನ್ನು ಹೊರತರುವಾಗ ಯಾವುದೇ ಲೇಖಕರ ಪುಸ್ತಕಗಳನ್ನು ಪ್ರಾಯೋಗಿಕವಾಗಿ 100 ಪುಸ್ತಕಗಳನ್ನು ಮೊದಲು ಪ್ರಕಟಿಸುತ್ತೇವೆ. ನಂತರ ಲೇಖನದ ಗಟ್ಟಿತನದ ಮೇರೆಗೆ ಮುಂದಿನ ಪ್ರಕಟಣೆ ಮಾಡುತ್ತೇವೆ. ಇದು ಪ್ರಕಾಶಕನಿಗೆ ಪ್ರಸ್ತುತ ಸನ್ನಿವೇಶಕ್ಕೆ ಅನಿವಾರ್ಯವೂ ಹೌದು. ಕಳೆದ ನಾಲ್ಕು ವರ್ಷಗಳಿಂದ ರಾಜ್ಯ ಸರ್ಕಾರ ಯಾವುದೇ ಪುಸ್ತಕಗಳನ್ನು ಖರೀದಿಸುತ್ತಿಲ್ಲ. ಇದರ ಬಗ್ಗೆ ಸಾರ್ವಜನಿಕರು ದನಿಯಾಗಬೇಕು ಎಂದು ಆಗ್ರಹಿಸಿದರು.

ಓದುಗರು ಮಾತ್ರ ಉತ್ತಮ ಪುಸ್ತಕಗಳನ್ನು ಪ್ರಕಟಿಸಿದರೆ, ಖರೀದಿಸಿ ಪ್ರಕಾಶಕರನ್ನು ಸದಾ ಪ್ರೋತ್ಸಾಹಿಸುತ್ತಿದ್ದಾರೆ. ನಾವು ಓದುಗರನ್ನು ತಲುಪುವ ವಿಧಾನ, ಸ್ವಲ್ಪ ಮಾರುಕಟ್ಟೆ ತಂತ್ರಗಾರಿಕೆ ಉಪಯೋಗಿಸಬೇಕು ಎಂದ ಅವರು, ಇತ್ತೀಚೆಗೆ ಪ್ರಕಟಿಸಿರುವ ಕೇವಲ ಒಂದೂವರೆ ಗಂಟೆಯಲ್ಲಿ ಓದಿ ಮುಗಿಸುವ ಪ್ಯಾಕೆಟ್ ಭಗವದ್ಗೀತೆಯನ್ನು ಪ್ರದರ್ಶಿಸಿದರು.

ಪುಸ್ತಕೋದ್ಯಮ ಉದ್ಯಮ ಅಲ್ಲ, ನಮ್ಮ ಬದುಕು: ಚಿಂತನ ಚಿತ್ತಾರ ಪ್ರಕಾಶನದ ಪ್ರಕಾಶಕ ನಿಂಗರಾಜು ಚಿತ್ತಣ್ಣವರ್ ಮಾತನಾಡಿ, ನಾನು ಪುಸ್ತಕೋದ್ಯಮದಲ್ಲಿ ಅಂಬೆಗಾಲು ಇಡುತ್ತಿರುವವನು. ಕನ್ನಡ ಪುಸ್ತಕ ಪ್ರಕಟಣೆಯನ್ನು ನಾನು ಉದ್ಯಮ ಎಂದು ಪರಿಗಣಿಸುವುದಿಲ್ಲ. ಬದಲಾಗಿ ಇದು ಜನರ ಬದುಕು, ಸಂಸ್ಕೃತಿ ಭಾಗ ಎಂದು ಪರಿಗಣಿಸುತ್ತೇನೆ. ಪುಸ್ತಕೋದ್ಯಮ ಎಂದಿಗೂ ಉದ್ಯಮ ದೃಷ್ಟಿಕೋನದಲ್ಲಿ ನೋಡಬಾರದು. ಏಕೆಂದರೆ, ನಮ್ಮ ಜನರ ಕಷ್ಟ–ಸುಖ, ನೋವುಗಳನ್ನು ದಾಖಲೀಕರಣ ಮಾಡುವುದೇ ಪ್ರಕಾಶಕರ ಕರ್ತವ್ಯ ಎಂದು ನಂಬಿದ್ದೇನೆ. ಅದೇ ರೀತಿಯೇ ಮುಂದೆ ಸಾಗುತ್ತೇನೆ. ಕನ್ನಡ ಪುಸ್ತಕ ಮಾರಾಟ ಮಳಿಗೆ ಆರಂಭಿಸಿದ ವೊದ ಮೊದಲು ಲೇಖಕರನ್ನು ಓದು–ವಿಮರ್ಶೆ ಕಾರ್ಯಕ್ರಮಕ್ಕೆ ಮನೆಮನೆಗೆ ತೆರಳಿ ಆಹ್ವಾನ ನೀಡುತ್ತಿದ್ದೆ. ಆಗ ನನ್ನ ಆಹ್ವಾನಕ್ಕೆ ಎಲ್ಲಾ ಲೇಖಕರು ಉತ್ತಮ ಸ್ಪಂದನೆ ನೀಡಿದ್ದಾರೆ. ಇಲ್ಲಿಯವರಿಗೆ 97ಕ್ಕೂ ಪುಸ್ತಕ–ಓದು ಕಾರ್ಯಕ್ರಮ ಆಯೋಜಿಸಿದ್ದೇನೆ ಎಂದರು.

ಉತ್ತಮ ಲೇಖಕರ ಪುಸ್ತಕಗಳಿಗೆ ಇಂದಿಗೂ ಬೇಡಿಕೆ: ಅಭಿರುಚಿ ಪ್ರಕಾಶನದ ಪ್ರಕಾಶಕ ಅಭಿರುಚಿ ಗಣೇಶ್ ಮಾತನಾಡಿ, ಇಂದಿಗೂ ಕುವೆಂಪು ರಚಿತ ಮಲೆಗಳಲ್ಲಿ ಮದುಮಗಳು, ನಾಟಕ, ಕವಿತೆಗಳು ಸೇರಿದಂತೆ ಇತರೆ ಪುಸ್ತಕಗಳು ಹಾಗೂ ಪೂರ್ಣಚಂದ್ರ ತೇಜಸ್ವಿ, ದೇವನೂರ ಮಹಾದೇವ ಸೇರಿದಂತೆ ಇತರೆ ಲೇಖಕರ ಪುಸ್ತಕಗಳು ಪ್ರತಿ ತಿಂಗಳಿಗೊಮ್ಮೆ ಪ್ರಕಟಣೆಗೊಳ್ಳುತ್ತಿವೆ. ಈ ಪುಸ್ತಕಗಳು ರಚಿತವಾಗಿ ಹಲವು ವರ್ಷ ಕಳೆದರೂ ಇಂದಿನ ಪೀಳಿಗೆಯವರು ಈ ಪುಸ್ತಕಗಳನ್ನು ಕೊಂಡು ಓದುತ್ತಿರುವುದೇ ಸಾಕ್ಷಿ ಎಂದರು. ಈ ವೇಳೆ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಪ್ರಕಾಶನದ ಪ್ರತಿಭಾ ಛಾಯಪತಿ ಉಪಸ್ಥಿತರಿದ್ದರು. ಚಿಂತಕಿ ಮೀನಾ ಮೈಸೂರು ಪ್ರಶ್ನಾವಳಿ ನಡೆಸಿಕೊಟ್ಟರು.

ಹಸಿರು ನಮ್ಮ ಉಸಿರು

ಮೈಸೂರು ಸಾಹಿತ್ಯ ಉತ್ಸವ-2024ರ 8ನೇ ಆವೃತ್ತಿ ಸಂಭ್ರಮ

ಸಿನಿಮಾದ ಪಾತ್ರ, ಚಿತ್ರೀಕರಣ ಸ್ಥಳದ ತೀರ್ಮಾನ ಆಕಸ್ಮಿಕವಲ್ಲ, ಹುಡುಕಾಟ

ಖ್ಯಾತ ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಸ್ಪಷ್ಟನೆ



ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಭಾನುವಾರ ಮೈಸೂರು ಲಿಟರರಿ ಫೆಸ್ಟ್ ಆಯೋಜಿಸಿದ್ದ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ನಡೆದ ಬಿಂಬ ಮತ್ತು ಬಿಂಬನ ಕುರಿತ ವಿಚಾರ ಗೋಷ್ಠಿಯಲ್ಲಿ ಖ್ಯಾತ ಸಿನಿಮಾ ನಿರ್ದೇಶಕ ಗಿರೀಶ್ ಕಾಸರವಳ್ಳಿ ಮಾತನಾಡಿದರು. ಲೇಖಕ ಗೋಪಾಲಕೃಷ್ಣ ಪೈ ಹಾಗೂ ಚಿತ್ರನಟಿ ದೀಪಾ ರವಿಶಂಕರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜು.7(ಬಿಎಲ್‌ಯು)– ಸಿನಿಮಾದಲ್ಲಿ ಬರುವ ಪಾತ್ರಗಳು ಹಾಗೂ ಚಿತ್ರೀಕರಿಸುವ ಸ್ಥಳಗಳ ಪರಿಕಲ್ಪನೆ ಆಕಸ್ಮಿಕವಾಗಿ ಹುಟ್ಟುವುದಿಲ್ಲ, ಬದಲಿಗೆ ಹುಡುಕಾಟದಿಂದ ತೀರ್ಮಾನವಾಗುತ್ತದೆ ಎಂದು ಖ್ಯಾತ ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ತಿಳಿಸಿದರು.

ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಇಂದು ಮೈಸೂರು ಲಿಟರರಿ ಫೆಸ್ಟ್ ಆಯೋಜಿಸಿದ್ದ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ನಡೆದ 'ಬಿಂಬ ಮತ್ತು ಬಿಂಬನ' ಕುರಿತ ವಿಚಾರ ಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿತ್ರಕಥೆ ಬರೆಯುವ ವೇಳೆಯೇ ಪಾತ್ರಗಳ ಪರಿಕಲ್ಪನೆ ಮೂಡುತ್ತದೆ. ಯಾವ ಪಾತ್ರಗಳೂ ಆಕಸ್ಮಿಕವಾಗಿ ಹುಟ್ಟುವುದಿಲ್ಲ ಎಂದರು.

ಚಿತ್ರೀಕರಣದ ಸ್ಥಳಗಳು ಕೂಡ ಚಿತ್ರಕಥೆ ಬರೆಯುವ ಸಂದರ್ಭದಲ್ಲಿ ನಿರ್ದೇಶಕನ ಪರಿಕಲ್ಪನೆಗೆ ಬರುತ್ತದೆ. ತರುವಾಯ ನಿರ್ದೇಶಕ ಆ ಜಾಗವನ್ನು ಹುಡುಕುತ್ತಾ ಹೋಗುತ್ತಾನೆ. ಆದ ಕಾರಣ ಸಿನಿಮಾದ ಯಾವುದೇ ಪಾತ್ರ ಅಥವಾ ಚಿತ್ರೀಕರಣದ ಸ್ಥಳಗಳು ಆಕಸ್ಮಿಕವಾಗಿ ಹುಟ್ಟುವುದಿಲ್ಲ. ಅದೊಂದು ಹುಡುಕಾಟವಾಗಿರುತ್ತದೆ ಎಂದರು.


ಸಿನಿಮಾದ ಪಾತ್ರ ಹಾಗೂ ಚಿತ್ರೀಕರಣದ ಸ್ಥಳ ಎರಡೂ ಒಂದಕ್ಕೊಂದು ತಾಳೆಯಾದ ನಂತರ ಚಿತ್ರೀಕರಣಕ್ಕೆ ನಿರ್ದೇಶಕ ಸಜ್ಜಾಗುತ್ತಾನೆ. ಇದರಿಂದ ಚಿತ್ರಕಥೆ ಬರೆಯಲು ತಿಂಗಳುಗಟ್ಟಲೆ ಸಮಯ ಹಿಡಿಯುತ್ತದೆ. ಇದು ಕೆಲವು ದಿನಗಳಲ್ಲಿ ಮುಗಿಯುವ ಪ್ರಕ್ರಿಯೆಯಲ್ಲ ಎಂದರು.

ಸಿನಿಮಾದಲ್ಲಿ ಬಹಳಷ್ಟು ವಿಚಾರಗಳನ್ನು ಹೇಳಿ ಅದರ ಅರ್ಥವನ್ನು ವೀಕ್ಷಕನ ಊಹೆಗೆ ಬಿಡಲಾಗುತ್ತದೆ. ಇದರಿಂದ ಸಿನಿಮಾಗೆ ಪ್ರೇಕ್ಷಕ ಬಹಳ ಮುಖ್ಯವಾಗಿರುತ್ತಾನೆ. ಪ್ರೇಕ್ಷಕನಿಗಾಗಿಯೇ ಸಿನಿಮಾ ಮಾಡುವುದರಿಂದ ಅವನ ಅಭಿರುಚಿಗೆ ತಕ್ಕಂತೆ ಸಿನಿಮಾ ಮಾಡಬೇಕಿದೆ ಎಂದರು.

ಬೇರೆ ಯಾವುದೇ ಕಲೆಗಿಲ್ಲದ ಶಕ್ತಿ ಸಿನಿಮಾಗೆ ಇದೆ. ಆದ ಕಾರಣದಿಂದಲೇ ಸಿನಿಮಾ ಹೆಚ್ಚು ಜನರನ್ನು ಆಕರ್ಷಿಸಲಿದೆ. ಸಿನಿಮಾದಲ್ಲಿ ಕಥೆಗಿಂತ ಕಥಾನಕ ಮುಖ್ಯವಾಗಿರುತ್ತದೆ. ಸಾಹಿತ್ಯದಲ್ಲಿ ಮರ ಎಂದು ಮಾತ್ರ ಬರೆಯಲಾಗಿರುತ್ತದೆ. ಆದರೆ ಸಿನಿಮಾದಲ್ಲಿ ಆ ಮರ ಯಾವುದು ಎಂದು ಪ್ರೇಕ್ಷಕನಿಗೆ ದೃಶ್ಯದ ಮೂಲಕ ಹೇಳಬೇಕಾಗುತ್ತದೆ ಎಂದು ಗಿರೀಶ್ ಕಾಸರವಳ್ಳಿ ಹೇಳಿದರು.

ಇದೇ ವೇಳೆ ಮಾತನಾಡಿದ ಲೇಖಕ ಗೋಪಾಲಕೃಷ್ಣ ಪೈ, ಕಾಲ ಬದಲಾದಂತೆ ಪ್ರತಿಯೊಂದು ಕಲೆಯಲ್ಲೂ ನವ ನವೀನತೆ ಮೂಡುತ್ತದೆ. ಅದರಂತೆ ಸಿನಿಮಾದಲ್ಲೂ ಬದಲಾವಣೆ ಸಹಜವಾಗಿದೆ. ಇದರಿಂದ ಇತ್ತೀಚೆಗೆ ಓಟಿಟಿ ಸೇರಿದಂತೆ ಹಲವು ರೀತಿಯ ಸಿನಿಮಾ ವೀಕ್ಷಣೆಯ ಸೌಲಭ್ಯ ಪ್ರೇಕ್ಷಕನಿಗೆ ದೊರಕಿದೆ ಎಂದರು. ಸಿನಿಮಾ ನಟಿ ದೀಪಾ ರವಿಶಂಕರ್ ವಿಚಾರ ಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.

ಗಮನ ಸೆಳೆದ 'ರಾವಣ ತಂಗಿ' ಪ್ರಸಂಗದ ಯಕ್ಷಗಾನ ಪದ್ಯ




ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ಏಕವ್ಯಕ್ತಿ ತಾಳಮದ್ದಳೆ ಮೂಲಕ 'ರಾವಣ ತಂಗಿ' ಪ್ರಸಂಗದ ಯಕ್ಷಗಾನ ಪದ್ಯವನ್ನು ಆಶು ನಾಟಕ ರೂಪದಲ್ಲಿ ಪ್ರಸ್ತುತಪಡಿಸಲಾಯಿತು. (ಎಡದಿಂದ) ದಿವಾಕರ ಹೆಗಡೆ, ಚಿನ್ಮಯ್, ಪ್ರಸನ್ನ ಹೆಗಡೆ ಉಪಸ್ಥಿತರಿದ್ದರು.

ಮೈಸೂರು, ಜು.7(ಜಿಎ)–ಏಕವ್ಯಕ್ತಿ ತಾಳಮದ್ದಳೆಯಲ್ಲಿ 'ರಾವಣ ತಂಗಿ' ಪ್ರಸಂಗವನ್ನು ಯಕ್ಷಗಾನ ಪದ್ಯದ ಮೂಲಕ ಪ್ರಸ್ತುತಪಡಿಸುವ ಮೂಲಕ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ಎಲ್ಲರ ಗಮನ ಸೆಳೆದರು.

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ದಿವಾಕರ ಹೆಗಡೆ ಅವರ ಪ್ರಸ್ತುತಿಯಲ್ಲಿ ದಂಡಾರಣ್ಯದಲ್ಲಿ ಶೂರ್ಪಣಕಿಗೆ ಮನುಷ್ಯರ ವಾಸನೆ ಮೂಗಿಗೆ ಬಡಿದು ಅವರನ್ನು ಭಕ್ಷಿಸುವ ಆಲೋಚನೆಯಲ್ಲಿ ಹತ್ತಿರ ಬಂದು ನೋಡಿದಾಗ ಅವಳ ಕಣ್ಣಿಗೆ ರಾಮ–ಲಕ್ಷ್ಮಣ ಸೀತೆ ಬೀಳುತ್ತಾರೆ. ರಾಮನ ರೂಪಕ್ಕೆ ಮನಸೋತು ಅವನಲ್ಲಿ ಪ್ರೇಮನಿವೇದನೆ ಮಾಡುತ್ತಾಳೆ. ರಾಮ ಲಕ್ಷ್ಮಣನ ಕಡೆಗೆ ತೋರಿಸುತ್ತಾನೆ. ಆಗ ಲಕ್ಷ್ಮಣನಿಂದ ಅವಮಾನಿತಳಾದ ಶೂರ್ಪನಖಿಯೂ ಸೀತೆಯನ್ನು ಹೊತ್ತೊಯ್ದು ರಾಮನ ದಾಂಪತ್ಯವನ್ನು ಕೆಡಿಸುವ ಪ್ರತಿಜ್ಞೆ ಮಾಡುತ್ತಾಳೆ. ಈ ಸಂದರ್ಭವನ್ನು ತಾಳಮದ್ದಳೆ ಮೂಲಕ ಆಶು ನಾಟಕ ರೂಪದಲ್ಲಿ ನಡೆಸಿಕೊಟ್ಟರು. ಇವರಿಗೆ ಭಾಗವತರಾದ ಪ್ರಸನ್ನ ಹೆಗಡೆ ಮತ್ತು ಮದ್ದಲೆಯಲ್ಲಿ ಚಿನ್ಮಯ್ ಸಾಥ್ ನೀಡಿದರು.

ವಿಮರ್ಶಕರು ಪಾಂಡಿತ್ಯ, ಸೃಜನಶೀಲತೆಯನ್ನು ಸಮನಾಗಿ ಕಾಣಬೇಕು

ಹಿರಿಯ ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಅಭಿಮತ


ವಸಂತ ಭಾರದ್ವಾಜ

ಮೈಸೂರು, ಜು.7(ಎಸ್‌ಪಿಎನ್)– ಓರ್ವ ವಿದ್ವಾಂಸನಿಗೆ ಪಾಂಡಿತ್ಯ ಇದ್ದರೇನೆ ಆತನಲ್ಲಿನ ಪ್ರತಿಭೆ, ಸೃಜನಶೀಲತೆ ಹೊರಬರಲು ಸಾಧ್ಯ. ಹಾಗಾಗಿ ಪಾಂಡಿತ್ಯ, ಸೃಜನಶೀಲತೆಯನ್ನು ವಿಮರ್ಶಕರು ಸಮಾನಾಗಿ ಕಾಣಬೇಕು ಎಂದು ಹಿರಿಯ ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಅಭಿಪ್ರಾಯಪಟ್ಟರು.

ಮೈಸೂರು ಸಾಹಿತ್ಯ ಸಂಭ್ರಮದ 8ನೇ ಆವೃತ್ತಿ ಎರಡನೇ ದಿನದ ಏಳನೇ ಗೋಷ್ಠಿಯಲ್ಲಿ 'ಭಾಷಾ ಪಾಂಡಿತ್ಯ ಸೃಜನಶೀಲತೆಯನ್ನು ಮಸುಕು ಮಾಡುವುದೇ?' ವಿಷಯ ಕುರಿತು ಮಾತನಾಡಿದರು.

ಪಾಂಡಿತ್ಯ ಮತ್ತು ಪ್ರತಿಭೆಯನ್ನು ದಾಯಾದಿಗಳಾಗಿ ಪ್ರದರ್ಶಿಸುವುದು ತರವಲ್ಲ. ಅಲ್ಲದೆ, ಭಾಷಾ ಪಾಂಡಿತ್ಯದಿಂದ ಸೃಜನಶೀಲತೆ ನಶಿಸುವುದಿಲ್ಲ. ಕುಮಾರ ವ್ಯಾಸ, ಪಂಪ, ರನ್ನ ಲೇಖಕರಲ್ಲಿದ್ದ ಪಾಂಡಿತ್ಯದಿಂದಾಗಿ ಉತ್ತಮ ಗ್ರಂಥಗಳನ್ನು ರಚಿಸಲು ಸಾಧ್ಯವಾಯಿತು. ಈ ಗ್ರಂಥದಲ್ಲಿನ ಬರವಣಿಗೆಯಲ್ಲಿ ಸೃಜನಶೀಲತೆ ಇಲ್ಲವೆ ಎಂದು ಪ್ರಶ್ನಿಸಿದರಲ್ಲದೆ, ವಿಮರ್ಶಕರು ಪಾಂಡಿತ್ಯ ಮತ್ತು ಸೃಜನಶೀಲತೆಯನ್ನು ಸಮಾಂತರವಾಗಿ ನೋಡಬೇಕು ಎಂದು ಹೇಳಿದರು.

ಸೃಜನಶೀಲತೆ ಬರಹಗಾರರು ಶಾಸ್ತ್ರಬದ್ಧವಾಗಿ ರಚಿಸಬೇಕು. ಭಾಮಿನಿ, ಷಟ್ಪದಿಗಳಲ್ಲಿ ರಚಿಸಬೇಕು ಎಂಬುದು ನನ್ನ ವಾದ ಅಲ್ಲ. ಬದಲಾಗಿ ಯಾವುದೇ ಸಾಹಿತ್ಯ ರಚನೆಯಾಗಬೇಕಾದರೆ, ಆ ಲೇಖಕನಿಗೆ ಪಾಂಡಿತ್ಯ ಇರಬೇಕು. ಕಥಾವಸ್ತು ನಿರೂಪಣೆಯಲ್ಲಿ ಪಾಂಡಿತ್ಯ, ಸೃಜನಶೀಲತೆ ಎರಡೂ ಸಮಾನಾಗಿರಬೇಕು ಎಂಬುದು ನನ್ನ ವಾದವಾಗಿದೆ ಎಂದರು.

ಭಾಷೆಗೆ ಅನುಗುಣವಾಗಿ ಪಾಂಡಿತ್ಯ ಇರಬೇಕು. ಇದಕ್ಕೆ ಅನುಗುಣವಾಗಿ ಸೃಜನಶೀಲತೆ ಇರಬೇಕು. ಭಾಷಾ ಪಾಂಡಿತ್ಯ ಅಂದಾಕ್ಷಣ, ಹಳೆಗನ್ನಡ, ನಡುಗನ್ನಡ, ಆಧುನಿಕ ಕನ್ನಡವನ್ನು ವಿವೇಚನೆಗೊಳಪಡಿಸಬೇಕು. ಜೊತೆಜೊತೆಗೆ ಜಾನಪದ ಸಾಹಿತ್ಯ, ಪ್ರಾದೇಶಿಕ ಭಾಷಾ ಸಾಹಿತ್ಯಕ್ಕೂ ಹೆಚ್ಚಿನ ಮಾನ್ಯತೆ ನೀಡಬೇಕು. ಡಾ.ಎಸ್.ಎಲ್.ಭೈರಪ್ಪನವರ ಸಾರ್ಥ ಅವರ ಕಾದಂಬರಿ, ದೇವನೂರ ಮಹದೇವ ಅವರ ಕುಸುಮಾಬಾಲೆಯಲ್ಲಿ ಭಾಷಾ ಪಾಂಡಿತ್ಯ ಪರಿಗಣನೆಗೆ ತೆಗೆದುಕೊಳ್ಳಬೇಕು ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಟಿವಿ ಮತ್ತು ಮುದ್ರಾ ಮಾಧ್ಯಮಗಳಲ್ಲಿ ಪ್ರಕಟವಾಗುವ ಸುದ್ದಿಗಳ ಭಾಷಾ ಮೇಲಿನ ಆಕ್ರಮಣ ನಡೆಯುತ್ತಿದ್ದು, ಇದರಿಂದ ಪದಗಳ ವ್ಯಾಖ್ಯಾನವೇ ಬದಲಾಗುತ್ತಿದೆ. ಹಾಗಾಗಿ ಭಾಷೆ ಮೇಲೆ ಹಿಡಿತ ಸಾಧ್ಯವಾಗಬೇಕಾದರೆ, ಮಾಧ್ಯಮಗಳಲ್ಲಿ ವ್ಯಾಕರಣ ಬದ್ಧ ಸುದ್ದಿಗಳ ಬಿತ್ತರಿಸಲು ಹೆಚ್ಚಿನ ಗಮನಹರಿಸಬೇಕು. ಪಾಂಡಿತ್ಯ, ಪ್ರತಿಭೆ, ಸೃಜನಶೀಲತೆ ಹೆಸರಿನಲ್ಲಿ ಭಾಷೆಯನ್ನು ಕೊಲ್ಲಬಾರದು ಎಂದು ಮನವಿ ಮಾಡಿದರು.

ಸಭಾಂಗಣವನ್ನು ನಗೆಗಡಲಲ್ಲಿ ತೇಲಿಸಿದ ಗಂಗಾವತಿ ಪ್ರಾಣೇಶ್


'ನಗಿಸುವವನ ಮನದ ಮಾತು' ಗೋಷ್ಠಿಯಲ್ಲಿ ಹಾಸ್ಯ ಕಲಾವಿದ ಗಂಗಾವತಿ ಪ್ರಾಣೇಶ್ ಅವರೊಂದಿಗೆ ನಡೆದ ಸಂವಾದದಲ್ಲಿ ಡಾ.ಮಾಧುರಿ ಕುಲಕರ್ಣಿ ಪಾಲ್ಗೊಂಡಿದ್ದರು.

ಮೈಸೂರು,ಜು.7(ಎಂಟಿವೈ)–ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ ವತಿಯಿಂದ ಆಯೋಜಿಸಿದ್ದ 'ಮೈಸೂರು ಸಾಹಿತ್ಯ ಸಂಭ್ರಮ'ದಲ್ಲಿ ಹಾಸ್ಯ ಕಲಾವಿದ ಗಂಗಾವತಿ ಪ್ರಾಣೇಶ್ ಅವರ ಹಾಸ್ಯ ಗೋಷ್ಠಿ ಸಭಿಕರನ್ನು ನಗೆಗಡಲಲ್ಲಿ ತೇಲುವಂತೆ ಮಾಡಿತು.

ಮೈಸೂರಿನ ಸದರನ್ ಸ್ಟಾರ್ ಹೋಟೆಲ್ ಆವರಣದ ಗಾರ್ಡೇನಿಯಾ ಬಳಿ ನಡೆದ 'ನಗಿಸುವವನ ಮನದ ಮಾತು' ಗೋಷ್ಠಿಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ತಾವು ಹಾಸ್ಯ ಕಲಾವಿದನಾದ ಪರಿಯನ್ನು ಹಾಸ್ಯಮಯವಾಗಿಯೇ ಕೆಲ ಸನ್ನಿವೇಶವನ್ನು ವಿವರಿಸುತ್ತಾ ಸಭಿಕರನ್ನು ನಗಿಸಿದರಲ್ಲದೆ, ತಮ್ಮ ಅನುಭವ ಹಂಚಿಕೊಂಡರು. ತನ್ನನ್ನು ತಾನು ನೋಡಿಕೊಂಡು ನಗುವುದೇ ನಿಜವಾದ ಹಾಸ್ಯ, ಮತ್ತೊಬ್ಬರನ್ನು ನೋಡಿ ನಗುವುದು ಕ್ರೂರತನವೂ, ಅಸಂಸ್ಕೃತಿಯೂ ಆಗಿದೆ. ಮತ್ತೊಬ್ಬರನ್ನು ನಗಿಸಬೇಕೇ ಹೊರತು ಅವರನ್ನು ನೋಡಿ ನಗಬಾರದು ಎಂದು ಸಲಹೆ ನೀಡಿದರು.

ನನ್ನ ತಾಯಿಯಿಂದ ನನಗೆ ಸಾಹಿತ್ಯದ ಅಭಿರುಚಿ ಮೂಡಿತು. ಈ ವೇಳೆ ಗ್ರಂಥಾಲಯದಲ್ಲಿ 10 ಪೈಸೆಗೆ ಒಂದು ಕಾದಂಬರಿ ಪುಸ್ತಕ ಓದಲು ಪಡೆಯುತ್ತಿದ್ದೆ. ನಮ್ಮ ಅಮ್ಮ ಗ್ರಂಥಾಲಯದಿಂದ ಕೃತಿಗಳನ್ನು ಪಡೆದು ಓದುತ್ತಿದ್ದರು. ನಂತರ ನಾನು ಸಹ ಓದಲು ಪ್ರಾರಂಭಿಸಿದೆ. ಆ ಮೂಲಕ ಸಾಹಿತ್ಯದ ಅಭಿರುಚಿ ನನಗೆ ಒಲಿಯಿತು ಎಂದು ತಿಳಿಸಿದರು.

ಪ್ರಸ್ತುತ ಸಂದರ್ಭದಲ್ಲಿ ಓದುವ ಅಭಿರುಚಿ ಕಡಿಮೆಯಾಗುತ್ತಿದೆ. ನನ್ನ 150 ಪುಸ್ತಕಗಳನ್ನು ಮಾರಾಟಕ್ಕೆ ಇಟ್ಟರೆ. ಅದರಲ್ಲಿ 20ರಿಂದ 30 ಕೃತಿಗಳು ಮಾತ್ರ ಮಾರಾಟವಾಗುತ್ತದೆ. ಮಾರಾಟವಾದ ಪುಸ್ತಕದಲ್ಲೂ ಓದುವುದಕ್ಕಿಂತ ಆಟೋಗ್ರಾಫ್ ಪಡೆಯುವ ಉದ್ದೇಶದಿಂದ ಪುಸ್ತಕಗಳನ್ನು ಖರೀದಿಸಿರುವವರು ಹೆಚ್ಚಾಗಿರುತ್ತಾರೆ ಎಂದು ಹಾಸ್ಯ ಚಟಾಕಿ ಹಾರಿಸಿದರು. ನನ್ನನ್ನು ಕೆಲವರು ಅಭಿನವ ಬೀಚಿ ಎಂದು ಕರೆಯುತ್ತಾರೆ. ನನ್ನನ್ನು ಹಾಗೆ ಕರೆಯಬೇಡಿ ಎಂದು ಕೋರುತ್ತೇನೆ. ಬೀಚಿ ಅವರು ಮಾತಿನ ಮೂಲಕ ಸಮಾಜದ ಓರೆಕೋರೆಗಳನ್ನು ತಿದ್ದಿದರು. ಪ್ರತಿಯೊಬ್ಬರೂ ಒಬ್ಬೊಬ್ಬ ಲೇಖಕನನ್ನು ಆಯ್ಕೆ ಮಾಡಿಕೊಳ್ಳಬೇಕು. ನಾನು ಬೀಚಿ ಅವರನ್ನು ಆಯ್ಕೆ ಮಾಡಿಕೊಂಡಿದ್ದೇನೆ. 33 ವರ್ಷಗಳಿಂದ ನಾನು ಅವರ ಸಾಹಿತ್ಯವನ್ನು ಪ್ರಚಾರ ಮಾಡುತ್ತಾ ಬಂದಿದ್ದೇನೆ. ಕಣ್ಣಿರುವುದೇ ಓದುವುದಕ್ಕೆ ಎಂದು ಭಾವಿಸಿರುವವನು ನಾನು. ಕಣ್ಣಿರುವವರೆಗೆ ಓದಿ, ಆಮೇಲೆ ಪ್ರವಚನ ಕೇಳಿ. ಶಾಲಾ ದಿನಗಳಲ್ಲೇ ನಾನು ಬೀಚಿ ಅವರ ಕೃತಿಗಳನ್ನು ಓದಿದೆ. ಶಾಲೆಯ ಓದು ನನ್ನನ್ನು ಉದ್ಧಾರ ಮಾಡುವುದಿಲ್ಲ ಎಂದು ತಿಳಿದು ಬೀಚಿ ಕೃತಿಗಳನ್ನು ಓದಿದೆ. ಪರೀಕ್ಷೆಯಲ್ಲಿ ನಾನು 35 ಮಾರ್ಕ್ಸ್‌ನ ವಿದ್ಯಾರ್ಥಿ. ಆದರೆ, ಈಗ ನೀವು ನನಗೆ ಲಕ್ಷಗಟ್ಟಲೇ ಮಾರ್ಕ್ಸ್ ನೀಡುತ್ತಿದ್ದೀರಿ ಎಂದರು. ಸಂವಾದ ಕಾರ್ಯಕ್ರಮವನ್ನು ಡಾ.ಮಾಧುರಿ ಕುಲಕರ್ಣಿ ಅವರು ನಡೆಸಿಕೊಟ್ಟರು.

ಅಲೆಮಾರಿ ಕಲಾವಿದರ ಚಿಂತಾಜನಕ ಸ್ಥಿತಿ ಅನಾವರಣ


'ಅಜ್ಞಾತ ಅಲೆಮಾರಿ ಕಲಾವಿದರ ಜೊತೆ 60 ನಿಮಿಷಗಳು' ಕಾರ್ಯಕ್ರಮದಲ್ಲಿ ತಮ್ಮ ಕಲೆಯನ್ನು ಪ್ರಸ್ತುತ ಪಡಿಸಿದ ಕಲಾವಿದರು. ಆಕಾಶವಾಣಿ ಸಹಾಯಕ ನಿರ್ದೇಶಕ ಅಬ್ದುಲ್ ರಶೀದ್ ಉಪಸ್ಥಿತರಿದ್ದರು.

ಮೈಸೂರು, ಜು.7(ಎಂಕೆ)– ಮೈಸೂರು ಸಾಹಿತ್ಯ ಉತ್ಸವದಲ್ಲಿ ಕಲಾ ಪ್ರೌಢಿಮೆ ಮೆರೆದ ಅಲೆಮಾರಿ ಕಲಾವಿದರು, ತಮ್ಮ ಬದುಕಿನ ಚಿಂತಾಜನಕ ಸ್ಥಿತಿಗತಿಯನ್ನು ಎಳೆ ಎಳೆಯಾಗಿ ಬಿಚ್ಚಿಟ್ಟರು.

ಮೈಸೂರು ಆಕಾಶವಾಣಿ ಸಹಾಯಕ ನಿರ್ದೇಶಕ ಅಬ್ದುಲ್ ರಶೀದ್ ನಡೆಸಿಕೊಟ್ಟ 'ಅಜ್ಞಾತ ಅಲೆಮಾರಿ ಕಲಾವಿದರ ಜೊತೆ 60 ನಿಮಿಷಗಳು' ಕಾರ್ಯಕ್ರಮದಲ್ಲಿ ಅಲೆಮಾರಿ ಕಲಾವಿದರು ತಮ್ಮ ಕಲೆಯ ಜೊತೆಗೆ ಎದುರಿಸುತ್ತಿರುವ ಸಂಕಷ್ಟವನ್ನು ತಿಳಿಸಿದರು.

ದೊಂಬರ ಸಮುದಾಯದ ನರಸಿಂಹ ಮತ್ತು ರಾಣಿ, ತಾವು ಚಿಕ್ಕ ವಯಸ್ಸಿನಲ್ಲಿ ಬೀದಿ ಬೀದಿಯಲ್ಲಿ ದೊಂಬರಾಟವಾಡುತ್ತಿದ್ದ ಕುರಿತು ತಿಳಿಸಿದರು. ಹೆಳವರಸೊಲ್ಲಿನ ಮಲ್ಲಯ್ಯ, ಪುಟ್ಟಯ್ಯ ಮತ್ತವರ ತಂಡ ಕುಲಾಂತರಿ ಹಾಡುಗಳನ್ನು ಹಾಡುವ ಮೂಲಕ ಗಮನ ಸೆಳೆದರು. ಹಾಗೆಯೇ ವಯೋಲಿನ್ ಕಲಾವಿದ ಸೈಯದ್ ಮೌಲಾ, 'ರಘುಪತಿ ರಾಘವ', 'ಬೊಂಬೆ ಹೇಳುತೈತೆ' ಸೇರಿದಂತೆ ಕೆಲ ಸುಪ್ರಸಿದ್ಧ ಹಾಡುಗಳನ್ನು ನುಡಿಸುವ ಮೂಲಕ ಶಿಳ್ಳೆ–ಚಪ್ಪಾಳೆ ಗಿಟ್ಟಿಸಿದರು. ಇದರ ನಡುವೆ ಆಕಾಶವಾಣಿ ಸಹಾಯಕ ನಿರ್ದೇಶಕ ಅಬ್ದುಲ್ ರಶೀದ್, ಇವರು ಅಜ್ಞಾತ ಅಲೆಮಾರಿ ಕಲಾವಿದರಲ್ಲ ನಮ್ಮ ನಡುವಿನ ಗಂಧರ್ವರು ಎನ್ನುವ ಮೂಲಕ ಕಲಾವಿದರ ಹಿರಿಮೆ ಹೆಚ್ಚಿಸಿದರು.

ಹಾವುಗಳ ಸ್ಥಳಾಂತರ ಸಂರಕ್ಷಣೆಯ ಸೂಕ್ತ ವಿಧಾನವಲ್ಲ

ಹರ್ಪಿಟಾಲಜಿಸ್ಟ್ ಗೆರ್ರಿ ಮಾರ್ಟಿನ್ ಅಭಿಮತ


ಮೈಸೂರು ಲಿಟರೇಚರ್ ಫೆಸ್ಟ್‌ನಲ್ಲಿ ಭಾನುವಾರ 'ಹಾವುಗಳೊಂದಿಗೆ ವಾಸ' ಕುರಿತು ಹರ್ಪಿಟಾಲಜಿಸ್ಟ್ ಗೆರ್ರಿ ಮಾರ್ಟಿನ್ ಮಾತನಾಡಿದರು.

ಮೈಸೂರು,ಜು.7(ಪಿಎಂ)– ಹಾವುಗಳನ್ನು ಸ್ಥಳಾಂತರ ಮಾಡುವುದು ಅವುಗಳ ಸಂರಕ್ಷಣೆಯ ಸೂಕ್ತ ವಿಧಾನವಲ್ಲ. ಸ್ಥಳಾಂತರ ಮಾಡಿದ ಹಾವುಗಳು ಒಂದೆರಡು ದಿನಗಳಲ್ಲಿ ಸಾವನ್ನಪ್ಪುತ್ತವೆ ಎಂದು ಅಧ್ಯಯನಗಳಲ್ಲಿ ಕಂಡುಬಂದಿದೆ ಎಂದು ಹರ್ಪಿಟಾಲಜಿಸ್ಟ್ ಗೆರ್ರಿ ಮಾರ್ಟಿನ್ ಹೇಳಿದರು.

ಮೈಸೂರು ಲಿಟರೇಚರ್ ಫೆಸ್ಟ್‌ನಲ್ಲಿ 'ಹಾವುಗಳೊಂದಿಗೆ ವಾಸ (Living With Snakes)' ಕುರಿತು ಭಾನುವಾರ ನಡೆದ ಆಂಗ್ಲ (ಇಂಗ್ಲಿಷ್) ಚರ್ಚಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಹಾವುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಬಿಡುವುದು ಅವುಗಳ ರಕ್ಷಣೆಯ ವಿಧಾನ ಎನ್ನುವುದು ತಪ್ಪು. ತಮ್ಮ ವಾಸಸ್ಥಾನದಲ್ಲಿ ವಿಕಾಸಗೊಳ್ಳುವ ಲಕ್ಷಣಗಳನ್ನು ಹಾವುಗಳು ಹೊಂದಿರುತ್ತವೆ. ಅವುಗಳನ್ನು ಹಿಡಿದು (ಅವುಗಳ ವಾಸಸ್ಥಾನದಿಂದ) ಮತ್ತೊಂದು ಸ್ಥಳಕ್ಕೆ ಬಿಟ್ಟರೆ ಅವುಗಳ ಬದುಕು ಕೊನೆಗೊಳ್ಳುತ್ತದೆ ಎಂದರು.

ಇಂದು ನಮಗೆ ಸಹನೆಯ ಕೊರತೆ ಇದೆ. ನಾವು ಹಾವು ಸೇರಿದಂತೆ ಯಾವುದೇ ಪ್ರಾಣಿ ಕಂಡರೂ ಅವುಗಳನ್ನು ಬೇರೆ ಸ್ಥಳಕ್ಕೆ ಸ್ಥಳಾಂತರಿಸಲು ಮುಂದಾಗುತ್ತೇವೆ. ನಾವು ಪ್ರಾಣಿಗಳೊಂದಿಗೆ ಬದುಕುವ ಕಲೆ ಕಲಿಯಬೇಕು. ಅದೇ ನಿಜವಾದ ಸಹಬಾಳ್ವೆ ಎಂದು ತಿಳಿಸಿದರು.

ಹಾವುಗಳು ಕಚ್ಚಿದ ವ್ಯಕ್ತಿಯನ್ನು ಕೂಡಲೇ ಆಸ್ಪತ್ರೆಗೆ ಸೇರಿಸಿ ಸೂಕ್ತ ಚಿಕಿತ್ಸೆ ಕೊಡಿಸಬೇಕು. ಅದರ ಬದಲು ಮೌಢ್ಯಾಚರಣೆಯಲ್ಲಿ ತೊಡಗಿದರೆ, ಯುಟ್ಯೂಬ್ ಸೇರಿದಂತೆ ಮೊದಲಾದ ಸಾಮಾಜಿಕ ಜಾಲತಾಣದಲ್ಲಿ ಏನು ಮಾಡಬೇಕೆಂದು ಹುಡುಕುತ್ತಾ ಕುಳಿತರೆ ಪ್ರಯೋಜನವಿಲ್ಲ ಎಂದು ಎಚ್ಚರಿಸಿದರು.

ಮುಂಗಾರು ಮಳೆಯ ಸಂದರ್ಭದಲ್ಲಿ ಹೊಸ ಬಡಾವಣೆಗಳಲ್ಲಿ ಜೋರಾಗಿ ಶಬ್ದ ಮಾಡುವ ಕಪ್ಪೆಗಳನ್ನು ಸ್ಥಳಾಂತರ ಮಾಡಬೇಕೆಂದು ಅಲ್ಲಿನ ನಿವಾಸಿಗಳಿಂದ ನನಗೆ ಸಾಕಷ್ಟು ಕರೆ ಬರುತ್ತವೆ. ಆದರೆ ಇವರಿಗೂ ಪೂರ್ವದಲ್ಲೇ ಅವು ಅಲ್ಲಿಯೇ ವಾಸವಾಗಿರುತ್ತವೆ. ಇದನ್ನು ಅವರು ಆಲೋಚನೆ ಮಾಡುವುದಿಲ್ಲ. ಮಾನವರು ಇತರ ಎಲ್ಲಾ ಜೀವ ಸಂಕುಲದ ಮಾಲೀಕರೆಂಬಂತೆ ವರ್ತಿಸುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಅನುವಾದಕರು ಪ್ರಕ್ರಿಯೆ, ಬರಹಗಾರನ ಭಾಷೆಯೊಂದಿಗಿನ ಸಂಬಂಧ ಗಮನಿಸಬೇಕು: ಲೇಖಕ ವಿವೇಕ್ ಶಾನ್‌ಭಾಗ್



ಮೈಸೂರು ಸಾಹಿತ್ಯ ಸಂಭ್ರಮದ ಗೋಷ್ಠಿಯೊಂದರಲ್ಲಿ 'ಸಕೀನಾ ಕಿಸ್ಸ್' ಕೃತಿ ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದ ಕುರಿತು ವಿವರಿಸಲಾಯಿತು. ಈ ವೇಳೆ (ಎಡದಿಂದ) ವಿವೇಕ್ ಶಾನ್‌ಭಾಗ್, ಲೇಖಕಿ ಸೀತಾ ಭಾಸ್ಕರ್, ಅನುವಾದಕಿ ಜಯಶ್ರೀ ಜಗನಾಥ್ ಮತ್ತು ಅನುವಾದ ಶ್ರೀನಾಥ್ ಪೆರೋರ್ ಉಪಸ್ಥಿತರಿದ್ದರು.

ಮೈಸೂರು, ಜು.7(ಜಿಎ)–ತಮ್ಮ ಕೃತಿಗಳನ್ನು ಬೇರೆ ಭಾಷೆಗಳಿಗೆ ಅನುವಾದ ಮಾಡುವ ಮೊದಲು ಅನುವಾದಕರು ಸೃಜನಾತ್ಮಕ ಬರವಣಿಗೆಯಲ್ಲಿ ಒಳಗೊಂಡಿರುವ ಪ್ರಕ್ರಿಯೆ ಯಾವುದು ಮತ್ತು ಬರಹಗಾರನು ಭಾಷೆಯೊಂದಿಗೆ ಹೊಂದಿರುವ ಸಂಬಂಧವನ್ನು ಗಮನಿಸಬೇಕು ಎಂದು ಲೇಖಕ ವಿವೇಕ್ ಶಾನ್‌ಭಾಗ್ ತಿಳಿಸಿದರು.

ಮೈಸೂರು ಸಾಹಿತ್ಯ ಸಂಭ್ರಮದ ಗೋಷ್ಠಿಯೊಂದರಲ್ಲಿ ತಮ್ಮ ಸಕೀನಾ ಕಿಸ್ಸ್ ಕೃತಿ ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದ ಕುರಿತು ವಿವರಿಸಿ, ನಾನು ಇಂಗ್ಲಿಷ್‌ನಲ್ಲಿ ಚೆನ್ನಾಗಿ ಮಾತನಾಡಬಲ್ಲೆ ಎಂಬ ಕಾರಣಕ್ಕಾಗಿ ಕನ್ನಡದೊಂದಿಗೆ ಹೊಂದಿರುವ ಸಂಬಂಧವನ್ನು ಇಂಗ್ಲಿಷ್‌ನಲ್ಲಿ ಹೊಂದಿದ್ದೇನೆ ಎಂದಲ್ಲ. ಆದ್ದರಿಂದ ಶ್ರೀನಾಥ್ ಪೆರೋರ್ ಅವರನ್ನು ಕೊಚ್ಚಿಯಲ್ಲಿ ಭೇಟಿಯಾಗಿದ್ದು, ಸಕೀನಾ ಕಿಸ್ಸ್ ಕೃತಿಯನ್ನು ಭಾಷಾಂತರಿಸಲು ನಿಮಗೆ ಆಸಕ್ತಿ ಇದೆಯೇ? ಎಂದು ನಾನು ಅವರನ್ನು ಕೇಳಿದೆ. ಅವರು ಮೂರು ದಿನಗಳನ್ನು ತೆಗೆದುಕೊಂಡು ನಂತರ ಒಪ್ಪಿಕೊಂಡರು ಎಂದರು.

ಕೃತಿಯಲ್ಲಿ ರಾಜಕೀಯ ಅಂಶಗಳ ಕುರಿತು ಮಾತನಾಡಿದ ಅವರು, ನಾನು ಬರೆಯುವಾಗ ಅದು ಮಾತನಾಡುವ ವಿಧಾನವಲ್ಲ. ನಾನು ಹೇಳಿಕೆ ನೀಡಲು ಬರೆಯುವುದಿಲ್ಲ. ರಾಜಕೀಯ ಅಥವಾ ಸಾಮಾಜಿಕ ಅಥವಾ ಯಾವುದನ್ನಾದರೂ ಹೇಳಲು ಪ್ರಯತ್ನಿಸುವುದಿಲ್ಲ. ಆದರೆ, ಕೃತಿಯಲ್ಲಿ ಗಮನಿಸಿದಾಗ ಬರಹಗಾರನಿಗೆ ಇದು ಅನಿವಾರ್ಯವಾಗಿದೆ.

ಕಥೆಯನ್ನು ಬರೆಯುವಾಗ ನಮ್ಮ ಸುತ್ತ ನಡೆಯುತ್ತಿರುವ ಘಟನೆಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಇದು ರಾಜಕೀಯವಾಗಿರಬೇಕು ಮತ್ತು ನೀವು ಪ್ರತಿ ಬರಹವನ್ನು ರಾಜಕೀಯವೇ ಎಂದು ಕೇಳಿದರೆ ನಾವು ರಾಜಕೀಯ ಎಂದು ಹೇಳಿದಾಗ ನಾವು ತಪ್ಪಾಗಿ ಭಾವಿಸುತ್ತೇವೆ. ರಾಜಕೀಯದಲ್ಲಿ ಏನಾಗುತ್ತದೆ ಎಂಬುದರ ಬಗ್ಗೆ ಸಾಮಾನ್ಯ ತಿಳುವಳಿಕೆ ನಿಮಗೆ ತಿಳಿದಿದೆ. ಜೀವನದಲ್ಲಿ ನಾವು ರಾಜಕೀಯದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಅದು ಪಕ್ಷ ರಾಜಕಾರಣವಲ್ಲ ಆದ್ದರಿಂದ ವಿಭಿನ್ನ ರಾಜಕೀಯಗಳಿವೆ ಎಂದು ಬರಹಗಾರನಾಗಿ ನಾನು ಹೇಳಬಲ್ಲೆ ಎಂದು ವಿವರಿಸಿದರು.

ನಂತರ ಗೋಷ್ಠಿಯಲ್ಲಿ ಅನುವಾದಕ ಶ್ರೀನಾಥ್ ಪೆರೋರ್ ಮಾತನಾಡಿ, ಪುಸ್ತಕ ಅನುವಾದ ಮಾಡುವಾಗ ಪರಸ್ಪರರ ಪದವನ್ನು ಅರ್ಥಮಾಡಿಕೊಳ್ಳುವುದು ಮತ್ತು ಬರಹಗಾರರ ಆಂತರಿಕ ಪ್ರಪಂಚವನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ಅನುವಾದ ಮಾಡುವ ಮೊದಲು ಈ ಪುಸ್ತಕದ ಬಗ್ಗೆ ಇತರರೊಡನೆ ಚರ್ಚೆ ಮಾಡುವುದರಿಂದ ಅನುವಾದ ಮಾಡಲು ಸಹಾಯ ಮಾಡುತ್ತದೆ ಎಂದರು. ಗೋಷ್ಠಿಯನ್ನು ಲೇಖಕಿ ಸೀತಾ ಭಾಸ್ಕರ್ ಮತ್ತು ಅನುವಾದಕಿ ಜಯಶ್ರೀ ಜಗನಾಥ್ ನಡೆಸಿಕೊಟ್ಟರು.